
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

27 ಆಗಸ್ಟ್ 2014 ಪುಟ 20 ರೂ. 15/-



ಹಾಸ್ಯನಟನ ದುರಂತ ಸಾವು



ಪುರುಷತ್ವ ಪರೀಕ್ಷೆ

ತಾನೇ ತೋಡಿದ್ದ ಹಳ್ಳಕ್ಕೆ ಬಿದ್ದ

ಬೋಲಾ ಂಬ ಮಾರಿ




ಹುಬ್ಬಳ್ಳಿ
್ರಹ್ಮಕುಮಾರಿ ವಿವಿಯಲ್ಲಿ ುಡ್ಡಿನ ಧೂತ

KIADB
ಭ್ರಷ್ಟರಿಗೆ ಕಡಿವಾಣ ಎಂದು?

ಕರಾವಳಿ
ಅಳಿವೆಯೇ ಮೃತ್ಯುಕೂಪ ಮೀನುಗಾರರಿಗೆ

ಲಿತರನ್ನು ಮುಟ್ಟಿಸಿಕೊಳ್ಳದ ಮಾಧ್ಯಮಗಳು

ಕಳೆದುಕೊಳ್ಳುತ್ತಿರುವ ಸ್ವಾತಂತ್ರ್ಯ ಮತ್ತು ಸಮಾನತೆಯ ಆಶಯ



ಏ ಆಝಾದೀ ಝೂಟೀ ಹೈ
ದೇಶ್ ಕಿ ಜನತಾ ಭೂಕೀ ಹೈ

ಎನ್ನುವ ಘೋಷಣೆಯನ್ನು ರ್‍ಯಾಡಿಕಲ್ ಜನರು ಕೂಗಿ ಬಹಳ ವರ್ಷಗಳಾಗಿವೆ. ಪ್ರತೀ ಸ್ವಾತಂತ್ರ್ಯ ದಿನದಂದೂ ಮತ್ತೆ ಮತ್ತೆ ಅನುರಣನಗೊಳ್ಳುವ 'ಅಪೂರ್ಣ ಸ್ವಾತಂತ್ರ್ಯ'ದ ಮಾತು ಕ್ಲೀಷೆಯಾಗಿ ಬಿಟ್ಟಿದೆ. ಎಷ್ಟೇ ಕೊರತೆಗಳಿದ್ದರೂ 1947ರಿಂದ 1990ರವರೆಗಿನ ದೇಶದ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ವ್ಯವಸ್ಥೆಯು ಸ್ವಾತಂತ್ರ್ಯವನ್ನು ವಿಸ್ತರಿಸುವ ಕಾಲಘಟ್ಟವೇ ಆಗಿತ್ತು. ಅದು ಸಮಾಜದ ಎಲ್ಲಾ ವರ್ಗ ಮತ್ತು ಜಾತಿಗಳನ್ನು ಗಣನೀಯವಾಗಿ ತಲುಪಿರಲಿಲ್ಲ. ಆದರೆ ಬೇರೆ ಬೇರೆ ಘಟ್ಟಗಳಲ್ಲಿ ಬೇರೆ ಬೇರೆ ಸಮುದಾಯಗಳು ಒಂದಷ್ಟು ಸ್ವಾತಂತ್ರ್ಯವನ್ನು 'ಗಳಿಸಿಕೊಳ್ಳುತ್ತಾ' ಹೋದದ್ದಂತೂ ನಿಜ.

ಹಾಗಾಗಿಯೇ ಸಂಪೂರ್ಣ ಸ್ವಾತಂತ್ರ್ಯದ ಪ್ರತಿಪಾದಕ ರ್‍ಯಾಡಿಕಲ್ ಸಂಘಟನೆಗಳ 'ಆತುರ'ವನ್ನು ಉದಾರವಾದಿ ಪ್ರಜಾತಂತ್ರವಾದಿಗಳು ಒಪ್ಪುತ್ತಿರಲಿಲ್ಲ. 'ಇರಲಿ, ತಡೆದುಕೊಳ್ಳಿ. ಈ ಸ್ವಾತಂತ್ರ್ಯ ಸಂಪೂರ್ಣ ಎಂದು ನಾವೂ ಒಪ್ಪುವುದಿಲ್ಲ; ಆದರೆ ಇದು ನಿಧಾನಕ್ಕೆ ವಿಸ್ತರಣೆಯಾಗುತ್ತಿದೆ. ಈ ರೀತಿಯ ವಿಸ್ತರಣೆ ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ಸಾಧ್ಯವಿದೆ' ಎನ್ನುತ್ತಿದ್ದರು. ಆದರೆ 1990ರ ನಂತರ ಇದ್ದ ಬದ್ದ ಸ್ವಾತಂತ್ರ್ಯವೂ ಹರಣವಾಗುತ್ತಾ ಹೋಗುತ್ತಿದ್ದಂತೆ ಈ ಉದಾರವಾದಿ ಪ್ರಜಾತಂತ್ರವೂ ಮಂಕಾಗಬೇಕಾಯಿತು.

68ನೆಯ ಸ್ವಾತಂತ್ರ್ಯ ದಿನವಾದ ಇಂದು ಇನ್ನೊಂದು ಮುಖ್ಯವಾದ ಸ್ವಾತಂತ್ರ್ಯ ಹರಣದ ವಿದ್ಯಮಾನ ನಮ್ಮ ಕಣ್ಣೆದುರಿಗೆ ನಡೆಯುತ್ತಿದೆ. ಇದು ದೇಶದ ಮಹಿಳೆಯರು ಬಹಳ ಕಷ್ಟಪಟ್ಟು ನಡೆಸಿದ ಸಂಗ್ರಾಮದಿಂದ ಗಳಿಸಿಕೊಂಡಿದ್ದ ಸ್ವಾತಂತ್ರ್ಯ. ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ವ್ಯಾಪಕವಾಗುತ್ತಿರುವ ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಗಳು ಮಹಿಳೆಯರು ಗಳಿಸಿಕೊಂಡಿದ್ದ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಕುಗ್ಗಿಸುತ್ತಾ ಹೋಗುತ್ತಿವೆ. ಅವರ ಉಡುಪಿನ ಸ್ವಾತಂತ್ರ್ಯ ಸ್ವಚ್ಛಂದವಾಗಿ ತಿರುಗಾಡುವ ಸ್ವಾತಂತ್ರ್ಯ, ಸಂಜೆಯ ನಂತರ ಮನೆಯಿಂದ ಹೊರಗಿರುವ ಸ್ವಾತಂತ್ರ್ಯ, ಸಿಸಿಟಿವಿಯ ಕಣ್ಗಾವಲು ಮತ್ತು ಸುರಕ್ಷಾ ಕ್ರಮಗಳಿಂದ ಹೊರತಾದ ಜಾಗಗಳಲ್ಲಿ ಹಗಲು ಹೊತ್ತು ಇರುವ ಸ್ವಾತಂತ್ರ್ಯ, ಪರಿಚಿತ-ಸಂಬಂಧಿಕ ಗಂಡಸರ ಜೊತೆಯಲ್ಲಿ ಸುರಕ್ಷತೆಯನ್ನು ಅನುಭವಿಸುವ ಸ್ವಾತಂತ್ರ್ಯ, ತಂದೆ-ಮಾವ-ಮೇಷ್ಟ್ರು-ಪೊಲೀಸ್- ವೈದ್ಯ-ನ್ಯಾಯಾಧೀಶರು ತಮ್ಮ ಪಾತ್ರಗಳನ್ನು ಮಾತ್ರ ನಿರ್ವಹಿಸುತ್ತಾರಾದ್ದರಿಂದ ಅವರೊಡನೆ ಆರಾಮಾಗಿ ಇರಬಹುದೆಂಬ ಸ್ವಾತಂತ್ರ್ಯ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ ದಿನಗಳಿವು.

20-30 ವರ್ಷಗಳ ಕೆಳಗೆ ಲಂಗ-ದಾವಣಿ, ಸೀರೆಗಳಿಂದ ಮುಕ್ತರಾಗಿ ಚೂಡಿದಾರ್ ಧರಿಸಿ, ಸೈಕಲ್-ಸ್ಕೂಟಿಗಳನ್ನು ಹತ್ತಿ, ಶಾಲೆ-ಕಾಲೇಜು-ಉದ್ಯೋಗಗಳಲ್ಲಿ ಹೊಸ ಹುರುಪಿನಿಂದ ಬೀದಿಗಿಳಿದಿದ್ದ ಹೆಣ್ಣುಮಕ್ಕಳು ಇಂದು ತಾಯಂದಿರಾಗಿದ್ದಾರೆ. ಅವರ ಹೆಣ್ಣು ಮಕ್ಕಳು ಇನ್ನೂ 20 ಹೆಜ್ಜೆ ಮುಂದಕ್ಕೆ ಹೋಗುವಂತಾಗಬೇಕಿತ್ತು. ಆದರೆ ಗೊಂದಲ, ಭಯ, ಆತಂಕ, ಹತಾಶೆಗಳಿಂದ ಹಿಂದೆ ಸರಿಯುವಂತಾಗುತ್ತಿದೆ.

90ರ ನಂತರದ ಜಾಗತೀಕರಣ ಕಾಲಘಟ್ಟದಲ್ಲಿ ರೈತಾಪಿ, ಕಾರ್ಮಿಕರು, ದಲಿತ-ಹಿಂದುಳಿದವರು ಸ್ವಾತಂತ್ರ್ಯ ಕಳೆದುಕೊಂಡದ್ದಕ್ಕೂ, ಈಗ ಆ ಅಸ್ಮಿತೆಗಳ ಜೊತೆಗೆ ಮಹಿಳೆಯಾಗಿಯೂ ತನ್ನ ಸ್ವಾತಂತ್ರ್ಯವನ್ನು ಮತ್ತೂ ಒಮ್ಮೆ ಕಳೆದುಕೊಳ್ಳುತ್ತಿರುವುದಕ್ಕೂ ಸಂಬಂಧವಿದೆ. ಈ ಸಂಬಂಧದ ಎಳೆ ಏನು ಎಂಬ ಚರ್ಚೆಗಿಂತ, ನಾವು ಗಳಿಸಿಕೊಂಡಿದ್ದನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಅಂಶ ಹೆಚ್ಚು ಚರ್ಚೆಗೊಳಗಾಗುವ ಅಗತ್ಯವಿದೆ.

ಕನ್ನಡದ ಪ್ರಮುಖ ನಾಟಕಕಾರರಲ್ಲೊಬ್ಬರಾದ ಶ್ರೀರಂಗರ 'ಶೋಕಚಕ್ರ' ನಾಟಕದಲ್ಲಿ ಒಂದು ದೃಶ್ಯವಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹೋರಾಟಗಾರನೊಬ್ಬ, 47ರ ನಂತರ ಹಿನ್ನೆಲೆಗೆ ಸರಿದಿರುತ್ತಾರೆ. ಮತ್ತೆ ತಾನು ರಾಜಕಾರಣದಲ್ಲಿ ಮುನ್ನೆಲೆಗೆ ಬರುವ ಅಗತ್ಯವಿದೆಯೆಂದು ಭಾವಿಸಿ. ಆದಕ್ಕಾಗಿ ಅಣಿಯಾಗುತ್ತಿರುತ್ತಾರೆ. ಆಗ ಜೊತೆಗಾರರೊಬ್ಬರು 'ನಮಗೆ ಸ್ವಾತಂತ್ರ್ಯ ಸಿಕ್ಕಾಗ. . . .' ಎನ್ನುತ್ತಾರೆ. ಅದನ್ನು ಕೇಳಿ ಸಿಟ್ಟು ಮಾಡಿಕೊಳ್ಳುವ ಸ್ವಾತಂತ್ರ್ಯ ಹೋರಾಟಗಾರ 'ಸಿಕ್ಕಿತು ಅಲ್ಲರೀ, ಗಳಿಸಿದಿವೀ ಅನ್ನಿ. ಸಾಲೀ ತಪ್ಪಿಸಿ ತಿರುಗೋ ಹುಡುಗನಿಗೆ ಬೀದ್ಯಾಗ ಗೋಲಿ ಸಿಕ್ತು ಅನ್ನೋ ಹಾಂಗ ಅಲ್ರೀ ಸ್ವಾತಂತ್ರ್ಯ ನಮಗ ಬಂದದ್ದು. ಗಳಿಸಿದಿವೀ' ಅಂತಾರೆ.

ಎಷ್ಟರಮಟ್ಟಿಗಿನ ಸ್ವಾತಂತ್ರ್ಯ ನಮಗೆ 1947ರಲ್ಲಿ ಮತ್ತು ಆ ನಂತರ ದಕ್ಕಿದೆಯೋ ಅದು ಗಳಿಸಿದ್ದು. ಎಲ್ಲ ಬಗೆಯ ಸ್ವಾತಂತ್ರ್ಯ ಹೋರಾಟಗಳ ಅಧಿಕೃತ ಮತ್ತು ಅನಧಿಕೃತ ನೇತಾರನಾಗಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಘೋಷಿಸಿ ನಡೆಸಿದ ಚಟುವಟಿಕೆಗಳಷ್ಟೇ ಸ್ವಾತಂತ್ರ್ಯ ಹೋರಾಟವಾಗಿರಲಿಲ್ಲ. ಅಂತಹ 'ಅಧಿಕೃತ' ಸ್ವಾತಂತ್ರ್ಯ ಹೋರಾಟಕ್ಕೂ ಒಂದು ಮಹತ್ವದ ಸ್ಥಾನವಿತ್ತು. ಆದರೆ ಅದರಾಚೆಗೆ ದಾಖಲಾಗದ ಅಥವಾ ದಾಖಲಾದರೂ ಸೂಕ್ತ ಸ್ಥಾನ ಪಡೆದುಕೊಳ್ಳದ ಸಾವಿರ ಬಗೆಯ ಹೋರಾಟಗಳು ಈ ದೇಶದ ಇತಿಹಾಸದಲ್ಲಿ ಆಗಿಹೋಗಿವೆ. ಅವೆಲ್ಲದರ ಫಲವಾಗಿ ನಾವು ಗಳಿಸಿಕೊಂಡಿದ್ದ ಸ್ವಾತಂತ್ರ್ಯವಿದು ಎಂಬುದನ್ನು ಮತ್ತೊಮ್ಮೆ ನೆನೆಯುವ ಅಗತ್ಯವಿದೆ.

ಸ್ವಾತಂತ್ರ್ಯ ಹೋರಾಟದ ಭಾಗವಾಗಿ ನಾವು ಸ್ವಲ್ಪ ಮಟ್ಟಿಗೆ ರಾಣಿಯರ ಕಾಳಗದ ಕಥೆಯನ್ನು ಓದಿದ್ದೇವೆ. ರಾಣಿ ಅಬ್ಬಕ್ಕ, ಝಾನ್ಸೀ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮರ ಕಥೆಯೊಂದಿಗೆ ಆ 'ಇತಿಹಾಸ' ಮುಗಿದುಬಿಡುತ್ತದೆ. ಉತ್ತರ ಭಾರತದ ರಜಿಯಾ ಸುಲ್ತಾನಾ ಮತ್ತು ಬೇಗಂ ಹಜರತ್ ಮಹಲ್ ಬ್ರಿಟಿಷರ ವಿರುದ್ಧದ ಹೋರಾಟಕ್ಕಾಗಿ ಮಾತ್ರವಲ್ಲದೇ ಅವರ ಪುರೋಗಾಮಿ ಆಡಳಿತ ವ್ಯವಸ್ಥೆಯಿಂದಲೂ ಬಹು ಮಹತ್ವದ ಪಾತ್ರವನ್ನು ವಹಿಸಿದ್ದರು. ಭೋಪಾಲದ ಬೇಗಂಗಳು ಎಲ್ಲ ವರ್ಗದವರ ಶಿಕ್ಷಣಕ್ಕೆ ನೀಡಿದ ಮಹತ್ವವು ಭಾರತದ ಶಿಕ್ಷಣದ



ಇತಿಹಾಸದಲ್ಲಿ ತನ್ನದೇ ಸ್ಥಾನ ಪಡೆದುಕೊಂಡಿದೆ. ರಾಜ-ರಾಣಿಯರ ಕಾಲ ಮುಗಿದನಂತರ ಸುಧಾರಣಾವಾದಿಗಳ ಕಾಲದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ದುಡಿದಿದ್ದಾರೆ. ಸಾವಿತ್ರಿ ಬಾಯಿ ಫುಲೆ, ರಮಾಬಾಯಿ, ತಾರಾಬಾಯಿ ಶಿಂಧೆ, ಸಿಸ್ಟರ್ ಸುಬ್ಬುಲಕ್ಷ್ಮಿ, ರುಕ್ಮಾಬಾಯಿ ಇನ್ನಿತರರಲ್ಲದೇ ಪ.ಬಂಗಾಳ ಮತ್ತು ಉತ್ತರ ಪ್ರದೇಶದಲ್ಲಿ ಭಾರೀ ದೊಡ್ಡ ಸಂಖ್ಯೆಯಲ್ಲಿ ಮಹಿಳಾ ಸಮಾಜ ಸುಧಾರಕಿಯರು ಸೇವೆ ಸಲ್ಲಿಸಿದ್ದಾರೆ. ಇವೆಲ್ಲದರ ಫಲವಾಗಿಯೇ ಸಾಮಾಜಿಕವಾಗಿ ಅದುವರೆಗೆ ಮಹಿಳೆಯರಿಗಿದ್ದ ಸ್ಥಾನಮಾನವನ್ನು ಬದಲಾಯಿತು. ಆದರ ಫಲವಾಗಿ ಶಿಕ್ಷಣ ಪಡೆದುಕೊಂಡ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗದ ಮಹಿಳೆಯರು ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಪಾಲ್ಗೊಂಡರು. ಸರೋಜಿನಿ ನಾಯ್ಡು, ಅರುಣಾ ಅಸಫ್ ಅಲಿ, ಸುಮತಿ ಬ್ಯಾನರ್ಜಿ, ವಿಜಯಲಕ್ಷ್ಮೀ ಪಂಡಿತ್, ವೀಣಾ ಮಜುಂದಾರ್ ನೇರವಾಗಿ ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರೆ, ಕ್ಯಾಲಕ್ಷ್ಮೀ ಸೆಹಗಲ್ ಥರದವರು ಸ್ವಾತಂತ್ರ್ಯ ಪ್ರೇಮಿ ಸೈನ್ಯದಲ್ಲಿದ್ದು ಹೋರಾಡಿದರು. ಕ್ರಾಂತಿಕಾರಿ ಹೋರಾಟದಲ್ಲೂ ಪ್ರೀತಿಲತಾ ವಡ್ಡೇದಾರ್ ಥರದ ಯುವತಿಯರು ಮಹಿಳಾ ಕುಲವನ್ನು ಪ್ರತಿನಿಧಿಸಿದ್ದಾರೆ.

ಚೆನ್ನೈನ ಇಬ್ಬರು ಅಣ್ಣ ತಂಗಿಯರು ಸ್ವಾತಂತ್ರ್ಯ ಹೋರಾಟದ ಸುದ್ದಿಗಳನ್ನು ಬಿತ್ತಲು ಸೀಕ್ರೆಟ್ ರೇಡಿಯೋವೊಂದನ್ನು ಮೂರು ವರ್ಷಗಳ ಕಾಲ ನಡೆಸಿದ್ದರು. ಈ ರೀತಿ ಅಸಂಖ್ಯಾತ ಹೆಣ್ಣು ಮಕ್ಕಳು ದುಡಿದಿರುವುದು 'ಮುಖ್ಯವಾಹಿನಿ'ಯಲ್ಲಿ ಪ್ರಸಾರವಾಗಿಲ್ಲವಷ್ಟೇ. 1925ರ ನಂತರವಂತೂ ದೊಡ್ಡ ಸಮೂಹವಾಗಿ ಸ್ವಾತಂತ್ರ್ಯದ



ಸಾಮೂಹಿಕ ಆಂದೋಲನದಲ್ಲಿ ಪದಾತಿ ದಳದ ಕೆಲಸವನ್ನು ಮಹಿಳೆಯರು ನಿರ್ವಹಿಸಿದ್ದಾರೆ. ಪ.ಬಂಗಾಳದಲ್ಲಿ ಭಾರೀ ಕ್ಷಾಮ ಬಂದಾಗ ಮಹಿಳೆಯರು ಭಾರೀ ದೊಡ್ಡ ಸಂಖ್ಯೆಯಲ್ಲಿ ಪರಿಹಾರ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಾರೆ. ಈ ಪರಿಹಾರ ಕಾರ್ಯಾಚರಣೆಯು ನಂತರ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಬಿಡುತ್ತದೆ. ಬ್ರಿಟಿಷರಿಂದ ಬಂದ ಒತ್ತಡದ ಫಲವಾಗಿ ಕಾಂಗ್ರೆಸ್ ಈ ರಾಜಕೀಯೀಕರಣದಿಂದ ಹಿಂದೆ ಸರಿಯುತ್ತದೆ. ಆಗ ಈ ಮಹಿಳೆಯರು 'ನಾರಿ ಮುಕ್ತಿ ವಾಹಿನಿ'ಯ ಹೆಸರಿನಲ್ಲಿ ಪರಿಹಾರ ಮತ್ತು ಹೋರಾಟವನ್ನು ಮುಂದುವರೆಸುತ್ತಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ 19ನೇ ಶತಮಾನದ ಉತ್ತರಾರ್ಧದಿಂದ ಮಹಿಳಾ ಚಳವಳಿಯು ಇದೇ ರೀತಿ ಸಕ್ರಿಯವಾಗುತ್ತಾ ಬಂದುದನ್ನು ನೋಡಬಹುದು. ಸಾರ್ವತ್ರಿಕ ವಯಸ್ಕ ಮತದಾನದ ಹೋರಾಟದಲ್ಲಿ ಮಹಿಳೆಯರದ್ದೂ ಮುಖ್ಯಪಾಲು. ಕಪ್ಪು ಜನರ ಮತದಾನದ ಹಕ್ಕಿಗಾಗಿ ನಡೆಯುವ ಹೋರಾಟಕ್ಕೆ ಸಂಪೂರ್ಣವಾಗಿ ಬೆಂಬಲಿಸುವ ಮಹಿಳೆಯರು, ಅವರು ಯಶಸ್ವಿಯಾದ ನಂತರ ತಮ್ಮ ಹಕ್ಕುಗಳಿಗಾಗಿ ದನಿಯೆತ್ತದೆ ಮೌನವಾಗಿದ್ದನ್ನು ನೋಡಿ ಅಪ್ರತಿಭರಾಗುತ್ತಾರೆ. ಸೆನೆಕಾ ಫಾಲ್ಸ್ ಸಮ್ಮೇಳನವೆಂದು ಹೆಸರಾಗಿರುವ ಸಮಾವೇಶದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕಿಗಾಗಿ ನಿರ್ಣಯ ತೆಗೆದುಕೊಳ್ಳುತ್ತಾರೆ.

ಜಾಗತಿಕವಾಗಿ ನಡೆದ ಈ ವಿದ್ಯಮಾನಗಳೂ ಸೇರಿಕೊಂಡು ಭಾರತದ ಮಹಿಳೆಯರು ಸಂವಿಧಾನ ರಚನಾ ಸಭೆಯಲ್ಲಿ ಹೆಚ್ಚಿನ ಪ್ರತಿರೋಧವಿಲ್ಲದೇ ಸಾರ್ವತ್ರಿಕ ಮತದಾನದ ಹಕ್ಕನ್ನು ಪಡೆದುಕೊಳ್ಳುತ್ತಾರೆ. ಅಂದರೆ ಎಲ್ಲವೂ 'ಗಳಿಸಿಕೊಂಡಿದ್ದೇ'. ಯಾರೂ ಪುಗಸಟ್ಟೆ ಕೊಟ್ಟಿದ್ದಲ್ಲ. ಕೆಲವೊಮ್ಮೆ ಸಲೀಸಾಗಿ ಬಂದಿದೆ ಎಂದು ಭಾವಿಸಲಾಗುವ ಹಕ್ಕುಗಳೂ ಇನ್ನೆಲ್ಲೋ, ಯಾರೋ ನಡೆಸಿದ ಚಳವಳಿಯ ಫಲವಾಗಿಯೇ ಬಂದಿದೆ.

ಆ ರೀತಿ ಇದೇ ನೆಲದಲ್ಲೇ, 'ನಾಗರಿಕ ಸಮಾಜ'ದಿಂದ ಹೊರಗಿನ, ಕಾಡೊಳಗಿನ ಬದುಕನ್ನು ನಡೆಸುತ್ತಿದ್ದ ಆದಿವಾಸಿಗಳ ಹೋರಾಟ ಭಾರತದ ಸ್ವಾತಂತ್ರ್ಯ ಚಳವಳಿಯ ಅತ್ಯಂತ ವಿರೋಚಿತವಾದ ಅಧ್ಯಾಯವಾಗಿದೆ. ಮಹಿಳೆಯರ ಹೋರಾಟದ ಜೊತೆಜೊತೆಗೇ ಅದನ್ನು ನೆನೆಯಬೇಕಾದ್ದಕ್ಕೂ ಕಾರಣವಿದೆ. ಮಹಿಳೆಯರು, ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು ಇತಿಹಾಸದಲ್ಲಿ ದಾಖಲಾಗುವುದೂ ಸಲೀಸಲ್ಲ. ಅವರು 'ಮುಖ್ಯವಾಹಿನಿ' ಹೋರಾಟದ ಪದಾತಿದಳವಾಗಿಯಷ್ಟೇ ಚರಿತ್ರೆಕಾರರಿಗೆ ಕಂಡಿರುತ್ತಾರೆ. ಆದಿವಾಸಿಗಳ ಚಳವಳಿಯು 'ಪ್ರತ್ಯೇಕ'ವಾಗಿ ನಡೆದದ್ದರಿಂದ ಅದನ್ನು ಬ್ರಿಟಿಷರು 'ಅನಾಗರಿಕರ ದಂಗೆ'ಯಾಗಿಯಾದರೂ ದಾಖಲಿಸಬೇಕಾಗಿ ಬಂದಿದೆ. ಅದರ ಪಟ್ಟಿಯನ್ನು ನೋಡಿದರೆ ಮೈನವಿರೇಳುತ್ತದೆ.

1772ರಲ್ಲಿ ಪಹಾರಿಯಾ ದಂಗೆ, 1774
79ರವರೆಗೆ ಹಾಲ್ಬಾ ದಂಗೆ, 1776ರಿಂದ 1787ರ
ಚಮ್ರಾ ದಂಗೆ, 1780ರಿಂದ 1785ರವರೆಗೆ ತಿಲ್ಕಾ
ನೇತೃತ್ವದಲ್ಲಿ ನಡೆದ ದಂಗೆ, ಆದರ ನಂತರದ
ದಶಕಗಳ ಕಾಲ ಸಿಂಗ್‌ಭೂಮ್, ಗುಮ್ಲಾ, ಬೀರ್‌ಭೂ
ಬಂಕುರ, ಮನ್‌ಭೂಮ್, ಪಲಮಾವುಗಳಲ್ಲಿ
ದಂಗೆಗಳು, 1822ರಿಂದ 1857ರವರೆಗೂ ಭಿಲ್ಲರು
ದಂಗೆ, 1832ರ ಕೋಲಿ ದಂಗೆ, 1832
1834ರವರೆಗೆ ನಡೆದ ಖೇವಾರ್ ಮತ್ತು ಭೂ
ದಂಗೆಗಳು, ಒರಿಸ್ಸಾದಿಂದ ಬಂಗಾಳದವರೆಗೆ ವ್ಯಾ
1855ರ ಸಂತಾಲರ ದಂಗೆ, 1860ರಲ್ಲಿ ಆದಿಲಾಬಾ
ರಾಮ್‌ಜಿ ಗೊಂಡಿಯ ನೇತೃತ್ವದಲ್ಲಿ ನಡೆದ ಗೊಂಡಿ
ಹೀಗೆ ಒಂದು ದೊಡ್ಡ ಪಟ್ಟಿಯೇ ಇದೆ.

ಈ ರೀತಿ ನಡೆದ ಅಸಂಖ್ಯಾತ ಆದಿವಾಸಿ ದಂಗೆ
ಅಡಗಿಸಲು ಹಾಗೂ ಭಾರತದ ಅರಣ್ಯ ಸಂಪ
ದೋಚಲೆಂದೇ ಬ್ರಿಟಿಷರು ಎರಡು ಕಾನೂನುಗ
ಸಹ ತಂದರು. 1865ರ ಅರಣ್ಯ ಕಾಯ್ದೆಯು
ಅರಣ್ಯಗಳನ್ನು ಬ್ರಿಟಿಷರ ಸಂಪತ್ತೆಂದು ಘೋಷಿ
1878ರಲ್ಲಿ ಬಂದ ಭಾರತ ಅರಣ್ಯ ಕಾಯ್ದೆಯು
ಸಮಗ್ರವಾಗಿತ್ತು. ಇದು ಅದುವರೆಗಿನ ಆದಿವಾ
ಬಹುತೇಕ ಹಕ್ಕುಗಳನ್ನು ಕಿತ್ತುಕೊಂಡಿತು. ಅರಣ್ಯ ಸಂ
ದೋಚಲೆಂದೇ ಅವರು ತಂದ ಈ ಕಾಯ್ದೆಯು ಸ್ವ
ಭಾರತದಲ್ಲೂ ಜಾರಿಯಲ್ಲಿದೆ. ತಮ್ಮನ್ನು ತೀವ್ರ
ಪ್ರತಿರೋಧಿಸಿದ ಬುಡಕಟ್ಟುಗಳನ್ನು ಹತ್ತಿಕ್ಕಲು 187
'ಕ್ರಿಮಿನಲ್' ಬುಡಕಟ್ಟುಗಳ ಕಾಯ್ದೆ'ಯನ್ನೂ ಬ್ರಿಟಿ
ಜಾರಿಗೆ ತಂದರು. ಈ ಹಣೆಪಟ್ಟಿಯೊಂದಿಗೆ ಅವ
ದಮನಿಸಲು ಅವರು ಸುಲಭ ಮಾಡಿಕೊಂಡರು.

ಇವಾವುವೂ ಆದಿವಾಸಿ ಪ್ರತಿರೋಧವೇ ಇಲ್ಲ
ಮಾಡಲು ಸಾಧ್ಯವಾಗಲಿಲ್ಲವೆಂಬುದು ಇತಿಹಾ
ದಾಖಲಾಗಿರುವ ಸಂಗತಿ. ಬಿರ್ಸಾ ಮುಂಡಾನ ನೇತೃ
ರಾಂಚಿಯ ದಕ್ಷಿಣ ಭಾಗದಲ್ಲಿ ನಡೆದ ಮುಂಡರ ದಂಗೆ
1899ರಿಂದ 1900ರವರೆಗೆ ಬಹು ವ್ಯಾಪಕವಾಗಿ ಹರ
ನಾಗಾ ಜನರು 1947ರವರೆಗೂ ಬ್ರಿಟಿಷರನ್ನು
ಕಾಡೊಳಗೆ ಬಿಟ್ಟುಕೊಳ್ಳಲೇ ಇಲ್ಲ.

ಇದೇ ರೀತಿ ಈ ದೇಶದ ರೈತಾಪಿಯು ನಿರಂತರ
ಬ್ರಿಟಿಷರ ವಿರುದ್ಧ ಸೆಣಸಿದ್ದಾರೆ. ಅವುಗಳ ಪಟ್ಟಿಯು ಇ
ದೊಡ್ಡದಿದೆ. ಕಾರ್ಮಿಕರು ಮುಂಬಯಿ, ಸೂ
ಅಹಮದಾಬಾದ್‌ಗಳಲ್ಲಿ ಮಾತ್ರವಲ್ಲದೇ ದೇಶದ ಬಹ
ನಗರ ಪ್ರದೇಶಗಳಲ್ಲಿ ಚಳವಳಿ ಹೂಡಿದ್ದಾರೆ. ಇ
ಜೊತೆಗೆ ವಿವಿಧ ಕ್ರಾಂತಿಕಾರಿ ಸಂಘಟನೆಗಳು, ವಿದ್ಯಾ
ಯುವಜನರು ಮತ್ತು ಕಡೆಗೆ ಬ್ರಿಟಿಷ್ ಸೈನ್ಯದ
ಭಾರತೀಯ ಸೈನಿಕರು ಎಲ್ಲರೂ ಈ ದೇಶದ ಸ್ವಾತಂತ್ರ
ರಕ್ತ ಹರಿಸಿದ್ದಾರೆ; ಪ್ರಾಣ ಕೊಟ್ಟಿದ್ದಾರೆ. ಭಾರತದ ಸ್ವಾ
ಚಳವಳಿಯ 'ಅಧಿಕೃತ ಇತಿಹಾಸ'ಕ್ಕೆ ಅವೆ
ಸೇರಿಕೊಂಡರೆ ಮಾತ್ರ ಸ್ವಾತಂತ್ರ್ಯ ಚಳವಳಿಯ ಇತಿಹಾ
ಸಂಪೂರ್ಣವೂ, ಸಮಗ್ರವೂ ಆಗುತ್ತದೆ. ಆದರೆ ಭಾ
ಸ್ವಾತಂತ್ರ್ಯ ಮಾತ್ರ ಇವರೆಲ್ಲರನ್ನೂ ಒಳಗೊಳ್ಳು
ಸಂಪೂರ್ಣ ಮತ್ತು ಸಮಗ್ರವಾಗಲಿಲ್ಲ. ಮೇಲಿನೆಲ್ಲಾ ಚ
ಗಳು ನಮಗೆ ತೋರಿಸುತ್ತಿರುವ ವಾಸ್ತವವೇನೆಂದರೆ, ಸ್ವಾ
ಚಳವಳಿಯು ಸಮಾನತೆಯ ಆಶಯವನ್ನು ಅಂತರ್ಗತ
ಇಟ್ಟುಕೊಂಡಿತ್ತು. ಆದರೆ ಅದು ಈಡೇರಲಿಲ್ಲ.

ಆದ್ದರಿಂದಲೇ 1947ರಿಂದಲೇ ಜನಚಳವಳಿಗಳು
ನಡೆದು ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರಗ
ವಿಸ್ತರಿಸಬೇಕಾಯಿತು. ಅಲ್ಲಿಯೂ ಮತ್ತೆ ದೇಶದ ರೈ
ರೈತಕೂಲಿಗಳು, ಕಾರ್ಮಿಕರು, ವಿದ್ಯಾರ್ಥಿ
ಮಧ್ಯಮವರ್ಗ, ಮಹಿಳೆಯರು, ದಲಿತರು, ಹಿಂದುಳಿದ
ಹಾಗೂ ಆದಿವಾಸಿಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗ
ದ್ದಾರೆ. ಅವುಗಳ ಫಲವಾಗಿ ಹೊಸ ಕಾನೂನು
ಯೋಜನೆಗಳು ಜಾರಿಗೆ ಬಂದವು. ಎಲ್ಲವೂ ಗಳಿ

1990ರ ನಂತರ ಕಳೆದುಕೊಳ್ಳುವ
ಆರಂಭವಾಗಿದೆ. ಈಗ ಬರುತ್ತಿರುವ ಹೊಸ ಕಾನೂನ
ಹಾಗೂ ಹಳೆಯ ಕಾನೂನುಗಳಿಗೆ ಮಾಡಲಾಗು
ತಿದ್ದುಪಡಿಗಳು ನಮ್ಮ ಸ್ವಾತಂತ್ರ್ಯವನ್ನು, ಅಂದರೆ ಈ
ಬಹುಸಂಖ್ಯಾತ ಮಹಾಜನತೆಯ ಸ್ವಾತಂತ್ರ್ಯ
ಕಸಿದುಕೊಳ್ಳುತ್ತಿವೆ. ಅದಕ್ಕೆ ಯಾರೂ ಹೊರ
ಮಹಿಳೆಯರೂ ಸೇರಿದಂತೆ.

ಹಾಗಾಗಿ ಇದು ಮತ್ತೆ ಗಳಿಸಿಕೊಳ್ಳುವ
ಮತ್ತೊಂದು ಸ್ವಾತಂತ್ರ್ಯ ಚಳವಳಿಯ ಅಗತ್ಯ ಬೇಡು
ಸಂದರ್ಭವಿದು. ಒಂದು ವ್ಯತ್ಯಾಸವೆಂದರೆ, ಈ ಬಾ
ಸ್ವಾತಂತ್ರ್ಯವು ಸಮಾನತೆಯ ಆಶಯವನ್ನು
ಕೇಂದ್ರದಲ್ಲಿರಿಸಿಕೊಂಡಿರುತ್ತದೆ.

...ಾಜಪೇಯಿ 'ಭಾರತರತ್ನ'ಕ್ಕೆ ಅರ್ಹರೇ?

ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com



...ಮತ್ತೆ ಭಾರತ ರತ್ನ ಪ್ರಶಸ್ತಿ ಸುದ್ದಿಯಲ್ಲಿದೆ. ಸಚಿನ್ ...ಲ್ಕರ್‌ಗೆ ಆ ಪ್ರಶಸ್ತಿಯನ್ನು ಕೊಟ್ಟನಂತರ ಧ್ಯಾನ್ ... ಅವರಿಗೆ ಕೊಡುವುದು ಸರಿಯೇ? ಸುಭಾಷ್‌ಚಂದ್ರ ...ಸ್ ಅವರು ಈ ಪ್ರಶಸ್ತಿಗಿಂತಲೂ ಪ್ರಮುಖರಲ್ಲವೇ ...ಲ್ಲ ಪ್ರಶ್ನೆಗಳು ಟಿವಿ ಚಾನಲ್‌ಗಳಿಗೆ ಆಹಾರವಾಗಿವೆ.

ಎಲ್ಲರೂ ಈ ಬಾರಿ ಮಾಜಿ ಪ್ರಧಾನಿ ಅಟಲ್ ...ರಿ ವಾಜಪೇಯಿಗೆ ಈ ಪ್ರಶಸ್ತಿಯನ್ನು ಕೊಡಲೇಬೇಕು ... ಸಮ್ಮತಿ ಸೂಚಿಸುತ್ತಿದ್ದಾರೆ. ಆದರೆ ನಿಜವಾಗಲೂ ...ಪೇಯಿ ಭಾರತ ರತ್ನ ಪ್ರಶಸ್ತಿಗೆ ಅರ್ಹರೇ?

...ಕೇಳಿಕೇಳಿ ವಾಜಪೇಯಿ ಈ ದೇಶದ ಸಂವಿಧಾನದ ...ಕ್ಕೆ ವಿರೋಧಿ ನಿಲುವನ್ನು ಹೊಂದಿರುವ ಆರೆಸ್ಸೆಸ್ ... ಮೂಲಭೂತವಾದಿ ಸಂಘಟನೆಯ 'ಪ್ರಾಡಕ್ಟ್'. ಅವರು ...ಕ್ತಿಕವಾಗಿ ಅದೆಷ್ಟೇ ಸ್ನೇಹಮಯಿ ಜೀವಿಯಾಗಿದ್ದರೂ ... ತಮ್ಮ ಜೀವನಪರ್ಯಂತ ಪಾಲಿಸಿಕೊಂಡು, ...ಸಿಕೊಂಡು ಬಂದದ್ದು ಆರೆಸ್ಸೆಸ್‌ನ ಹಿಂದೂತ್ವವಾದಿ ...ತವನ್ನು. ಇವರು ಪ್ರಧಾನಿ ಆಗಿದ್ದ ಅವಧಿಯಲ್ಲೇ ... ದೇಶದ ವಿವಿಧ ವಲಯಗಳನ್ನು ಕೇಸರಿಮಯ ... ಇವತ್ತು ಮೋದಿ ಪ್ರಧಾನಿ ಆಗುವುದಕ್ಕೆ ಬುನಾದಿ ...ದ್ದರು.

...ದೆಲ್ಲ ಇರಲಿ, ಈ ವಾಜಪೇಯಿ ಒಂದು ...ಮುಲ್ಲಿ ಗೋಮುಖ ವ್ಯಾಘ್ರ. ಈತ ಸಂಘಿಗಳು ... ಮಸೀದಿಯನ್ನು ಕೆಡುವುದರಲ್ಲಿ ಪಾತ್ರ ವಹಿಸಿದ್ದರೂ ... ಕಳಂಕ ತನಗೆ ತಾಗದಂತೆ ನೋಡಿಕೊಂಡಿದ್ದ ...ಕ್ಷ; 2002ರ ಗುಜರಾತ್ ಮಾರಣಹೋಮದಲ್ಲಿ ...ಯ ಪಾತ್ರದ ಬಗ್ಗೆ ಗೊತ್ತಿದ್ದರೂ ಕೈ ಕಟ್ಟಿಕೊಂಡು ...ದ್ದ ಮನುಷ್ಯ. ಸಂಘ ಪರಿವಾರ ಈ ...ಪೇಯಿಯನ್ನು ತನ್ನ ಮುಖವಾಡದಂತೆ ...ಯೋಗಿಸಿಕೊಂಡು ಪ್ರಥಮ ಬಾರಿಗೆ ಅಧಿಕಾರ ...ದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಹಾಗೆ ...ಡಿದರೆ ಈತ ಸಂಘಪರಿವಾರದಂತೆಯೇ ...ೋದು ಒಂದು ಆದರೆ ಹೇಳುವುದು ...ಂದು.

...ದಕ್ಕೆ ಒಂದು ಸ್ಪಷ್ಟ ಉದಾಹರಣೆ ಎಂದರೆ ...ಪರಿವಾರ ಹೇಗೆ ತಾನು ದೇಶಭಕ್ತ ...ಟನೆಯೆಂದು ಪೋಸು ಕೊಡುತ್ತದೋ ...ಯೇ ಈ ವಾಜಪೇಯಿ ಕೂಡ ತಾನು ...ನ ಸ್ವಾತಂತ್ರಕ್ಕಾಗಿ ಹೋರಾಡಿ ಜೈಲು ಶಿಕ್ಷೆ ...ಭವಿಸಿದ ಧೀರ ಎಂದೇ ಪೋಸು ಕೊಡುತ್ತಿದ್ದ. ... ಆರೆಸ್ಸೆಸ್ ಆಗಲಿ, ವಾಜಪೇಯಿಯಾಗಲಿ ...ೂ ಬ್ರಿಟಿಷರ ವಿರುದ್ಧ ಹೋರಾಟ ಮಾಡಲೇ ...ಬದಲಾಗಿ ಆರೆಸ್ಸೆಸ್ ಸ್ವಾತಂತ್ರ ಸಂಗ್ರಾಮವನ್ನು ...ೋಧಿಸುತ್ತಿದ್ದ ಸಂಘಟನೆಯಾಗಿತ್ತು.

...ಈ ಬಗ್ಗೆ ಹಿಂದೊಮ್ಮೆ ಇದೇ ಅಂಕಣದಲ್ಲಿ ...ದಿದ್ದರೂ ಅದನ್ನು ಇವತ್ತು ನೆನಪಿಸಿಕೊಳ್ಳುವುದು ...ವಾಗಿರುವುದರಿಂದ ಮತ್ತೆ ಬರೆಯುತ್ತಿದ್ದೇನೆ. ಈ ...ಣ ಈಗಿನ ಮಧ್ಯ ಪ್ರದೇಶದಲ್ಲಿ ನಡೆದದ್ದು ...ರಲ್ಲಿ. ಆಗ ವಾಜಪೇಯಿಗೆ 18 ವರ್ಷ ವಯಸ್ಸು. ...ಕರಣದ ಹಿನ್ನಲೆ ಹೀಗಿದೆ:

...ಗ್ವಾಲಿಯರ್‌ನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದ ...ರಿ ಬಿಹಾರಿ ವಾಜಪೇಯಿ ಮತ್ತು ಅವರ ಅಣ್ಣ ...ರ್ ಬಿಹಾರಿ ವಾಜಪೇಯಿ ಅವರನ್ನು 1942ರಲ್ಲಿ ... ದಿನಗಳ ಮಟ್ಟಿಗೆ ಅವರ ಪೂರ್ವಜರ ಊರಾದ ...ೇಶ್ವರಕ್ಕೆ ಅವರ ತಂದೆ ಕಳುಹಿಸಿದ್ದರು.

...ಚಂಬಲ್ ಕಣಿವೆಯ ಅಂಚಿನಲ್ಲಿ, ಯಮುನಾ ನದಿಯ ...ದಲ್ಲಿರುವ ಬಾಟೇಶ್ವರ್ ತನ್ನ ಜೈನ್ ಮತ್ತು ಶಿವ ...ಾಲಯಗಳಿಗೆ ಪ್ರಖ್ಯಾತವಾದ ಪುಣ್ಯಸ್ಥಳ. ಇಂತಹ ...ಶ್ವರ್ ಸ್ವಾತಂತ್ರ್ಯ ಸಂಗ್ರಾಮದಿಂದ ದೂರ ಉಳಿದಿರಲಿಲ್ಲ. ...7ರ ಹೋರಾಟವೂ ಬಾಟೇಶ್ವರದಲ್ಲಿ ಪ್ರತಿಧ್ವನಿಯನ್ನು ...ತ್ತು ಹೀಗಿರುವಾಗ, 1942ರ 'ಭಾರತ ಬಿಟ್ಟು ತೊಲಗಿ' ...ಳುವಳಿಯೂ ಬಾಟೇಶ್ವರದಲ್ಲಿ ಸ್ಫೋಟಗೊಂಡಿದ್ದು ...ರ್ಯವಲ್ಲ.

...ರಕ್ಷಾಬಂಧನ್ ಹಬ್ಬದ ಮರುದಿನವೇ ಬಾಟೇಶ್ವರದ ...ಣದ ಅಗ್ರಹಾರಗಳಲ್ಲಿ 'ಭುಜಾರಿಯಾ ಕಾ ಮೇಳ್' ...ಯುತ್ತದೆ. ಒಂದು ರೀತಿಯಲ್ಲಿ ಈ ಮೇಳ ನಮ್ಮ ...ಗಳಲ್ಲಿ ನಡೆಯುವ ವಾರ್ಷಿಕ ಜಾತ್ರೆ ಇದ್ದಂತೆ. ಆ ...ಯ ದಿನ, ಜನರೆಲ್ಲಾ ಹಳ್ಳಿಯ ಚೌಕದಲ್ಲಿ ಸೇರಿ ...ೀಣ ಯೋಧರ ವೀರಗಾಥೆಗಳನ್ನು ಹಾಡುವುದು ...ವಾಡಿಕೆ.

...ಈ ಜಾತ್ರೆಯ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ...ಯ ಹೋರಾಟಗಾರರಾದ ಕಕುವಾ ಅಲಿಯಾಸ್ ...ಾಧರ್ ಮತ್ತು ಸಂಗಡಿಗರು ನಿರ್ಧರಿಸಿದರು. ...ಕಿಯೇ ಜಾತ್ರೆ ನಡೆಯುತ್ತಿದ್ದಲ್ಲಿಗೆ ಹಾಜರಾದ ...ಧರ್ ಮತ್ತು ಸಂಗಡಿಗರು 'ಭಾರತ ಬಿಟ್ಟು ತೊಲಗಿ' ಚಳವಳಿಯ ಬಗ್ಗೆ ಗಾಂಧಿಯವರ ಸಂಕಲ್ಪದ ಬಗ್ಗೆ ಮಾಹಿತಿ ವಿತರಿಸಿದರಲ್ಲದೆ, ಬ್ರಿಟಿಷ್ ಸರ್ಕಾರದ ವಿರುದ್ಧ ಘೋಷಣೆಗಳನ್ನೂ ಕೂಗಿದರು.

ಬಾಟೇಶ್ವರದ ಅಂಚಿನಲ್ಲಿರುವ ಅರಣ್ಯ ಪ್ರದೇಶವನ್ನು ಪ್ರವೇಶಿಸಬಾರದು ಎಂದು ಬ್ರಿಟಿಷ್ ಸರ್ಕಾರ ಆದೇಶಿಸಿತ್ತಲ್ಲದೆ, ಅರಣ್ಯವನ್ನು ಹೊಕ್ಕ ಜಾನುವಾರುಗಳನ್ನು ಅಧಿಕಾರಿಗಳು ಬಂಧಿಸುತ್ತಿದ್ದರು. ಇದನ್ನು ವಿರೋಧಿಸಿದ ಪ್ರತಿಭಟನಾಕಾರರು ಅರಣ್ಯ ಇಲಾಖೆಯ ಕಚೇರಿಯ ಮೇಲೆ ಭಾರತದ ಧ್ವಜವನ್ನು ಹಾರಿಸಬೇಕೆಂದು ನಿರ್ಧರಿಸಿದರು.

ಈ ಜಾತ್ರೆಗೆ ಬಂದಿದ್ದ ವಾಜಪೇಯಿ ಮತ್ತು ಅವರ ಅಣ್ಣ ಪ್ರೇಮ್ ಪ್ರತಿಭಟನಾಕಾರರ ಭಾಷಣಗಳನ್ನು ಕೇಳಿಸಿಕೊಂಡರಲ್ಲದೆ, ಅರಣ್ಯ ಇಲಾಖೆಯ ಕಚೇರಿಯತ್ತ ಮೆರವಣಿಗೆಯಲ್ಲಿ ಹೊರಟ ಸುಮಾರು 150 ಜನರನ್ನು ಹಿಂಬಾಲಿಸಿದರು. ದಾರಿಯಲ್ಲಿ ಸರ್ಕಾರ ಬಂಧಿಸಿದ್ದ ಜಾನುವಾರುಗಳನ್ನು ಬಿಡುಗಡೆ ಮಾಡಿದ ಪ್ರತಿಭಟನಾಕಾರರು, ಅರಣ್ಯ ಇಲಾಖೆಯ ಕಟ್ಟಡದ ಮೇಲೆ ಧ್ವಜವನ್ನು ಹಾರಿಸಿದರು. ಆ ಕಟ್ಟಡ ಹಳೆಯದಾಗಿದ್ದರಿಂದ, ಗೋಡೆಯ ಹಲವು ಇಟ್ಟಿಗೆಗಳು ಬಿದ್ದವು.



ಈ ಪ್ರಕರಣ ನಡೆದ ಎರಡು ದಿನಗಳ ನಂತರ, ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಲಾರಂಭಿಸಿದರು. ವಾಜಪೇಯಿ ಸಹೋದರರು ಆ ಮೆರವಣಿಗೆಯಲ್ಲಿ ಭಾಗವಹಿಸಿದ್ದನ್ನು ಕಂಡಿದ್ದ ಹಲವು ಜನರ ಹೇಳಿಕೆಗಳ ಆಧಾರದ ಮೇಲೆ ಅವರಿಬ್ಬರನ್ನು ಸಬ್ ಇನ್ಸ್‌ಪೆಕ್ಟರ್ ಅತ್ತರ್ ಸಿಂಗ್‌ರವರು ಬಂಧಿಸಿದರು.

ಎರಡನೇ ಮಹಾಯುದ್ಧ ನಡೆಯುತ್ತಿದ್ದ ಅಂದಿನ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಿತ್ತು. ಬಾಟೇಶ್ವರದಲ್ಲಿ ನಡೆದ ಹೋರಾಟದಲ್ಲಿ ಭಾಗವಹಿಸಿದ ಕಾರಣಕ್ಕಾಗಿ ವಾಜಪೇಯಿಯವರು 'ಕಠಿಣ' ಶಿಕ್ಷೆಗೆ ಗುರಿಯಾದರೆ? ಈ ಪ್ರಶ್ನೆಗೆ ಅವತ್ತು ನಡೆದ ಪ್ರಕರಣದ ಬಗ್ಗೆ ಮತ್ತು ಅದರಲ್ಲಿನ ತಮ್ಮ ಪಾತ್ರದ ಬಗ್ಗೆ, ವಾಜಪೇಯಿಯವರೇ ನ್ಯಾಯಾಧೀಶ ಶಬ್ಬೀರ್ ಹಸನ್‌ರವರ ಮುಂದೆ ನೀಡಿದ ಹೇಳಿಕೆಯಲ್ಲಿಯೇ ಉತ್ತರ ಇದೆ.

ವಾಜಪೇಯಿ ನೀಡಿದ ಹೇಳಿಕೆ ಹೀಗಿದೆ: "ಆಗಸ್ಟ್ 27, 1942 ರಂದು ಬಾಟೇಶ್ವರ ಬಾಜಾರಿನಲ್ಲಿ ಯೋಧರ ವೀರಗಾಥೆಗಳನ್ನು ಹಾಡಲಾಗುತ್ತಿತ್ತು, ಮಧ್ಯಾಹ್ನ ಸುಮಾರು ಎರಡು ಗಂಟೆ ಸಮಯಕ್ಕೆ ಕಕುವಾ ಅಲಿಯಾಸ್ ಲೀಲಾಧರ ಮತ್ತು ಮಹೂವಾ ಆಗಮಿಸಿ ಭಾಷಣವನ್ನು ಮಾಡಿದರಲ್ಲದೆ ಅರಣ್ಯ ರಕ್ಷಣಾ ಕಾಯ್ದೆಯನ್ನು ಉಲ್ಲಂಘಿಸಬೇಕೆಂದು ಜನರನ್ನು ಪ್ರಚೋದಿಸಿದರು. ಸುಮಾರು ಇನ್ನೂರು ಜನ ಅರಣ್ಯ ಇಲಾಖೆಯ ಕಚೇರಿಯತ್ತ ನಡೆದರು. ನಾನು ಮತ್ತು ನನ್ನ ಅಣ್ಣ ಆ ಗುಂಪನ್ನು ಹಿಂಬಾಲಿಸಿ ಅರಣ್ಯ ಇಲಾಖೆಯ ಕಚೇರಿಯನ್ನು ಸಮೀಪಿಸಿದೆವು. ನಾನು ಮತ್ತು ನನ್ನ ಅಣ್ಣ ಕೆಳಗೆ ಉಳಿದೆವು. ಆದರೆ ಮಿಕ್ಕವರೆಲ್ಲ ಮೇಲೆ ಹತ್ತಿದರು. ಅಲ್ಲಿದ್ದವರಲ್ಲಿ ಕಕೂವ ಮತ್ತು ಮಹೂವಾ ಇಬ್ಬರ ಹೊರತಾಗಿ ಇತರರ ಹೆಸರು ನನಗೆ ತಿಳಿದಿಲ್ಲ.

ಇಟ್ಟಿಗೆಗಳೆಲ್ಲಾ ಬೀಳುತ್ತಿವೆ ಎಂದು ನನಗೆ ಅನ್ನಿಸಿತು. ಯಾರು ಆ ಕಟ್ಟಡವನ್ನು ಕೆಡುವುತ್ತಿದ್ದಾರೆ ಎಂದು ನನಗೆ ಗೊತ್ತಾಗದಿದ್ದರೂ ಇಟ್ಟಿಗೆಗಳು ಬೀಳುತ್ತಿದ್ದುದ್ದಂತೂ ನಿಜ.

ನಾನು ಮತ್ತು ನನ್ನ ಅಣ್ಣ ಮೈಪುರದತ್ತ ಹೋಗಲು ತಿರುಗಿದಾಗ ಆ ಗುಂಪು ನಮ್ಮ ಹಿಂದೆ ಇತ್ತು. ಮೇಲೆ ಉಲ್ಲೇಖಿಸಿದ ಜನ ಬಲವಂತವಾಗಿ ಜಾನುವಾರುಗಳನ್ನು ಬಿಡುಗಡೆ ಮಾಡಿದರಲ್ಲದೆ ಬಿಚ್ಕೊಳ್ಳಿಯತ್ತ ಸಾಗಿದರು. ಸುಮಾರು 10-12 ಜನ ಅರಣ್ಯ ಇಲಾಖೆಯ ಕಚೇರಿಯಲ್ಲಿದ್ದರು.

ಸುಮಾರು 100 ಅಡಿಗಳ ದೂರವಿದ್ದ ನಾನು ಆ ಸರ್ಕಾರಿ ಕಟ್ಟಡವನ್ನು ಕೆಡುವುದಕ್ಕೆ ಯಾವ ನೆರವನ್ನೂ ನೀಡಲಿಲ್ಲ. ಅದಾದ ನಂತರ ನಾವೆಲ್ಲರೂ ನಮ್ಮ ನಮ್ಮ ಮನೆಗಳಿಗೆ ಹಿಂದಿರುಗಿದೆವು."

ಈ ಹೇಳಿಕೆಯಲ್ಲಿ ಎರಡು ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ. ಅರಣ್ಯ ಇಲಾಖೆಯ ಕಾಯ್ದೆಗಳನ್ನು ಮುರಿದ ಗುಂಪಿನಲ್ಲಿದ್ದ ವಾಜಪೇಯಿಗೆ ಕಠಿಣ ಶಿಕ್ಷೆಯಾಗುವುದು ಗ್ಯಾರಂಟಿಯಾಗಿತ್ತು. ಆದರೆ ತಮಗೂ ಆ ಗುಂಪಿನ ಚಟುವಟಿಕೆಗಳಿಗೂ ಮತ್ತು ಅದರ ಉದ್ದೇಶಗಳಿಗೂ ಯಾವುದೇ ಸಂಬಂಧವಿರಲಿಲ್ಲ ಎಂದೇ ಹೇಳಿದ್ದಾರೆ ವಾಜಪೇಯಿ. ಹಾಗೆಯೇ ತಾನು ಯಾವ ಹಾನಿ ಮಾಡಿಲ್ಲವೆಂದೂ, ಅವರಿಗೆ ಯಾವ ನೆರವನ್ನು ನೀಡಿಲ್ಲವೆಂದೂ ಹೇಳಿದ್ದಾರೆ.

ಅದರರ್ಥ ಆ ಗುಂಪಿನಲ್ಲಿ ತಾನು ಇದ್ದಿದ್ದರೂ ಅವರ ಧ್ಯೇಯೋದ್ದೇಶಗಳಿಗೂ, ಅವರ ಕೃತ್ಯಕ್ಕೂ ತನಗೂ ಯಾವುದೇ ಸಂಬಂಧವಿರಲಿಲ್ಲವೆಂದೇ ವಾಜಪೇಯಿಯವರು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ವಾಜಪೇಯಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರು ಎಂದು ಹೇಳುವುದು ಅಸತ್ಯವಲ್ಲವೇ?

ಆದರೂ ವಾಜಪೇಯಿ ಮತ್ತು ಅವರ ಸಂಘಪರಿವಾರ ಅವರನ್ನು ಸ್ವಾತಂತ್ರ್ಯ ಹೋರಾಟಗಾರ ಎಂದೇ ಬಣ್ಣಿಸುತ್ತಾ ಬಂದಿದೆ. ಇತಿಹಾಸವನ್ನು ತಿರುಚುವಲ್ಲಿ ನಿಪುಣತೆಯನ್ನು ಹೊಂದಿರುವ ಸಂಘಪರಿವಾರ, ಬಾಟೇಶ್ವರ್ ವಾಜಪೇಯಿಯವರ ರಣರಂಗವಾಗಿತ್ತೆಂದೂ; "ಭಾರತ ಬಿಟ್ಟು ತೊಲಗಿ" ಹೋರಾಟದಲ್ಲಿ ಅವರು ಮಾಡಿದ ತ್ಯಾಗದಿಂದಾಗಿ ಜೈಲು ಸೇರಿದರೆಂದೂ ಹೇಳುತ್ತದೆ.

ವಾಜಪೇಯಿಯವರು ಸಹ ತಮ್ಮ ಬಯೋಡೇಟಾದಲ್ಲಿ "ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು 1942 ರಲ್ಲಿ ಜೈಲು ಸೇರಿದ್ದೆ" ಎಂದೇ ಹೇಳಿಕೊಂಡಿದ್ದಾರೆ. ಆದರೆ ತಮ್ಮ ಈ ಹೋರಾಟದ ವಿವರಗಳನ್ನು ನೀಡುವಲ್ಲಿ ವಾಜಪೇಯಿ ಪದಗಳ ತರ್ಕಕ್ಕೆ ಇಳಿಯುತ್ತಾರೆ. 'ದೈನಿಕ್ ಜಾಗರಣ್' ಎಂಬ ಪತ್ರಿಕೆಯ ಆಗಸ್ಟ್ 15, 1997ರ ಸಂಚಿಕೆಯಲ್ಲಿ ಬಾಟೇಶ್ವರ್ ಪ್ರಕರಣ ಕುರಿತಂತೆ ವಾಜಪೇಯಿಯವರೇ ಬರೆದ ಲೇಖನ ಈ ಪದಗಳ ತರ್ಕಕ್ಕೆ ಉತ್ತಮ ಸಾಕ್ಷಿ ಒದಗಿಸುತ್ತದೆ.

ಆ ಲೇಖನದಲ್ಲಿ ವಾಜಪೇಯಿ ಹೀಗೆ ಬರೆಯುತ್ತಾರೆ. "ಅವತ್ತು ಬಾಟೇಶ್ವರ ಬಾಜಾರಿನಲ್ಲಿ ಜಾತ್ರೆ ನಡೆಯುತ್ತಿತ್ತು. ಜನರ ದಂಡೇ ಅಲ್ಲಿ ಸೇರಿತ್ತು. ಆ ಪ್ರೇಕ್ಷಕರ ನಡುವೆ ನಾನೂ ಇದ್ದೆ. ಇದ್ದಕ್ಕಿದ್ದ ಹಾಗೆ ಮೂವರು ತರುಣರು ಆಗಮಿಸಿ, ವೀರಗಾಥೆಗಳನ್ನು ಹಾಡುತ್ತಿದ್ದವರನ್ನು ನಿಲ್ಲಿಸಿದರು. ಪ್ರೇಕ್ಷಕರಿಗೆ ಗಾಂಧೀಜಿಯವರ 'ಭಾರತ ಬಿಟ್ಟು ತೊಲಗಿ' ಚಳವಳಿಯ ಬಗ್ಗೆ ತಿಳಿಹೇಳಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಒದ್ದೋಡಿಸುವಂತೆ ಜನರನ್ನು ಪ್ರೇರೇಪಿಸಿದರು. ಗ್ರಾಮಸ್ಥರಿಗೆ ಆಗಸ್ಟ್ ಕ್ರಾಂತಿಯ ಬಗ್ಗೆ ಆದಾಗಲೇ ಗೊತ್ತಿತ್ತು. "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಘೋಷಣೆಗಳು ಹಳ್ಳಿಯಿಂದ ಪ್ರತಿಧ್ವನಿಸಿದವು. ಉದ್ರೇಕಗೊಂಡ ಗುಂಪು ಅರಣ್ಯ ಇಲಾಖೆಯ ಕಟ್ಟಡಗಳನ್ನು ಧ್ವಂಸ ಮಾಡಿತು. ಅರಣ್ಯ ಕಾನೂನುಗಳನ್ನು ಉಲ್ಲಂಘಿಸಿ, ಇಲಾಖೆಯ ಕಟ್ಟಡಗಳನ್ನು ನಾಶ ಮಾಡುವ ಮೂಲಕ ಬಾಟೇಶ್ವರದ ದೇಶಪ್ರೇಮಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆನಂತರ ನಡೆದ ಘಟನಾವಳಿಗಳು ತತ್ತರಿಸುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯದ ಅಸಹ್ಯ ಮುಖವನ್ನು ಕಳಚಿಟ್ಟಿತು. ಮರುದಿನ ಹಳ್ಳಿಯನ್ನು ಸುತ್ತುವರಿದ ಪೊಲೀಸರು ಕೈಗೆ ಸಿಕ್ಕಿದವರನ್ನೆಲ್ಲಾ ಬಂಧಿಸಲಾರಂಭಿಸಿದರು. ಆ ಹೋರಾಟದ ನಾಯಕರೆಲ್ಲಾ ತಲೆತಪ್ಪಿಸಿಕೊಂಡು ಭೂಗತರಾದರು. ಬಂಧಿತರಾದವರನ್ನು ಆಗ್ರಾ ಜೈಲಿಗೆ ಕಳುಹಿಸಲಾಯಿತು. ಜೈಲಿನಲ್ಲಿ ಬಂಧಿತರಾದವರಲ್ಲಿ ನಾನೂ ಒಬ್ಬ."

ಈ ಲೇಖನದಲ್ಲೂ ತಾನು ಪ್ರೇಕ್ಷಕ ನಾಗಿದ್ದೆ ಎಂದಿರುವ ವಾಜಪೇಯಿಯವರು ಅಂದು ನಡೆದ ಪ್ರತಿಭಟನೆಯಲ್ಲಿ ತಾನೂ ಸಕ್ರಿಯವಾಗಿ ಪಾಲುಗೊಂಡಿದ್ದೆ ಎಂದು ಹೇಳಿಯೇ ಇಲ್ಲ! ಏಕೆಂದರೆ ಅದಾಗಲೇ ಆರೆಸ್ಸೆಸ್‌ನ ಸದಸ್ಯತ್ವವನ್ನು ಪಡೆದಿದ್ದ ವಾಜಪೇಯಿ ಸ್ವಾತಂತ್ರ್ಯ ಸಂಗ್ರಾಮದ ಯಾವ ಹೋರಾಟದಲ್ಲೂ ಭಾಗವಹಿಸಿಯೇ ಇಲ್ಲ.

ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ಯಾವುದೇ ಸಂಪರ್ಕವನ್ನು ಆರೆಸ್ಸೆಸ್ ಇಟ್ಟುಕೊಂಡಿರಲಿಲ್ಲ ಮಾತ್ರವಲ್ಲ, ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ರಾಜಕೀಯವಾಗಿಯಾಗಲೀ ತಾತ್ವಿಕವಾಗಿಯಾಗಲೀ ವಿರೋಧಿಸಬಾರೆಂಬ ಫರ್ಮಾನನ್ನು ತನ್ನ ಸದಸ್ಯರಿಗೆ ಹೊರಡಿಸಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಒಂದೇ ಒಂದು ಧರಣಿ ಕೂಡ ಕೂರದಿದ್ದ ಆರ್‌ಎಸ್‌ಎಸ್ ತನ್ನ ಸದಸ್ಯರಿಗೆ ಬ್ರಿಟಿಷ್ ದೊರೆಗಳ ಬದಲಾಗಿ ಅಲ್ಪಸಂಖ್ಯಾತ ಮುಸ್ಲಿಮರ ಬಗ್ಗೆ ವಿಷಕಾರುವುದನ್ನು ಕಲಿಸುತ್ತಿತ್ತು.




"ಬಾಟೇಶ್ವರ್ ಪ್ರಕರಣ ನಡೆದಾಗ ವಾಜಪೇಯಿ ಇನ್ನೂ ಎಳಸು ವಯಸ್ಸಿನವರಾಗಿದ್ದರು. ಅವರಿಗೆ ರಾಜಕೀಯ ಅರ್ಥವಾಗುತ್ತಿರಲಿಲ್ಲ. ಶಾಲಾ ಶಿಕ್ಷಕರಾಗಿದ್ದ ತಂದೆಗೆ ಹೆದರಿ 'ನಾನು ಕೇವಲ ಪ್ರೇಕ್ಷಕನಾಗಿದ್ದೆ' ಎಂದು ಹೇಳಿದ್ದರು" ಎಂದು ಕೆಲವರು ವಾದಿಸಬಹುದು. ಆದರೆ ಈ ಯಾವ ವಾದಗಳೂ ನಿಲ್ಲುವುದಿಲ್ಲ.

ಏಕೆಂದರೆ ಆಗ ಕಾಲೇಜಿನಲ್ಲಿದ್ದ ವಾಜಪೇಯಿ ಚರ್ಚಾಪಟುವಾಗಿದ್ದರಲ್ಲದೆ, ಬಾಟೇಶ್ವರ್ ಘಟನೆ ನಡೆದ ನಾಲ್ಕು ವರ್ಷಗಳ ಮುನ್ನವೇ ಆರೆಸ್ಸೆಸ್ ಸದಸ್ಯತ್ವವನ್ನು ಪಡೆದಿದ್ದರು. ಹಾಗೆಯೇ ತಮ್ಮ ತಂದೆಯವರನ್ನು ಧಿಕ್ಕರಿಸಿಯೇ ಆರೆಸ್ಸೆಸ್ ನಡೆಸುವ ಶಾಖೆಗಳಲ್ಲಿ ಭಾಗವಹಿಸಿದ್ದರು. 1939 ರಲ್ಲೇ ಆರೆಸ್ಸೆಸ್‌ನ ಸಕ್ರಿಯ ಸದಸ್ಯರಾಗಿದ್ದ ವಾಜಪೇಯಿ 1940 ರಲ್ಲಿ ನಾಗಪೂರ್‌ನಲ್ಲಿ ಜರುಗಿದ 'ನಾಯಕತ್ವ ತರಬೇತಿ ಶಿಬಿರ'ದಲ್ಲಿ ಭಾಗವಹಿಸಿದ್ದರು. ಹೀಗೆ ಆರೆಸ್ಸೆಸ್‌ನ ಸ್ವಾತಂತ್ರ್ಯ ಸಂಗ್ರಾಮದ ವಿರೋಧಿ ನಿಲುವನ್ನು ಆದಾಗಲೇ ಮೈಗೂಡಿಸಿಕೊಂಡಿದ್ದ ವಾಜಪೇಯಿ ಬಾಟೇಶ್ವರದಲ್ಲಿ ಕೇವಲ ಪ್ರೇಕ್ಷಕರಾಗಿದ್ದು ಸಹಜವೇ.

ಇದೆಲ್ಲದರಿಂದಾಗಿ ವಾಜಪೇಯಿ ಖಂಡಿತವಾಗಿಯೂ ಸ್ವಾತಂತ್ರ್ಯ ಹೋರಾಟಗಾರರಲ್ಲ ಎಂಬುದು ಸಾಬೀತಾಗುತ್ತದೆ. ಹೀಗಿದ್ದೂ ಅವರನ್ನು ಹೋರಾಟಗಾರ ಎಂದು ಬಿಂಬಿಸುವುದು ಇತಿಹಾಸವನ್ನು ತಿರುಚಿದಂತೆ ಮಾತ್ರವಲ್ಲ, ಈ ದೇಶದ ಸ್ವಾತಂತ್ರ್ಯಕ್ಕೆ ನಿಜವಾಗಲೂ ಹೋರಾಡಿದವರನ್ನು ಅವಮಾನಿಸಿದಂತೆ.

ಈಗ 'ಅಂದು ವಾಜಪೇಯಿ ನೀಡಿದ ಸಾಕ್ಷಿಯಿಂದಾಗಿ ಯೇ ನಿಜವಾದ ಹೋರಾಟಗಾರರು ಜೈಲು ಪಾಲಾದರೆ?' ಎಂಬ ಪ್ರಶ್ನೆಗೆ ಬರೋಣ.

⏭ 12

ಕೆಐಎಡಿಬಿ ಭ್ರಷ್ಟರಿಗೆ ಕಡಿವಾಣ ಯಾವಾಗ?

ಇಲ್ಲಿಗೆ ಆರು ವರ್ಷಗಳ ಹಿಂದೆ ಬಿಜೆಪಿ ದೇಶಭಕ್ತರು ಕರ್ನಾಟಕದ ಆಡಳಿತದ ಚುಕ್ಕಾಣಿ ಹಿಡಿದದ್ದೇ ತಡ, ಕರ್ನಾಟಕ ಇಡೀ ದೇಶದಲ್ಲೇ ಭಾರೀ ಸುದ್ದಿ ಮಾಡಿಬಿಟ್ಟಿತು. ಮೊದಲಿಗೆ ಶಾಸಕರನ್ನು ಖರೀದಿಸಿದ ಆಪರೇಷನ್ ಕ-ಮಲ ಕಾರ್ಯಾಚರಣೆ, ಅದರ ಬೆನ್ನಲ್ಲೇ ಸಾಲುಸಾಲು ಹಗರಣಗಳು, ಮಂತ್ರಿಗಳ-ಶಾಸಕರ ಜೈಲು ಯಾತ್ರೆ ಇತ್ಯಾದಿ ಇತ್ಯಾದಿ, ಕನ್ನಡಿಗರು ಇಡೀ ದೇಶದ ಮುಂದೆ ತಲೆತಗ್ಗಿಸಬೇಕಾದ ಪರಿಸ್ಥಿತಿ.

ಈಗ ಸರ್ಕಾರ ಬದಲಾಗಿದೆ. ಆದರೆ ಪರಿಸ್ಥಿತಿಯಲ್ಲಿ ಆಮೂಲಾಗ್ರ ಬದಲಾವಣೆ ಬರುವುದು ಹಾಗಿರಲಿ, ಗಮನಾರ್ಹ ಬದಲಾವಣೆಯೂ ಬಂದಿಲ್ಲ. ಇತ್ತ ಭ್ರಷ್ಟಾಚಾರ ಆರೋಪಗಳಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ ರಾಜಕಾರಣಿಗಳು, ಅಧಿಕಾರಿಗಳು ಮೀಸೆ ತಿರುವುತ್ತಾ ಮೆರೆಯುತ್ತಿದ್ದರೆ, ಮತ್ತೊಂದೆಡೆ ಬ್ರಹ್ಮಾಂಡ ಭ್ರಷ್ಟಾಚಾರ-ಅಧಿಕಾರ ಮದಗಳಲ್ಲಿ ಮೆರೆದ ಅಧಿಕಾರಿ ವರ್ಗ ಅಂಕೆ-ಶಂಕೆ ಇಲ್ಲದೆ ತನ್ನ ಎಂದಿನ ಕಾಯಕ ಮುಂದುವರೆಸಿದೆ. ಈ ಭ್ರಷ್ಟ ಅಧಿಕಾರಿಗಳಿಗೆ ಹೆಚ್ಚೆಂದರೆ ಒಂದು ವರ್ಗಾವಣೆ ಆಗಿರಬಹುದಷ್ಟೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ)ಯಲ್ಲಿ ನಡೆದ ಹಗರಣಗಳ ಸರಮಾಲೆಯ ಬಗ್ಗೆ ಇತ್ತೀಚೆಗೆ ಸಿ.ಎ.ಜಿ ತನ್ನ ತನಿಖಾ ವರದಿ ನೀಡಿದೆ. ಸಾರ್ವಜನಿಕ ಸಂಪನ್ಮೂಲ ಮತ್ತು ಬೊಕ್ಕಸದ ರಕ್ಷಣೆಯ ಹಿತದೃಷ್ಟಿಯಿಂದ ಸಿ.ಎ.ಜಿ ವರದಿಯಲ್ಲಿ ವಿವರಿಸಲಾಗಿರುವ ಭ್ರಷ್ಟ ಪ್ರಕರಣಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಭ್ರಷ್ಟರ ಮೇಲೆ ಕಾನೂನು ಕ್ರಮ ಜರುಗಿಸಬೇಕಿದ್ದ ಈಗಿನ ಸರ್ಕಾರ ಈ ಬಗ್ಗೆ ಮೀನ-ಮೇಷ ಎಣಿಸುತ್ತಿದೆ. ಇದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಗುಮಾನಿಗಳನ್ನು ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸಿ.ಎ.ಜಿ ವರದಿಯ ಕೆಲ ಮುಖ್ಯಾಂಶಗಳತ್ತ ಗಮನ ಹರಿಸೋಣ. ಸಿಎಜಿಯ ಲೆಕ್ಕ ಪರಿಶೋಧನೆಯ ಉದ್ದೇಶ ಈ ಕೆಳಗಿನ ಮೂರು ಅಂಶಗಳನ್ನು ಪರಿಶೀಲಿಸುವುದಾಗಿತ್ತು.

1) ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಭೂಸ್ವಾಧೀನವು ಕಾನೂನು ಚೌಕಟ್ಟಿನೊಳಗಿದ್ದಿತೆ? ಹಾಗೂ ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿತ್ತೇ?

2) ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ ನೀಡುವಾಗ ಮೋಸದ ಪಾವತಿಗಳನ್ನು ತಡೆಯಲು ಸಮರ್ಪಕ ವಿಧಾನಗಳನ್ನು ಅನುಸರಿಸಲಾಗಿತ್ತೆ? ಮತ್ತು

3) ಉದ್ಯಮಿಗಳಿಗೆ ಭೂಮಿಯ ಹಂಚಿಕೆಯನ್ನು ನ್ಯಾಯೋಚಿತ, ಪಾರದರ್ಶಕ ಮತ್ತು ಸಮರ್ಥವಾಗಿ ಮಾಡಲಾಗಿತ್ತೆ?

ಅಂತಿಮ ವಿಶ್ಲೇಷಣೆಯಲ್ಲಿ ಈ ಮೂರೂ ಪ್ರಮುಖ ಅಂಶಗಳಲ್ಲಿ ಕೆಐಎಡಿಬಿ ವ್ಯಾಪಕ ಅಕ್ರಮ ನಡೆಸಿರುವುದು ಹೊರಬಿದ್ದಿದೆ.

ಬಿಜೆಪಿ ಯುಗದಲ್ಲಿ ಬಳ್ಳಾರಿಯ ಅಕ್ರಮ ಗಣಿಗಳಿಂದ ಎದ್ದ ಧೂಳು ವಿಧಾನಸೌಧವನ್ನೇ ಆವರಿಸಿಕೊಂಡಿತ್ತು ನೋಡಿ. ಅದೇ ಕಾಲದಲ್ಲಿ ಬಳ್ಳಾರಿ ಫಾಸಲೆಯಲ್ಲಿ ಭಾರೀ ಉಕ್ಕು ಸ್ಥಾವರವೊಂದನ್ನು ಸ್ಥಾಪಿಸಿ ಬಂಪರ್ ಲಾಭ ಮಾಡುವ ಯೋಚನೆ ಆರ್ಸೆಲರ್ ಮಿತ್ತಲ್ ಕಂಪನಿಯ ಮಾಲಿಕರ ತಲೆಯಲ್ಲಿ ಮೂಡಿತ್ತು, ಆಗಿನ ಸರ್ಕಾರದ ಆಯಕಟ್ಟಿನ ಸ್ಥಾನಗಳಲ್ಲಿದ್ದ ಪ್ರಭೃತಿಗಳ ಮುಂದೆ ತಮ್ಮ ಇಂಥಾ ಅಭಿಲಾಷೆಯನ್ನು ಆ ಕಂಪನಿ ಮುಂದಿಟ್ಟದ್ದೇ ತಡ, ಕೆಐಎಡಿಬಿ "ಮಂಡಳಿಯು ಮೇ 2010ರಲ್ಲಿ (ಬಳ್ಳಾರಿ ಜಿಲ್ಲೆಯ ಕುಡುತಿನಿ ಗ್ರಾಮದಲ್ಲಿ 4,156 ಎಕರೆಗಳು ಮತ್ತು ಹರಗಿನ ದೋಣಿ ಗ್ರಾಮದಲ್ಲಿ 709 ಎಕರೆ) 4,865 ಎಕರೆಗಳನ್ನು ಸ್ವಾಧೀನಪಡಿಸಿಕೊಂಡಿತು."

ಕಂಪನಿ ಮತ್ತು ಸಂಬಂಧಿತ ಅಧಿಕಾರಿಗಳ ನಡುವಿನ ಮೌಖಿಕ ವ್ಯವಹಾರದ ಆಧಾರದ ಮೇಲೆ ಹೀಗೆ ಭಾರೀ ಪ್ರಮಾಣದ ಭೂಸ್ವಾಧೀನವನ್ನು ತರಾತುರಿಯಲ್ಲಿ ಮಾಡಿ ಮುಗಿಸಲಾಗಿತ್ತು. ಈ ಅಂಶದ ಬಗ್ಗೆ ಸಿಎಜಿ ಆಕ್ಷೇಪ ಎತ್ತಿದೆ. "ಮಂಡಳಿಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಕಾರ್ಮಿಕ ವಸಾಹತನ್ನು ಸ್ಥಾಪಿಸಲು ಕಂಪನಿಯು ಹೆಚ್ಚುವರಿ ಭೂಮಿಗಾಗಿ ಎಸ್‌ಎಚ್‌ಎಲ್‌ಸಿಸಿಯ ಅನುಮತಿಯನ್ನು ಕೋರಲೂ ಇಲ್ಲ ಮತ್ತು ಕಂಪನಿಯೊಂದಿಗೆ ಅಗತ್ಯವಿದ್ದ ಭೂಮಿಯ ವಿಸ್ತಾರವನ್ನು ನಿಗದಿಪಡಿಸಿ, ಯಾವುದೇ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ."

ನಂತರದ ದಿನಗಳಲ್ಲಿ ಕರ್ನಾಟಕದ ರಾಜಕೀಯದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದುಹೋದವು. ಗಣಿಧಣಿಗಳು ಜೈಲು ಪಾಲಾದರು. ಗಣಿ ಧೂಳಿನ ಅಬ್ಬರ ಕಡಿಮೆಯಾಯಿತು. "ಸ್ವಾಧೀನಪಡಿಸಿಕೊಂಡ 4,865 ಎಕರೆ ಭೂಮಿಯಲ್ಲಿ ಹರಗಿನದೋಣಿ ಗ್ರಾಮದಲ್ಲಿನ 709 ಎಕರೆಗಳನ್ನು ತಮ್ಮ ಯೋಜನೆಗೆ ಅಗತ್ಯವಿಲ್ಲ ಎನ್ನುವ ಕಾರಣ ನೀಡಿ ಕಂಪನಿಯು ತನ್ನ ಒಡೆತನಕ್ಕೆ ಪಡೆಯಲು ನಿರಾಕರಿಸಿತು (ಜನವರಿ 2011)." ಪರಿಣಾಮವಾಗಿ ರೈತರಿಂದ ಕಸಿದುಕೊಂಡಿದ್ದ ಭಾರೀ ಪ್ರಮಾಣದ ಕೃಷಿಭೂಮಿ ಹಾಳಾಗಿದ್ದು ಒಂದುಕಡೆಯಾದರೆ, ಮತ್ತೊಂದೆಡೆ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆಂದು ವ್ಯಯಿಸಲಾದ ನೂರಾರು ಕೋಟಿ ಬೊಕ್ಕಸದ ಹಣ ವ್ಯರ್ಥವಾಯಿತು.

KARNATAKA INDUSTRIAL AREAS DEVELOPMENT BOARD

ಈ ವಿಷಯದಲ್ಲಿ ಕೆಐಎಡಿಬಿ ನೀಡಿರುವ ಸಮರ್ಥನೆ ಕಾನೂನುಬಾಹಿರ ಮಾತ್ರವಲ್ಲ, ತೀರಾ ಹೊಣೆಗೇಡಿತನದಿಂದ ಕೂಡಿದೆ. ಮಂಡಳಿಯ ಪ್ರಕಾರ "ಈ ಯೋಜನೆಯು ರಾಜ್ಯಕ್ಕೆ ಒಂದು ಹೆಮ್ಮೆಯ ಯೋಜನೆಯಾಗಿದ್ದರಿಂದ, ಭವಿಷ್ಯತ್ತಿನಲ್ಲಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸಲು ಅದನ್ನು ರಾಜ್ಯದಲ್ಲಿ ಉಳಿಸಿಕೊಳ್ಳುವುದು ಅಗತ್ಯವಾಗಿತ್ತು" ಎಂಬುದು. ಈ ವಾದವನ್ನು ತಿರಸ್ಕರಿ[...] ಸಿಎಜಿ "ಭೂಮಿಯ ಹಂಚಿಕೆಯ ವಿಷಯದಲ್ಲಿ ಮಂಡಳಿಯು ಒಂದೇ ರೀ[...] ಕಾರ್ಯವಿಧಾನವನ್ನು ಅನುಸರಿಸಬೇಕು ಮತ್ತು ತನ್ನ ವಿವೇಚನೆಯಿಂದ [...] ಕಡೆ ಮಾತ್ರ ಅದನ್ನು ಸಡಿಲಿಸುವ ಸ್ವಾತಂತ್ರವನ್ನು ಅದಕ್ಕೆ ನೀಡಿಲ್ಲವಾದ್ದ[...] ಈ ಉತ್ತರವನ್ನು ಒಪ್ಪಲಾಗುವುದಿಲ್ಲ" ಎಂದು ಸ್ಪಷ್ಟಪಡಿಸಿದೆ. ಆದರೂ ಮ[...] ತನ್ನ ಅಕ್ರಮವನ್ನು ಸಮರ್ಥಿಸಿಕೊಳ್ಳಲು ಮತ್ತೆ ಅದೇ ರಾಗ ಮುಂದುವರೆಸಿರು[...] ಅದರ ಭಂಡತನಕ್ಕೆ ಹಿಡಿದ ಕನ್ನಡಿ.

ಕಾರ್ಪೊರೇಟ್ ಕಂಪನಿಗಳ ಪರವಾಗಿ ಸಾರ್ವಜನಿಕ ಹಿತಾಸಕ್ತಿ[...] ಬಲಿಕೊಡುವುದು ಮಾತ್ರವಲ್ಲದೆ ಇನ್ನೂ ನಾನಾಬಗೆಯ ಅಕ್ರಮಗಳು [...] ವರದಿಯಿಂದ ಬಯಲಾಗಿವೆ.

ಬೆಂಗಳೂರು ಉತ್ತರದಲ್ಲಿರುವ ಯಲಹಂಕ ತಾಲೂಕಿನ ಸಿಂಗಹಳ್ಳಿ ಗ್ರಾ[...] ಲಭ್ಯವಿದ್ದ 42 ಎಕರೆ, 36 ಗುಂಟೆ ಸರ್ಕಾರಿ ಭೂಮಿಯನ್ನು ಸ್ವಾಧೀನ[...] ಕೈಬಿಟ್ಟು, ಖಾಸಗಿ ವ್ಯಕ್ತಿಗಳ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ[...] ಎಕರೆ ಖಾಸಗಿ ಭೂಮಿಗೆ 15 ಕೋಟಿಗೂ ಹೆಚ್ಚು ಪರಿಹಾರಧನ ವಿತರಿಸಲ[...] ಸರ್ಕಾರಿ ಭೂಮಿಯನ್ನು ಕೈಬಿಡಲು ಮಂಡಳಿ ನೀಡಿದ ಕಾರಣ ಆ ಭೂ[...] ಕೆರೆದಂಡೆಯಲ್ಲಿದೆ ಎಂಬುದಾಗಿತ್ತು. ಆದರೆ ಪರಿಶಿಲನೆ ನಡೆಸಿದಾಗ ಆ ಸ್ಥ[...] ಯಾವುದೇ ಕೆರೆಪ್ರದೇಶವೇ ಇರಲಿಲ್ಲ ಎಂಬ ಸತ್ಯ ಹೊರಬಿದ್ದಿದೆ.

ಇದು ಕೇವಲ ಅಚಾತುರ್ಯದಿಂದಾದ ಪ್ರಕರಣ ಎಂದರೆ ಯಾರಾ[...] ನಂಬುತ್ತಾರೆಯೆ? ಅಧಿಕಾರಿಗಳ ಇಂಥಾ ಕ್ರಮದಿಂದಾಗಿ, ಲಭ್ಯವಿದ್ದ ಸ[...] ಭೂಮಿ ಭೂಗಳ್ಳರ ಪಾಲಾಗಲು ಅನುವು ಮಾಡಿಕೊಟ್ಟಿದ್ದು ಒಂದೆಡೆಯ[...] ಮತ್ತೊಂದೆಡೆ ಸರ್ಕಾರಿ ಬೊಕ್ಕಸಕ್ಕೆ ಕೋಟ್ಯಾಂತರ ರೂಗಳ ಹೊರೆ ಬಿ[...]

ಇನ್ನೊಂದು ಪ್ರಕರಣ ಮತ್ತಷ್ಟು ಕುತೂಹಲಕರವಾಗಿದೆ.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ಕೆಲವು ಗ್ರಾಮ[...] ಕೇಂದ್ರ ಸರ್ಕಾರಿ ಸಂಸ್ಥೆಯಾದ ಇಂಡಿಯನ್ ಆಯಿಲ್ ಕಾರ್ಪೊರೇ[...] ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನೇ ಮತ್ತೆ ಸ್ವಾಧೀನಪಡಿಸಿಕೊಂಡು [...] ಪ್ರಮಾಣದ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ. ಐಒಸಿ ನೀಡಿದ್ದ [...] 19.90 ಲಕ್ಷ! ಆದರೆ ಮಂಡಲಿ ನೀಡಿದ ಮೊತ್ತ 4 ಕೋಟಿ 36 ಲ[...]

ಇನ್ನು ಕಾನೂನನ್ನು ಮನಸೋ ಇಚ್ಛೆ ಉಲ್ಲ[...] ಮಾಡಿರುವ ಪ್ರಕರಣಗಳು ಯಥೇಚ್ಛವಾಗಿವೆ. ಬೆಂಗಳ[...] ಕುಡಿಯುವ ನೀರಿನ ಒಂದು ಪ್ರಮುಖ ಮೂಲವಾ[...] ತಿಪ್ಪಗೊಂಡನಹಳ್ಳಿ ಜಲಾಶಯದ ಸಮೀಪದ ನಿರ್ಬ[...] ಪ್ರದೇಶದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಸ್ಥಾ[...] ತೀವ್ರ ವಿರೋಧಕ್ಕೆ ಕಾರಣವಾಗಿತ್ತು. ಕೆಲವು [...] ಕಂಪನಿಗಳ ಲಾಬಿಗೆ ಒಳಗಾಗಿದ್ದ ಮಂಡಳಿ [...] ಕಾನೂನುಗಳನ್ನು ಉಲ್ಲಂಘನೆ ಮಾಡಿದೆಯೆಂದು ಸಿಎಜಿ ಉಲ್ಲೇಖಿಸಿದೆ.

ಇನ್ನೂ ಕೆಲವು ಸಂದರ್ಭಗಳಲ್ಲಿ ಸಂಬಂಧಿತ ಪ್ರಾಧಿಕಾರಗಳ ಅನು[...] ಪರವಾನಗಿ ಪಡೆಯುವುದು ಕಡ್ಡಾಯವಾಗಿದ್ದರೂ ಮಂಡಳಿ ಸರ್ವಾಧಿಕಾರಿ[...] ವರ್ತಿಸಿ ಭೂಪರಿವರ್ತನೆ/ ಭೂಸ್ವಾಧೀನ ಪ್ರಕ್ರಿಯೆಗಳನ್ನು ನಡೆಸಿದೆ.

ಪರಿಹಾರಧನ ವಿತರಣೆಯಲ್ಲಿ ಅಕ್ರಮ

ಅಂದಿನ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತು [...] ಪುತ್ರ ಇಂಥದೇ ಅಕ್ರಮಗಳಲ್ಲಿ ಜೈಲು ಸೇರಿದ್ದು ಈಗ ಹಳೆಯ ಸ[...] ಅವರದೆ ಮಾಲಿಕತ್ವದ ಇಟಾಸ್ಕಾ ಎಂಬ ಕಂಪನಿಗೆ ಸಂಬಂಧಿಸಿದ ಮ[...] ಅಕ್ರಮಗಳನ್ನು ಸಿಎಜಿ ಇದೀಗ ಬಹಿರಂಗಪಡಿಸಿದೆ. ಬಂಡಿಕೊಡಿಗೆ ಹ[...] ಒಂದು ಜಮೀನಿನ ಮೂಲ ಮಾಲಿಕ ಮಾಗಡಿಯಪ್ಪ ಎಂಬುವವರ ಬ[...] ಇಟಾಸ್ಕಾ ಕಂಪನಿ ಬಳಗದ ಎಂ.ಎಚ್.ಸೋನಿ ಎಂಬುವವರಿಗೆ ಯಾ[...] ದಾಖಲಾತಿಗಳನ್ನು ಪಡೆಯದೆ ಸದರಿ ಕಂಪನಿಯ ಶಿಫಾರಸ್ಸಿನ ಮೇರೆಗೆ ಪರಿ[...] ವಿತರಿಸಲಾಗಿದೆ. ಆದರೆ ಹೀಗೆ ಇಟಾಸ್ಕಾ ಕಂಪನಿಯ ಶಿಫಾರ[...] ಆಧಾರವಾಗಿಟ್ಟುಕೊಂಡು ಅನಾಮಧೇಯ ವ್ಯಕ್ತಿಯೊಬ್ಬನಿಗೆ ಕೋಟ[...] ರೂಪಾಯಿ ಪರಿಹಾರ ಪಾವತಿ ಮಾಡಲು ಕೆಐಎಡಿಬಿ ಕಟ್ಟಾ ನಾ[...] ಖಾಸಗಿ ಸ್ವತ್ತೆ? ಆದರೆ ಬಿಜೆಪಿ ಆಡಳಿತದ ಅಭಿವೃದ್ಧಿ ಮಾದರಿಯಲ್ಲಿ [...] ಮಾಮೂಲು.ಇನ್ನೂ ಆಶ್ಚರ್ಯದ ಸಂಗತಿಯೆಂದರೆ, ಇದೇ ಭೂ[...] ಮಾಗಡಿಯಪ್ಪನ ವಾರಸುದಾರ ರಂಗಸ್ವಾಮಿ ಎಂಬುವವರಿಗೂ ಕೋಟಿ[...] ಪರಿಹಾರ ಸಂದಾಯವಾಗಿದೆ! ಹುಚ್ಚುಮುಂಡೆ ಮದುವೆಯಲ್ಲಿ ಉಂಡ[...] ಜಾಣ ಅಂತಾರಲ್ಲಾ ಹಾಗೆ.

ಇನ್ನೂ ಮಂಡಳಿಯ ಡಿನೋಟಿಫಿಕೇಷನ್ ಹಗರಣಗಳ ಬಗ್ಗೆ ಹೇ[...] ಹೋದರೆ ಅದು ಸುದೀರ್ಘ ರಾಮಾಯಣವಾಗುತ್ತದೆ. ರಾಜ್ಯದಲ್ಲಿ ಕೈಗಾರಿ[...] ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕಿದ್ದ ಮಂಡಳಿ ಭ್ರಷ್ಟಾಚಾರ [...] ಖಾಸಗಿ ಕಂಪನಿಗಳ/ ರಾಜಕಾರಣಿಗಳ ಕೈಗೊಂಬೆಯಾಗಿರುವುದನ್ನು ತಡೆಗ[...] ಈ ಸರ್ಕಾರಕ್ಕೆ ಏನಾದರೂ ಕಾಳಜಿಯಿದೆ ಎಂದು ನಾವು ನಿರೀಕ್ಷಿಸಬ[...]

■ ದೊಡ್ಡಿಪಾಳ್ಯ ನರಸಿಂಹಮೂ[...]

ಗೋಮಾಳ ಗುಳುಂ

ಗೋಮಾಳ ಗುಳುಂ ಎಂದರೆ ಯಾರೋ ಖಾಸಗಿ ವ್ಯಕ್ತಿಗಳು ಇಂಥಾ ಕೆಲಸ ಮಾಡಿರುತ್ತಾರೆ ಎಂದುಕೊಳ್ಳಬೇಡಿ. ಆಶ್ಚರ್ಯದ ಸಂಗತಿಯೆಂದರೆ ಕೆಐಎಡಿಬಿ ಅಧಿಕಾರಿಗಳೇ ಇಂಥಾ ಹೀನಕೃತ್ಯದಲ್ಲಿ ತೊಡಗಿದ್ದಾರೆ. ಕಳೆದ ಕೆಲವು ತಿಂಗಳ ಹಿಂದೆ ಬಿಡದಿ ಪೊಲೀಸ್ ಠಾಣೆಯಲ್ಲಿ ಅಧಿಕೃತ ದೂರೂ ದಾಖಲಾಗಿದೆ!

ಮೈಸೂರು ರಸ್ತೆಯಲ್ಲಿರುವ ಬಿಡದಿ ಕೈಗಾರಿಕಾ ಪ್ರದೇಶವು ಬೆಂಗಳೂರು ನಗರಕ್ಕೆ ಬಹಳ ಸಮೀಪದಲ್ಲಿರುವುದರಿಂದ ಹಾಗೂ ಈ ಪ್ರದೇಶದಲ್ಲಿ ಮೂಲ ಸೌಕರ್ಯಗಳು ಸಾಕಷ್ಟು ಅಭಿವೃದ್ಧಿ ಹೊಂದಿರುವುದರಿಂದ ಇಲ್ಲಿನ ಕೈಗಾರಿಕಾ ಭೂಮಿಗೆ ಅತಿ ಹೆಚ್ಚಿನ ಬೇಡಿಕೆ ಇದೆ. ಈಗಾಗಲೇ ಟೊಯೋಟಾ, ಕೋಕಾಕೋಲಾ, ಮೈಕೋ-ಬಾಷ್‌ನಂತಹ ಬ.ರಾ.ಕಂ.ಗಳನ್ನು ಒಳಗೊಂಡು ಸಾವಿರಾರು ಕಂಪನಿಗಳು ಇಲ್ಲಿ ಬೀಡುಬಿಟ್ಟಿವೆ. ಹೀಗೆ ಕೈಗಾರಿಕಾ ಭೂಮಿಗೆ ಉದ್ಯಮಿಗಳಿಂದ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಕೆಐಎಡಿಬಿ ಅಧಿಕಾರಿಗಳು ಗೋಮಾಳಗಳನ್ನು ಅಕ್ರಮವಾಗಿ ಕಬಳಿಸಿ ಖಾಸಗಿ ಕಂಪನಿಗಳಿಗೆ ವರ್ಗಾಯಿಸುವ ಅಕ್ರಮ ಕೃತ್ಯದಲ್ಲಿ ತೊಡಗಿದ್ದಾರೆ.

ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಅಬ್ಬನಕುಪ್ಪೆ ಗ್ರಾಮದ ಸರ್ವೆ ನಂಬರ್ 135, ಬಳೆವೀರನಹಳ್ಳಿ ಗ್ರಾಮದ ಸರ್ವೆ ನಂಬರ್ 9, ಬಾನಂದೂರು ಗ್ರಾಮದ ಸರ್ವೆ ನಂಬರ್ 244 ಹಾಗೂ ಶಾನುಮಂಗಲ ಗ್ರಾಮದ ಸರ್ವೆ ನಂಬರ್ 82ರಲ್ಲಿದ್ದ ಸುಮಾರು 10 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಕೆಐಎಡಿಬಿ ಒತ್ತುವರಿ ಮಾಡಿಕೊಂಡಿದೆ. ಒಂದುವೇಳೆ ಈ ಗೋಮಾಳಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಂಥಾ ಅನಿವಾರ್ಯವೇ ಆಗಿದ್ದ ಪಕ್ಷದಲ್ಲಿ ಈ ಬಗ್ಗೆ ಜಿಲ್ಲಾಡಳಿತದಿಂದ ಹಾಗೂ ಕಂದಾಯ ಇಲಾಖೆಯಿಂದ ಅಗತ್ಯ ಮಂಜೂರಾತಿ ಪಡೆದುಕೊಳ್ಳಬೇಕಾದ್ದು ಕಡ್ಡಾಯ. ಆದರೆ ಸರ್ಕಾರಿ ಸ್ವತ್ತುಗಳಿಗೆ ತಾವೇ ಮಾಲಿಕರು ಎಂಬಂಥ ಸರ್ವಾಧಿಕಾರಿ ಧೋರಣೆಯಲ್ಲಿರುವ ಅಧಿಕಾರಿಗಳು ಎಲ್ಲ ಕಾನೂನುಗಳನ್ನು ಗಾಳಿಗೆ ತೂರಿ ಈ ಗೋಮಾಳ ಭೂಮಿಗಳನ್ನು ಖಾಸಗಿ ಕಂಪನಿಗಳಿಗೆ ವರ್ಗಾಯಿಸಿ ಕೃತಾರ್ಥರಾಗಿದ್ದಾರೆ. ಈ ಜಮೀನಿನಲ್ಲಿ ಸದರಿ ಕಂಪನಿಗಳ ಕೈಗಾರಿಕಾ ಕಟ್ಟಡ ನಿರ್ಮಾಣ ಕಾಮಗಾರಿ ಭರದಿಂದ ಸಾಗಿದೆ.

ಹೀಗಿರುವಾಗ ಜಿಲ್ಲಾಡಳಿತದ ಮಧ್ಯಪ್ರವೇಶದಿಂದ ಈ ಪ್ರಕರಣ ಕುತೂಹಲಕರ ತಿರುವು ಪಡೆದುಕೊಂಡಿದೆ. ರಾಮನಗರ ಜಿಲ್ಲಾಧಿಕಾರಿ ಶ್ರೀರಾಮರೆಡ್ಡಿ ಅವರ ಸೂಚನೆ ಮೇರೆಗೆ ರಾಮನಗರ ತಹಸೀಲ್ದಾರ್ ಹನುಮಂತರಾಯಪ್ಪ ಕೆಐಎಡಿಬಿಯ ಸಹಾಯಕ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಅಡಿಗ ಹಾಗೂ ಸಹಾಯಕ ಇಂಜಿನಿಯರ್ ಸತೀಶ್ ಮೇಲೆ ಬಿಡದಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇದರ ಜೊತೆಗೆ ಫಲಾನುಭವಿ ಕಂಪನಿಗಳಾದ ಪಿವಿವಿಆರ್ ಡಾಟಾ ಸಿಟಿ ಪ್ರೈವೇಟ್ ಲಿಮಿಟೆಡ್, ಎಂ.ಎಂ.ಪ್ಲಾಸ್ಟಿಕ್ ಉದ್ಯೋಗ್, ಫ್ಯಾಬಿಯಾನಿಕ್ಸ್ ಪ್ರೈವೇಟ್ ಲಿಮಿಟೆಡ್, ಆರ್.ಪಿ.ಮೆಟಲ್ ಪ್ರೈವೇಟ್ ಲಿಮಿಟೆಡ್, ಎಂ.ಎಸ್.ಪ್ಲಾಸ್ಟಿಕ್ ಸ್ಟೈಲ್, ಪ್ರೇಮ್ ಪ್ಯಾಕೇಜಿಂಗ್ ಎಂಬ ಕಂಪನಿಗಳ ಮ್ಯಾನೇಜಿಂಗ್ ಡೈರೆಕ್ಟರ್‌ಗಳ ಮೇಲೆ ಕೇಸು ದಾಖಲಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಕೈಗಾರಿಕಾ ಕಟ್ಟಡ ನಿರ್ಮಾಣ ನಡೆಯುತ್ತಿರುವ ಸದರಿ ಗೋಮಾಳ ಜಮೀನುಗಳ ಮುಂಭಾಗದಲ್ಲಿ "ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಜಮೀನು, ಅತಿಕ್ರಮಣ ಪ್ರವೇಶ ನಿಷೇಧಿಸಿದೆ" ಎಂಬ ಬೋರ್ಡ್ ನೆಟ್ಟಿದ್ದಾರೆ.

ಬೇಲಿಯೇ ಎದ್ದು ಹೊಲ ಮೇಯುತ್ತಿರುವ ಈ ಪ್ರಕರಣ ಯಾವ ತಿರುವು ಪಡೆದುಕೊಳ್ಳುತ್ತದೋ ಕಾದು ನೋಡಬೇಕು.

ಹೊನ್ನಾವರ: ಮೀನುಗಾರರಿಗೆ ಮೃತ್ಯುಕೂಪವಾಗಿರುವ 'ಅಳಿವೆ!'

ಉತ್ತರ ಕನ್ನಡದ ಹೊನ್ನಾವರ ತಾಲ್ಲೂಕಿದೆಯಲ್ಲ, ... ಒಂಥರಾ ಅಬ್ಬೇಪಾರಿ! ಹೇಳೋರು-ಕೇಳೋರು ...ರೂ ಇಲ್ಲದ ಅನಾಥ ಏರಿಯಾ. ಹಾಗಂತ ಈ ...ಲ್ಲಿಗೆ ಇಬ್ಬಿಬ್ಬರು ಶಾಸಕರು. ಒಬ್ಬರಿಗೂ ಹೊನ್ನಾವರದ ...ಕಾಳಜಿ-ಕಕ್ಕುಲಾತಿ-ಜವಾಬ್ದಾರಿ ಎಂಬುದೇ ಇಲ್ಲದಾಗಿದೆ. ... ಇಂದು-ನಿನ್ನೆಯ ಗ್ರಹಚಾರವಲ್ಲ; ಲಾಗಾಯ್ತಿನ ...ರ್ಭಾಗ್ಯ!

...ಭಟ್ಕಳ ವಿಧಾನಸಭಾ ಕ್ಷೇತ್ರಕ್ಕೆ ಹೊನ್ನಾವರದ ದಕ್ಷಿಣ ...ಗಳನ್ನು ಸೇರಿಸಿದ್ದರೆ, ಉತ್ತರದ ಭಾಗವನ್ನು ಕುಮಟಾ ...ಬ್ಲಿ ಕಾನ್‌ಸ್ಟ್ಯೂಯೆನ್ಸಿಗೆ ಜೋಡಿಸಲಾಗಿದೆ. ಎರಡೂ ...ದು ಎಮ್ಮೆಲ್ಲೆಗಳಿಗೆ ಹೊನ್ನಾವರಕ್ಕಿಂತ ಹೆಚ್ಚು ಓಟಿನ ...ದ್ರತೆಯಿರುವ ಭಟ್ಕಳ ಮತ್ತು ಕುಮಟಾದ ಬಗ್ಗೆಯೇ ...ವ್ಯಾಮೋಹ! ದುರಂತವೆಂದರೆ, ಕುಮಟಾ ಮತ್ತು ...ಳದ ಶಾಸಕರಾಗಿ ಹೊನ್ನಾವರದವರೇ ಆಯ್ಕೆಯಾದರೂ ...ಭೂಪರು ಹೆತ್ತೂರಿಗೆ ನ್ಯಾಯ ಒದಗಿಸಿದ್ದು-ಋಣ ...ಸಿದ್ದು ಅಷ್ಟಕ್ಕಷ್ಟೇ!

...ಹೊನ್ನಾವರದ ಗೋಳು ಒಂದೆರಡಲ್ಲ; ಮೂಲ ...ಬ್ಯಕ್ಕಾಗಿಯೇ ಪರದಾಡಬೇಕಾಗಿರುವ ಇಲ್ಲಿಯ ಜನರ ...ಷ್ಟ-ಸಂಕಟಕ್ಕೆ ಅಧಿಕಾರಶಾಹಿ ಕೇರ್ ಮಾಡುವುದಿಲ್ಲ. ...ಕಪ್ರಸಂಗಿ ಅಧಿಕಾರಿಗಳ ಕೊರಳಪಟ್ಟಿ ಹಿಡಿದು ಕೆಲಸ ...ಡಿಸಿಕೊಳ್ಳುವ ಛಾತಿವಂತ ಮುಖಂಡರೂ ಇಲ್ಲಿಲ್ಲ. ...ತಾಗಿ ಸ್ಥಳೀಯ ಶಾಸಕರು-ಆಯಕಟ್ಟಿನ ಅಧಿಕಾರಿಗಳು ...ವಾಗಿ ಮೇಯುತ್ತ ಮೆರೆದಾಡುತ್ತಿದ್ದಾರೆ. ಹೊನ್ನಾವರಿಗರ ...ಗೆ ಇದ್ದೂ ಇಲ್ಲದಂತಾದ ಶಾಸಕರ ಉದಾಸೀನದಿಂದಾದ ...ಹುತ-ಅನ್ಯಾಯ ಹೇಳತೀರದು. ಒಂದು ತಾಜಾ ...ದಾಹರಣೆಯೆಂದರೆ, ಕುಮಟಾದ ಶಾಸಕಿ ಶಾರದಾ ಶೆಟ್ಟಿ ...ತ್ತು ಭಟ್ಕಳದ ಎಮ್ಮೆಲ್ಲೆ ಮಂಕಾಳು ವೈದ್ಯರ ಜಂಟಿ ...ಭದ್ರಗೇಡಿತನ-ಹೊಣೆಗೇಡಿತನದಿಂದ ಹೊನ್ನಾವರದ ...ವೆ (ಸಂಗಮ) ಮೀನುಗಾರರ ಪಾಲಿಗೆ ಮೃತ್ಯುಕೂಪವಾಗಿ ...ಗಿದೆ!!

...ಶರಾವತಿ ನದಿ ಅರಬ್ಬೀ ಸಮುದ್ರ ಸೇರುವ ಅಳಿವೆ




(ಸಂಗಮ)ಯಲ್ಲಿ ಹೊನ್ನಾವರದ ಬಡ ಬೆಸ್ತರ ಮಾರಣ ಹೋಮ ಎರಡು ದಶಕದಿಂದ ನಿರಂತರವಾಗಿ ನಡೆಯುತ್ತಲೇ ಇದೆ. ಜತೆಗೆ ಜೀವನೋಪಾಯ ಕಸುಬಿಗೆಂದ ಸಾಲಸೂಲ ಮಾಡಿತಂದ ಬಲೆ-ಬೋಟ್-ಡಿಂಗಿ-ದೋಣಿಯನ್ನೂ ಅಳಿವೆ ರಾಕ್ಷಸ ಅನಾಮತ್ತಾಗಿ ನುಂಗಿ ನೊಣೆಯುತ್ತಿದ್ದಾನೆ. ಈ ಅಳಿವೆ ಹೂಳೆತ್ತಿದರೆ ಬೋಟ್‌ಗಳು ಸರಾಗವಾಗಿ ಸಮುದ್ರಕ್ಕೆ ಹೋಗಿ-ಬರಬಹುದು. ಮೀನುಗಾರರು ಹೂಳೆತ್ತುವಂತೆ ಅಧಿಕಾರಸ್ಥರ ಬೆನ್ನುಬಿದ್ದು ಗೋಗರೆಯುತ್ತಲೇ ಇದ್ದಾರೆ. ಆದರೆ ಮಂತ್ರಿ-ಶಾಸಕ-ಸಂಸದರ ಕಲ್ಲು ಹೃದಯ ಮಾತ್ರ ಕರಗುತ್ತಲೇ ಇಲ್ಲ!


ಆಳುವವರ ನಿರ್ಲಕ್ಷ್ಯದಿಂದ ಈ ಅಳಿವೆಗೆ ಬಲಿಯಾದ ಬೆಸ್ತರ ಲೆಕ್ಕವಿಟ್ಟವರಿಲ್ಲ; ಆದ ಹಾನಿಗೂ ಲೆಕ್ಕವಿಲ್ಲ. ಅಳಿವೆ ಹೂಳೆತ್ತಿ ನಮ್ಮನ್ನು ಕಾಪಾಡುವಂತೆ ಮೀನುಗಾರರು ಬೇಡಿಕೆ ಕಂಡ-ಕಂಡವರ ಮುಂದೆ ಮಂಡಿಸುತ್ತಲೇ ಇದ್ದಾರೆ. ಉಪವಾಸ ಸತ್ಯಾಗ್ರಹ, ರಸ್ತೆ ತಡೆ, ಧರಣಿ, ಹೋರಾಟ ಎಲ್ಲ ಥರದ ಪ್ರತಿಭಟನೆಗಳನ್ನು ರಸ್ತೆಗಿಳಿದು ಮಾಡಿದ್ದಾರೆ. ಆಗ ಎಚ್ಚೆತ್ತ ಶಾಸಕ-ಮಂತ್ರಿಗಳು ಅಳಿವೆ ಹೂಳೆತ್ತಲೆಂದು ಒಂದಿಷ್ಟು ಕೋಟಿ ಸ್ಯಾಂಕ್ಷನ್ ಮಾಡಿಸಿದ್ದರೂ ಕಾಮಗಾರಿಗಾಗಿ ಮಾತ್ರ ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ.


ಕೋ-ಜಾ ಸರ್ಕಾರದಲ್ಲಿ 'ಆಕಸ್ಮಿಕ' ಮಂತ್ರಿಯಾಗಿದ್ದ ಭಟ್ಕಳದ ಶಾಸಕ ಶಿವಾನಂದ ನಾಯ್ಕ 40 ಕೋಟಿಯ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಕಳಿಸಿ ಮಂಜೂರಿ ಮಾಡಿಸಿದ್ದರು. ಕೆಲಸವೇಕೋ ಆತನಿಂದ ಮಾಡಿಸಲಾಗಲಿಲ್ಲ. ಆ ನಂತರ ಎಮ್ಮೆಲ್ಲೆಯಾದ ಜೆ.ಡಿ. ನಾಯ್ಕ 62 ಕೋಟಿ ಸ್ಯಾಂಕ್ಷನ್ ಮಾಡಿಸಿದರಾದರೂ ಆತನಿಂದಲೂ ಬ್ರೇಕ್-ವಾಟರ್ (ಅಲೆ ತಡೆಗೋಡೆ) ನಿರ್ಮಾಣ ಸಾಧ್ಯವಾಗಲಿಲ್ಲ. ಏತನ್ಮಧ್ಯೆ ಪೂನಾದ ಕಾಮಗಾರಿ ಸಂಸ್ಥೆಯೊಂದು ಅಳಿವೆಯ ದಿಕ್ಕು ಬದಲಿಸುವ ಮತ್ತು ಅಲೆಗೆ ತಡೆಗೋಡೆ ಹಾಕುವ ನೀಲನಕ್ಷೆ ತಯಾರಿಸಿ ಸರ್ಕಾರಕ್ಕೆ ಒಪ್ಪಿಸಿತ್ತು. ಈ ಬ್ಲೂಪ್ರಿಂಟ್‌ಗೆ ಎಳ್ಳುನೀರು ಬಿಟ್ಟವನು ಅಂದು ಬಂದರು ಮಂತ್ರಿಯಾಗಿದ್ದ ಗೋಲ್‌ಮಾಲ್ ನಿರಾಕಿ ಕೃಷ್ಣ ಪಾಲೇಮಾರ್!

ಬಂದರಿನ ಎರಡೂ ದಂಡೆಯನ್ನು ಮಂತ್ರಿ ಪಾಲೇಮಾರ್ ತನಗೆ 'ಬೇಕಾದವರಿಗೆ' ಲೀಸ್ ಇನಾಮು ನೀಡಿದ್ದರು. ಈ ಅಂಡರ್ ಡೀಲ್‌ನಿಂದ ಅನ್ಯಾಯವಾಗಿದ್ದು ಹೊನ್ನಾವರದ ಮೀನುಗಾರ ಸಂಕುಲಕ್ಕೆ. ಪಾಲೇಮಾರ್

⏭ 07


ಅಭಯಚಂದ್ರ ಜೈನ್


ಬಾಬುರಾವ್ ಚಿಂಚನಸೂರ್


ಮಾಂಕಾಳ್ ವೈದ್ಯ



ಶಾರದಾ ಶೆಟ್ಟಿ

...ದೇಶಪಾಂಡೆ ದೂರ..! ದೂರ...!!

...ಎಂಟು-ಹತ್ತು ದಿನಕ್ಕೊಮ್ಮೆಯಂತೆ ಜಿಲ್ಲೆಗೆ ಬಂದು ದರ್ಬಾರು ನಡೆಸುತ್ತಿದ್ದ ಜಿಲ್ಲಾ ಉಸ್ತುವಾರಿ ಮಂತ್ರಿ ...ವಿ. ದೇಶಪಾಂಡೆ ಸಾಹೇಬರ ದರ್ಶನವಾಗಿದ್ದು ಈ ಎರಡು ತಿಂಗಳಲ್ಲಿ ಮೊನ್ನೆಯಷ್ಟೇ. ಅದೂ ಸಿಎಂ ಸಿದ್ದು ...ವೃಷ್ಟಿ ಪರಾಮರ್ಶೆ ಮಾಡುವಂತೆ ಒದ್ದೋಡಿಸಿದ್ದರಿಂದ ದೋಷಪಾಂಡೆ ಜಿಲ್ಲೆಗೆ ಬಂದಿದ್ದರು. ಬಂದವರು ಕಾಟಾಚಾರಕ್ಕೆ ...ನೋ ಮೀಟಿಂಗು-ಮಸಲತ್ತು ಮಾಡಿಹೋದರು.

...ಕಳೆದ ಲೋಕಸಭಾ ಚುನಾವಣೆ ನಂತರ ದೇಶಪಾಂಡೆಗೆ ಉತ್ತರ ಕನ್ನಡ ಜಿಲ್ಲೆ ಮೇಲೆ ತಾತ್ಸಾರ-ತಿರಸ್ಕಾರ ...ಡಿದೆ. ಇಲ್ಲಿಯ ಸಮಸ್ಯೆ ಪರಿಹರಿಸಲು ಆತ ಬುದ್ಧಿಪೂರ್ವಕವಾಗೇ ಮುಂದಾಗುತ್ತಿಲ್ಲ. ಒಂಥರಾ ಸ್ಯಾಡಿಸ್ಟ್‌ನಂತೆ ...ಯನ್ನು ಕಾಡಲಾರಂಭಿಸಿದ್ದಾರೆ. ಇದಕ್ಕೆ ಕಾರಣವೇನು ಗೊತ್ತಾ? ತನ್ನ ...ನನ್ನು ಲೋಕಸಭಾ ಎಲೆಕ್ಷನ್‌ನಲ್ಲಿ ಸೋಲಿಸಿದ ಜಿಲ್ಲೆಯ ಮತದಾರರು ...ತ್ತು ಕಾಂಗ್ರೆಸ್ ನಾಯಕರ ಮೇಲಿನ ಸೇಡು! ಭಟ್ಕಳದ ಪಕ್ಷೇತರ ಶಾಸಕ ...ಕಾಳ್ ವೈದ್ಯ ಒಬ್ಬನ ಬಿಟ್ಟರೆ ಬೇರ್‍ಯಾರೊಂದಿಗೂ ದೇಶಪಾಂಡೆ ಈಗ ...ಬಿಚ್ಚಿ ಕೊಟ್ಟು ಮಾತಾಡುತ್ತಿಲ್ಲ. ಎಲ್ಲರೂ ದ್ರೋಹಿಗಳೆಂಬ ತೀರ್ಮಾನಕ್ಕೆ ...ದಿರುವ ಸಾಹೇಬರು ಮತದಾರರ ಮೇಲೂ ಮುರಿದು ಬೀಳುತ್ತಿದ್ದಾರೆ.

...ಕಾಂಗ್ರೆಸ್‌ನ ಮರಿ ಮುಖಂಡರ್‍ಯಾರಾದರೂ ಸಮಸ್ಯೆ-ಸವಲತ್ತಿಗಾಗಿ ...ಪಾಂಡೆ ಬಳಿ ಹೋದರೆ, ಆತ 'ಹುಶಾ...' ಎಂದು ಉಗುಳಿ ಓಡಿಸುತ್ತಿದ್ದಾರೆ. ...ಪಾಂಡೆ ಮಗನ ಭರ್ಜರಿ ಸೋಲಿನಿಂದ ಅದೆಷ್ಟು ಹತಾಶರಾಗಿದ್ದಾರೆಂದರೆ, ...ಮೆಮೋರಿಯಲ್ ಟ್ರಸ್ಟಿನಿಂದ ಬಡ ವಿದ್ಯಾರ್ಥಿಗಳಿಗೆ ಪ್ರತಿವರ್ಷ ...ಡುತ್ತ ಬಂದಿದ್ದ ನೋಟ್ ಬುಕ್‌ಗಳನ್ನು ಈ ಬಾರಿ ಬಂದ್ ...ಡಿಬಿಟ್ಟಿದ್ದಾರೆ! ಕ್ಷಣ-ಕ್ಷಣಕ್ಕೂ ಸಿಡಿಮಿಡಿಗೊಂಡು ಹಾರಾಡುತ್ತಿದ್ದಾರೆ. ...ಸ್ಯ ಮನೋವ್ಯಾಜ ದೌರ್ಬಲ್ಯವೂ ಕಾರಣ ಇರಬಹುದಾದರೂ ರಾಜಕೀಯ ...ಷನೇ ಪ್ರಮುಖ ಉದ್ದೇಶವಾಗಿದೆ.




...ಜಿಲ್ಲೆಯ ಕೃಷಿ-ಬಿಸ್ತ-ತೋಟಗ-ಸರ್ಕಾರಿ ಯೋಜನಾ ನಿರಾಶ್ರಿತ ಸಮಸ್ಯೆಯ ಬಾಣಲಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ. ...ನೆಂದಿನ ಆಡಳಿತ ಹಳಿ ತಪ್ಪಿದೆ. ಅಧಿಕಾರಿಗಳ ಅಂಧ ದರ್ಬಾರು ನಡೆದಿದೆ. ಸರ್ಕಾರಿ ಯೋಜನೆಗಳು ಸರಿಯಾಗಿ ...ರ್ಗಗೊಳ್ಳುತ್ತಿಲ್ಲ. ಜಿಲ್ಲಾ ಮಂತ್ರಿ ನೊಂದವರ ಕೈಗೆ ಸಿಗುತ್ತಿಲ್ಲ. ಜನರನ್ನು ಎದುರಿಸುವ ನೈತಿಕ ಸ್ಥೈರ್ಯ ...ಕಳೆದುಕೊಂಡಿರುವ ದೇಶಪಾಂಡೆಯನ್ನು ಜಿಲ್ಲಾ ಉಸ್ತುವಾರಿಕೆಯಿಂದ ಮೋಕಳಿಕ್ ಮಾಡುವುದೊಂದೇ ಉತ್ತರ ...ಜಿಲ್ಲೆಯ ಸಮಸ್ಯೆಗೆ ತುರ್ತು ಪರಿಹಾರ ಎಂಬಂತಾಗಿದೆ. ಈ ಕೆಲಸ ಸಿಎಂ ಸಿದ್ದು ಮಾಡಿ ಪುಣ್ಯ ಕಟ್ಟಿಕೊಳ್ಳುವರಾ?


ಕಿರಿಕ್ ಕಾಮಗಾರಿ

ಆಳುವ ಖೂಳರು ಮೀನುಗಾರರಿಗೆ ಉಪಕಾರ ಮಾಡುವುದಕ್ಕಿಂತ ಉಪದ್ರವ ಕೊಡುವುದೇ ಜಾಸ್ತಿ! ಹೊನ್ನಾವರದ ಕಾಸರಗೋಡು ಟೊಂಕದ ಮೀನುಗಾರಿಕಾ ಧಕ್ಕೆ ವಿಸ್ತರಣಾ ಕಾಮಗಾರಿ ಅರ್ಧಂಬರ್ಧ ಮಾಡಿರುವುದರಿಂದ ಬೆಸ್ತರ ಕಸುಬಿಗೆ ಸಂಚಕಾರ ಬಂದಿದೆ! ಧಕ್ಕೆಯನ್ನು 300 ಮೀಟರ್ ವಿಸ್ತರಿಸಲು ಕಾಮಗಾರಿ ಬೆಳಗಾವಿಯ ಆದಿತ್ಯ ಕನ್‌ಸ್ಟ್ರಕ್ಷನ್ ಕಂಪನಿ ಕಂಟ್ರಾಕ್ಟ್ ಹಿಡಿದಿದೆ. ಕೋಟ್ಯಾಂತರ ರೂ. ಕಾಮಗಾರಿ ನಿಗದಿತ ಅವಧಿಯಲ್ಲಿ ಮುಗಿಸದೇ ಬರೀ ಬಿಲ್‌ಗಾಗಿ ಬಡಿದಾಡುವ ಈ ಗುತ್ತಿಗೆದಾರ ಕಂಪನಿಗೆ ಸ್ಥಳೀಯ ಶಾಸಕರಿಬ್ಬರ ಅಭಯವೂ ಇದೆ.

300 ಮೀಟರ್‌ನಲ್ಲಿ ಬರೀ 150 ಮೀಟರ್ ಕಾಮಗಾರಿಯನ್ನಷ್ಟೇ ಶುರು ಮಾಡಲಾಗಿದೆ. ಇದೂ ಅರೆಬರೆಯಾಗಿ ಮಾಡಲಾಗಿದೆ; ಕಾಮಗಾರಿ ಹೊತ್ತಲ್ಲಿ ನೀರನ್ನು ತಡೆಯಲು ಹಾಕಿದ ಮಣ್ಣಿನ ರಾಶಿ ಹಾಗೇ ಬಿಡಲಾಗಿದೆ. ಹಾಗಾಗಿ ಮೀನು ತಂದ ಬೋಟುಗಳನ್ನು ದಡಕ್ಕೆ ತರುವುದಕ್ಕೆ, ಖಾಲಿ ಬೋಟ್‌ಗಳನ್ನು ಸಮುದ್ರಕ್ಕೆ ಒಯ್ಯುವುದಕ್ಕೆ ಆಗುತ್ತಿಲ್ಲ. ಬಂದರಿನಲ್ಲೂ ಹೂಳು ತುಂಬಿಕೊಂಡಿದೆ. ಒಟ್ಟಿನಲ್ಲಿ ಈ ಬಂದರು ಮೀನುಗಾರರ ಪಾಲಿಗೆ ನಿಷ್ಪ್ರಯೋಜಕವಾಗಿದೆ. ಧಕ್ಕೆ ವಿಸ್ತರಣೆ ನೆಪದಲ್ಲಿ ಇದ್ದ ಸೌಲಭ್ಯಕ್ಕೂ ಸಂಚಕಾರ ಬಂದಿದೆ.


ಸಂಬಂಧಿಸಿದ ಅಧಿಕಾರಿ-ಶಾಸಕರಿಗೆಲ್ಲ ಹೇಳಿ-ಹೇಳಿ ಬೆಸ್ತರು ರೋಸತ್ತು ಹೋಗಿದ್ದಾರೆ. ಬರೀ ಪೊಳ್ಳು ಆಶ್ವಾಸನೆ ಸಿಗುತ್ತಿದೆಯೇ ಹೊರತು ನೊಂದ ಮೀನುಗಾರಿಕೆಗೆ ಯಾರೂ ನೆರವಾಗುತ್ತಿಲ್ಲ. ಕುಮಟಾ ಶಾಸಕಿ ಶಾರದಾ ಶೆಟ್ಟಿ, ಇದು ಭಟ್ಕಳದ ಶಾಸಕರ ವ್ಯಾಪ್ತಿಯ ಕಾಮಗಾರಿ ಎಂದರೆ, ಭಟ್ಕಳದ ಶಾಸಕ ವೈದ್ಯನ ಕಣ್ಣು ಗುತ್ತಿಗೆದಾರ ಕೊಡುವ ಪರ್ಸೆಂಟೇಜ್ ಮೇಲಷ್ಟೇ. ಕಷ್ಟ ಮಾತ್ರ ಮೀನುಗಾರರಿಗೆ!





ಬ್ರಹ್ಮಕುಮಾರಿ ನಿರ್ಮಲಾ

'ಬ್ರಹ್ಮಕುಮಾರಿ'ಯಲ್ಲೊಬ್ಬ ದುಡ್ಡಿನ ಧೂರ್ತ!



ರಾಜಋಷಿ ಬಸವರಾಜ

ಹುಬ್ಬಳ್ಳಿಯ ಪ್ರಜಾಪಿತ ಬ್ರಹ್ಮಕುಮಾರಿ ವಿವಿಯಲ್ಲಿ ಆಧ್ಯಾತ್ಮಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರ, ಧನದಾಹ, ಭೂಗಳ್ಳತನ, ಹಾದರದ ಅಸಹ್ಯ ವಾಸನೆಗಳೇ ಉಸಿರುಗಟ್ಟಿಸುವಷ್ಟು ವಿಪರೀತವಾಗಿವೆ. ಜನರಿಗೆ ಮೋಕ್ಷದ ದಾರಿ ತೋರಿಸುತ್ತೇವೆ ಎಂದೇಳಿಕೊಳ್ಳುವ ಈ ವಿವಿಯ ಜನರ ಮತ್ಸರ, ತಿಕ್ಕಾಟಗಳು ಪೊಲೀಸ್ ಠಾಣೆ ಮೆಟ್ಟಿಲೇರುವವರೆಗೆ ಹೋಗಿ ತಲುಪಿವೆಯೆಂದರೆ ಇಡೀ ಪ್ರಕರಣದ ಗಂಭೀರತೆ ಅರ್ಥವಾಗಬಹುದು. ಈಶ್ವರಿ ಕುಮಾರಿಯರ ಬಿಳಿ ಬಟ್ಟೆಗೆ ಈ ಪರಿ ಕೊಳಕು ಮೆತ್ತಿಸಿರೋದು ಅದೇ ಆಧ್ಯಾತ್ಮ ವಿವಿಯ ಹುಬ್ಬಳ್ಳಿ ಉಪವಲಯ ನಿರ್ದೇಶಕ ಬಸವರಾಜ, ಅಲಿಯಾಸ್ ಸ್ವಯಂಘೋಷಿತ ರಾಜಋಷಿ!

ಅಂದಹಾಗೆ, ಆಧ್ಯಾತ್ಮದ ಸರಕು ಈಗೀಗ ಲಾಭಕೋರ 'ಉದ್ಯಮ'ವಾಗುತ್ತಿರೋದು ರಹಸ್ಯವಾಗೇನೂ ಉಳಿದಿಲ್ಲ. ರಿಯಲ್ ಎಸ್ಟೇಟು, ಸೆಕ್ಸ್ ಸ್ಕ್ಯಾಂಡಲ್‌ಗಳಿಂದ ಮೊದಲ್ಗೊಂಡು ಸುಪಾರಿ ಕಿಲ್ಲಿಂಗ್‌ವರೆಗೆ ಇಲ್ಲಿ ಯಾವುದಕ್ಕೂ ಮೈಲಿಗೆಯಿಲ್ಲ. ಎಲ್ಲಕಿಂತ ಹೆಚ್ಚಾಗಿ ಮಾಡಿದ ಅಷ್ಟೂ 'ಅಪರಾಧ'ಗಳಿಗೆ ಇಲ್ಲಿ ಶಿಕ್ಷೆಯ ಭೀತಿಯೇ ಇಲ್ಲ. ಹಾಗಾಗಿಯೇ ದಿನಕ್ಕೊಂದು ಆಧ್ಯಾತ್ಮದ ಹೊಸ ಏಂಗು ಗಡ್ಡಧಾರಿ, ಶ್ವೇತಧಾರಿ, ಕಾವಿಧಾರಿ ಇತ್ಯಾದಿತ್ಯಾದಿ ಗೆಟಪ್ಪಿನಲ್ಲಿ ತೆರೆದುಕೊಳ್ಳುತ್ತಲೇ ಇರುತ್ತೆ. ಇಂಥಾ ಸರಣಿಯ ಭಾಗವಾಗಿ ಮೌಂಟ್ ಅಬುವಿನಂತಹ ತಣ್ಣನೆಯ ತುದಿಯಲ್ಲಿ ತೆರೆದುಕೊಂಡ ಪ್ರಜಾಪಿತ ಈಶ್ವರಿ ಬ್ರಹ್ಮಕುಮಾರಿ ವಿವಿ ಕೂಡಾ ಆಧ್ಯಾತ್ಮದ ಕಾರ್ಪೊರೇಟ್ ದಲ್ಲಾಳಿಗಳಲ್ಲಿ ಒಂದು. ಕರ್ನಾಟಕದಲ್ಲೂ ಅದರ ನೂರಾರು ಶಾಖೆಗಳಿವೆ. ಟಾಪ್ ಟು ಬಾಟಮ್ ವೈಟ್ ಅಂಡ್ ವೈಟ್‌ನಲ್ಲೇ ಕಂಗೊಳಿಸುವ ಸಹಸ್ರಾರು 'ಕುಮಾರ' ಮತ್ತು 'ಕುಮಾರಿ'ಯರ ಹಿಂಬಾಲಕ ಪಡೆಯಿದೆ. ಅಷ್ಟೇ ಮುಖ್ಯವಾಗಿ, ದೇಣಿಗೆ-ದಾನ ರೂಪದಲ್ಲಿ ಬಂದು ಸೇರುವ ಕೋಟ್ಯಂತರ ರೂಪಾಯಿಯ ಆದಾಯದ ಮೂಲಗಳೂ ಇವೆ. ಈ ರೊಕ್ಕವೇ ಸದ್ಯ ಪ್ರಜಾಪಿತನ ಮಕ್ಕಳ ಶಾಂತಿ ಕದಡಿರೋದು.

ಎತ್ತುವಳಿ ದಂಧೆ

ಹುಬ್ಬಳ್ಳಿ ವಲಯದಲ್ಲಿ ಸುಮಾರು 180 ಬ್ರಹ್ಮಕುಮಾರಿ ಶಾಖೆಗಳಿವೆ. ಕಾರವಾರದಿಂದ ಆಂಧ್ರದ ಕಡಪ-ಗುಂತಕಲ್‌ವರೆಗೆ ಮತ್ತು ಹುಬ್ಬಳ್ಳಿ, ತುಮಕೂರಿನಿಂದ ಕೇರಳದವರೆಗೂ ವಿಸ್ತರಿಸಿರುವ ಈ ಎಲ್ಲಾ 180 ಶಾಖೆಗಳಿಗೆ ಹುಬ್ಬಳ್ಳಿಯೇ ಕೇಂದ್ರಸ್ಥಾನ. ಅದರರ್ಥ ಅಷ್ಟೂ ಶಾಖೆಗಳ ದೇಖಾರೇಖಿ ಹುಬ್ಬಳ್ಳಿ ಕೇಂದ್ರ ಶಾಖೆಗೆ ಸೇರಿದ್ದು. ಅಂತಹ ಕೇಂದ್ರ ಶಾಖೆಯ ನಿರ್ದೇಶಕನೇ ಈ ಬಸವರಾಜ ರಾಜಋಷಿ. ಸಾಕ್ಷಾತ್ ಈಶ್ವರಿ ಮಾತೆಯ ಸೆರಗಿನಿಂದಲೇ ಎದ್ದು ಬಂದವನಂತೆ ಪ್ರಚಂಡ ಆಧ್ಯಾತ್ಮ ಬಗಿಯುವ ಈತ ತೆರೆಮರೆಯಲ್ಲಿ ನಡೆಸೋದು ಪಕ್ಕಾ ರಿಯಲ್ ಎಸ್ಟೇಟ್ ದಂಧೆ. ಹುಬ್ಬಳ್ಳಿ ಶಹರದ ತುಂಬಾ ಹರಡಿಕೊಂಡಿರುವ ಈತ ಮತ್ತು ಈತನ ಹಿಂಬಾಲಕರ ಹೆಸರಿನಲ್ಲಿ ರಿಜಿಸ್ಟರ್ ಆಗಿರುವ ಎಕರೆಗಟ್ಟಲೇ ಜಮೀನುಗಳೇ ಇದಕ್ಕೆ ಸಾಕ್ಷಿ. ಬ್ರಹ್ಮಕುಮಾರಿ ವಿವಿಗೆ ಭಕ್ತರು ನೀಡುವ ದೇಣಿಗೆ, ದಾನಗಳನ್ನೇ ತನ್ನ ಖಾಸಗಿ ಆದಾಯದ ಮೂಲಗಳನ್ನಾಗಿಸಿಕೊಂಡಿರುವ ಈತ ಸಾಲದ್ದಕ್ಕೆ ತನ್ನ ವಲಯದ ವ್ಯಾಪ್ತಿಗೆ ಬರುವ ಎಲ್ಲಾ 180 ಶಾಖೆಗಳಿಂದ ಪ್ರತಿ ತಿಂಗಳು ಆರು ಸಾವಿರ ಕಪ್ಪ ಕೊಡಬೇಕೆಂಬ ಶಾಸನ ಮಾಡಿಟ್ಟುಕೊಂಡಿದ್ದಾನೆ. ಹಾಗಂತ ಈ ಶಾಖೆಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವ 'ಬ್ರಹ್ಮಕುಮಾರಿ'ಯರಿಗೆ ಯಾವುದೇ ಸಂಬಳ ಹುಬ್ಬಳ್ಳಿ ಕೇಂದ್ರದಿಂದ ಬಟವಾಡೆಯಾಗುವುದಿಲ್ಲ. ಈ ಅಕ್ಕಂದಿರು ತಮ್ಮ ಖರ್ಚುವೆಚ್ಚವನ್ನೆಲ್ಲಾ ನೋಡಿಕೊಳ್ಳುವುದಲ್ಲದೆ ಫಂಡಿನ ರೂಪದಲ್ಲಿ ಬಸವರಾಜ ರಾಜಋಷಿಯ ಬೊಕ್ಕಸ ತುಂಬಿಸಬೇಕಿದೆ. ಹಾಗೊಂದು ವೇಳೆ ನಿಗದಿತ ಕಪ್ಪ ಸಂದಾಯ ಮಾಡದೇಹೋದರೆ ಆ 'ಕುಮಾರಿ' ತನ್ನ ವಿರುದ್ಧ ಮಸಲತ್ತು ನಡೆಸುತ್ತಿದ್ದಾಳೆನ್ನುವ ಸ್ವಯಂತೀರ್ಮಾನಕ್ಕೆ ಬಂದುಬಿಡುತ್ತಾನೆ. ಅಲ್ಲಿಂದಾಚೆಗೆ ಆ ಕುಮಾರಿಯ ಬದುಕು ನರಕವಾಗಿಬಿಡುತ್ತದೆ. ಆಧ್ಯಾತ್ಮದ ಹುಡುಕಾಟದಲ್ಲಿ ಮನೆ-ಮಠ, ಬಂಧು-ಬಳಗವನ್ನೇ ಪರಿತ್ಯಜಿಸಿ ಬಂದಂತವರಿಗೂ ಈತ ಚಾರಿತ್ರ್ಯವಧೆ ಮಸಿ ಬಳಿದುಬಿಡುತ್ತಾನೆ. ಅವನ ಇಂಥಾ ಥರ್ಡ್‌ಕ್ಲಾಸ್ ಸ್ಕೆಚ್ಚುಗಳಿಂದಲೇ ಈಗಾಗಲೆ 10 ಅಕ್ಕಂದಿರು ಆತ್ಮಹತ್ಯೆಗೂ ಶರಣಾಗಿದ್ದಾರೆಂಬ ಆರೋಪವೂ ಕೇಳಿ ಬರುತ್ತಿದೆ.

ಅಷ್ಟಕ್ಕೂ ಈ ಬಸವರಾಜನೆಂಬ ಐನಾತಿ ಆಸಾಮಿ ಆರಂಭದಿಂದಲೂ ಬ್ರಹ್ಮಕುಮಾರಿ ತತ್ವಗಳಿಗೆ ಅಂಟಿಕೂತವನೇನಲ್ಲ. ಸರ್ಕಾರಿ ಉದ್ಯೋಗದಲ್ಲಿದ್ದು ಉಪಭೋಗ ಉಂಡವನು. ನಿವೃತ್ತಿಯ ನಂತರ ಮನೆಯಲ್ಲಿ ಕೂರಲಾಗದೆ ಶ್ವೇತ ಬಟ್ಟೆತೊಟ್ಟು ರಾಜಋಷಿ ಗೆಟಪ್ಪು ತೊಟ್ಟದ್ದಾನಷ್ಟೆ. ಮೂಲತಃ ಮಾಗಡಿ ದಿಕ್ಕಿನವನಾದ ಬಸವರಾಜ, ರಾಯಚೂರು ಸರಕಾರಿ ಕೃಷಿ ಇಲಾಖೆಯಲ್ಲಿ ನೌಕರಿ ಮಾಡುತ್ತಲೇ ಈ ಬ್ರಹ್ಮ ಪರಿವಾರದಲ್ಲಿ ಬಂದು ನೆಲೆ ಕಂಡುಕೊಂಡ. 1972 ರಲ್ಲಿ ಧಾರವಾಡ ಕೃಷಿ ಇಲಾಖೆಗೆ ವರ್ಗವಾಗಿ ಬಂದವನು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲೆ ಹಲವು ವರ್ಷ ಬೇರುಬಿಟ್ಟಿದ್ದ. ಆಗಿಂದಾಗ್ಗೆ ಬಂದುಹೋಗುವ ಸಂಪರ್ಕ ಬಿಟ್ಟರೆ ಬ್ರಹ್ಮಕುಮಾರಿ ಆಧ್ಯಾತ್ಮ ವಿವಿಯೊಂದಿಗೆ ಹೇಳಿಕೊಳ್ಳುವ ಒಡನಾಟವೇನೂ ಇವನಿಗೆ ಇರಲಿಲ್ಲ. 1999 ರಲ್ಲಿ ನಿವೃತ್ತಿಯಾದ ಬಳಿಕವಷ್ಟೇ ಈತ ಹುಬ್ಬಳ್ಳಿ ಈಶ್ವರಿ ವಿವಿ ಪರಿಸರಕ್ಕೆ ಅಧಿಕೃತವಾಗಿ ಎಂಟ್ರಿಕೊಟ್ಟದ್ದು. ತನ್ನ ವಾಕ್‌ಚಾತುರ್ಯ, ಬಾಲಬಡುಕತನದಿಂದಾಗಿ ನಿಧಾನಕ್ಕೆ ಹುಬ್ಬಳ್ಳಿ ಉಪ ವಲಯದ ನಿರ್ದೇಶಕನ ಸ್ಥಾನಕ್ಕೇ ಒಕ್ಕರಿಸಿದ. ಅಲ್ಲಿಂದಾಚೆಗೆ ಬಸವರಾಜ ರಾಜಋಷಿಯ ಧನದಾಹ ಮುಗಿಲು ಮುಟ್ಟಿದೆ.


ಅಕಾಡೆಮಿ ಫಾರ್ ಲೈಫ್ ಎಜುಕೇಶನ್


ಬಸವರಾಜನ ಭೂವ್ಯಾಮೋಹದ ರಿಯಲ್ ಎಸ್ಟೇಟ್ ಮುಖವಾಡವೇ ಈ ಅಕಾಡೆಮಿ ಫಾರ್ ಲೈಫ್ ಎಜುಕೇಷನ್ ಎಂಬ ಸಂಸ್ಥೆ. ಆಧ್ಯಾತ್ಮ ಮತ್ತು ಜೀವನದರ್ಶನ ಮಾಡಿಸುತ್ತೇನೆ ಎಂಬ ನೆಪ ಹೇಳಿಕೊಂಡು 28.01.2004ರಲ್ಲಿ ಇಂತಹದ್ದೊಂದು ಸಂಸ್ಥೆಯನ್ನು ಹುಟ್ಟುಹಾಕಿದ ಬಸವರಾಜ್ ಆ ಟ್ರಸ್ಟ್‌ಗೆ ತನಗೆ ಬೇಕಾದವರನ್ನು ಹಾಗೂ ತನ್ನ ಮಾತಿಗೆ ಎದುರಾಡದಂತಹ 'ನವ'ಗ್ರಹಗಳನ್ನು ಹುಡುಕಿ ನಿರ್ದೇಶಕ ಹುದ್ದೆಯನ್ನು ದಯಪಾಲಿಸಿದ್ದ. ಅವರೆಲ್ಲ ಅದೇ ಕುಮಾರ, ಕುಮಾರಿಯರು ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಹಾಗೆ ನೋಡಿದರೆ ಈ ಸಂಸ್ಥೆಗೂ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯಕ್ಕೂ ಯಾವುದೇ ಸಂಬಂಧವಿಲ್ಲ. ಆಧ್ಯಾತ್ಮವನ್ನೇ ಬಿತ್ತುವ ಬ್ರಹ್ಮಕುಮಾರಿಯಂತಹ ಅಕಾಡೆಮಿಯ ಉನ್ನತ ಪಟ್ಟವೇ ತನ್ನ ಬಳಿ ಇರುವಾಗ ಅದಕ್ಕೆ ಪರ್ಯಾಯವಾಗಿ ಅದೇ ಕೆಲಸ ಮಾಡುವುದಕ್ಕೋಸ್ಕರ ಮತ್ತೊಂದು ಸಂಸ್ಥೆಯನ್ನು ಹುಟ್ಟುಹಾಕುವ ಜರೂರತ್ತಾದರು ಏನಿತ್ತು? ಎಂಬುದನ್ನು ಕೆದಕುತ್ತಾ ಹೋದರೆ ಬಸವರಾಜನ ರಿಯಲ್ ಎಸ್ಟೇಟ್ ರಕ್ಕಸ ದಾಹ ಬೆತ್ತಲಾಗುತ್ತಾ ಸಾಗುತ್ತದೆ. ಪ್ರಜಾಪಿತ ಬ್ರಹ್ಮಕುಮಾರಿ ವಿವಿಗೆ ಸಲ್ಲಿಕೆಯಾಗುತ್ತಿದ್ದ ಪ್ರತಿಯೊಂದು ಕಾಣಿಕೆ ಮತ್ತು ದಾನ-ದೇಣಿಗೆಗಳಿಗೆ ಮೌಂಟ್ ಅಬು ಮುಖ್ಯಸ್ಥರೇ ಒಡೆಯರಾಗಿರುತ್ತಿದ್ದರು. ಹೆಚ್ಚೆಂದರೆ, ಬ್ರಹ್ಮಕುಮಾರಿ ಹೆಸರಲ್ಲಿ ಅದನ್ನು ಈತ ತತ್ಕಾಲಕ್ಕೆ ಅನುಭವಿಸಬಹುದಿತ್ತಷ್ಟೆ. ಆದರೆ ಕಾಯಂ ತನ್ನ ಆಸ್ತಿಯಂತೆ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ. ಈ ಕೊರಗನ್ನು ನೀಗಿಸಿಕೊಳ್ಳಲೇ ಬಸವರಾಜ ಲೈಫ್ ಎಜುಕೇಷನ್ ಅಕಾಡೆಮಿಯನ್ನು ಹುಟ್ಟುಹಾಕಿದ್ದ.


ಈ ಟ್ರಸ್ಟಿನ ಮೂಲಕ ಅದ್ಯಾವ ಜೀವನ ದರ್ಶನ ಮಾಡಿಸುತ್ತಿದ್ದಾನೊ ಭಗವಂತನೇ ಬಲ್ಲ. ಆದರೆ ಕೋಟ್ಯಂತರ ಆಸ್ತಿ ಮಾತ್ರ ಬಂದು ಸೇರುತ್ತಲೇ ಇದೆ. ವಿಜಯನಗರದ ರಾಜ ರೆಸಿಡೆನ್ಸಿ, ಲಕ್ಷ್ಮೀಪುರದ ಬ್ಯಾಂಕರ್ಸ್ ಕಾಲೋನಿಯ ಜಾಗ (ದಾನಪತ್ರ), ಧಾರವಾಡದ ಗಾಂಧೀನಗರದಲ್ಲಿ ಶಾರದಾ ರೆಸಿಡೆನ್ಸಿಗಳು ಇದೇ ಟ್ರಸ್ಟ್‌ನ ಹೆಸರಿಗೆ ನೋಂದಾವಣೆಗೊಂಡಿವೆ. ಆಧ್ಯಾತ್ಮದ ಪಾಠ ಹೇಳುವವರಿಗೆ ಇಂತಹ ಐಷಾರಾಮಿ ತಾಣಗಳ ಅವಶ್ಯಕತೆಯಾದರು ಏನು? ಭಗವಂತ ಅದ್ಯಾವಾಗಿನಿಂದ ವಿಪ್ರರ ಗುಡಿ-ಗುಂಡಾರಗಳನ್ನು ತೊರೆದು ರೆಸಿಡೆನ್ಸಿಗೆ ಶಿಫ್ಟಾದ?

ಬಸವರಾಜನ ಭೂದಾಹ ಇಷ್ಟಕ್ಕೇ ನಿಲ್ಲುವಂತದ್ದಲ್ಲ. ಸಾಮಾನ್ಯವಾಗಿ ಯಾವುದೇ ಧಾರ್ಮಿಕ ಅಥವಾ ಆಧ್ಯಾತ್ಮಿಕ ಟ್ರಸ್ಟ್‌ಗೆ ಜಮೀನನ್ನು ದಾನ ಮಾಡಿದರೆ ಅದು ಆ ಟ್ರಸ್ಟ್‌ನ ಹೆಸರಲ್ಲೇ ರಿಜಿಸ್ಟರ್ ಆಗಬೇಕು. ಆದರೆ ಬಸವರಾಜ್ ರಾಜಋಷಿ ಜಮೀನುಗಳನ್ನು ತನ್ನ ಬಾಲಬಡುಕು ಡೈರೆಕ್ಟರ್‌ಗಳ ಹೆಸರಿಗೆ ನೋಂದಾಯಿಸಿಕೊಂಡಿದ್ದಾನೆ. ಆ ಮೂಲಕ ಅವು ಖಾಸಗಿ ಸ್ವತ್ತುಗಳಾಗಿವೆ. ಬ್ರಹ್ಮಕುಮಾರಿ ನಿರ್ಮಲಾ ಬಾಯಿ ಹೆಸರಿಗೆ ತಪೋವನ ಯಲ್ಲಾಪುರದಲ್ಲಿ 9 ಎಕರೆ 36 ಗುಂಟೆ ಜಮೀನು, ಬ್ರಹ್ಮಕುಮಾರ ಆನಂ... ದತ್ತಕ ಪುತ್ರ ಕೆ.ಮಂಜುನಾಥನ ಹೆಸರಿಗೆ ತಪೋವ... ಯಲ್ಲಾಪುರದ 1 ಎಕರೆ 16 ಗುಂಟೆ ಜಮೀನು, ಬ್ರ... ಜಯಂತಿ ಹೆಸರಿಗೆ ಮಾಚ್ಯಾಪುರ ಕಲಘಟ್ಟಿಯಲ್ಲಿ ... ಎಕರೆ 2 ಗುಂಟೆ ಹಾಗೂ 5 ಎಕರೆ 5 ಗುಂಟೆ... ಎರಡು ಆಸ್ತಿ, ಬ್ರ.ಕು.ಅನ್ನಪೂರ್ಣಾಳ ಮಾಚ್ಯಾಪು... ಕಲಘಟ್ಟಿಯಲ್ಲಿ 4 ಎಕರೆ 26 ಗುಂಟೆ ಜಮೀನು... ಬ್ರಹ್ಮಕುಮಾರಿ ಲಕ್ಷ್ಮಿ ಹೆಸರಲ್ಲಿ ಹುಬ್ಬಳ್ಳಿಯ ಉಣಕಲ್ಲಿನ 167 ಚದರಡಿ, 89 ಚದರ ಅಡಿ ಹಾಗೂ 113 ಚದರ ಅಡಿ ಅಳತೆಯ ಮೂರು ಆಸ್ತಿಗಳು ರಿಜಿಸ್ಟರ್ ಆಗಿವೆ. ಸರ್ವಸಂಗ ಪರಿತ್ಯಾಗಿಗಳಾದ ... ಬ್ರಹ್ಮಕುಮಾರಿಗಳಿಗೆ ಆಸ್ತಿಯ ಗೊಡವೆ ಏಕೆ? ಹಾಗೊ... ಅವು ಸಂಸ್ಥೆಗೆ ಸೇರುವುದಾಗಿದ್ದರೆ ಅವರವರ ಸ್ವಂತ ಹೆಸರ... ನೋಂದಣಿಯಾಗಿರುವುದು ಏಕೆ? ಇಂತಹ ಪ್ರಶ್ನೆಗಳ... ಬಸವರಾಜನ ಭೂ ರಹಸ್ಯವನ್ನು ಬಿಚ್ಚಿಡುತ್ತವೆ. ಒಂದ... ವಿಷಯವನ್ನು ಗಮನಿಸಬೇಕು, ಅದೇನೆಂದರೆ ಕೋಟ್ಯಾಂತ... ರೂಪಾಯಿ ಬೆಲೆಬಾಳುವ ಆಸ್ತಿಗಳೊಂದಿಗೆ ಪ್ರಜಾಪಿ... ಬ್ರಹ್ಮಕುಮಾರಿ ವಿಶ್ವವಿದ್ಯಾಲಯಕ್ಕೆ ಕಿಂಚಿತ್ತೂ ಸಂಬಂಧವಿ...

ಇಲ್ಲಿ ಮತ್ತೊಂದು ಅಚ್ಚರಿಯ ಸಂಗತಿಯಿದ... ಬಸವರಾಜ ತಾನು ಖರೀದಿಸಿದ ಆಸ್ತಿಯನ್ನು ರಿಜಿಸ್ಟರ್ ಕಚೇರಿಯಲ್ಲಿ ನೋಂದಾಯಿಸಿಕೊಳ್ಳುವಾಗ ತನ್ನ ಉದ್ಯೋಗ... ಕಲಮ್ಮಿನಲ್ಲಿ ಸಮಾಜ ಸೇವಕ ಎಂದು ನೋಂದಾಯಿಸಿದ್ದಾ... ಅಪ್ಪಿತಪ್ಪಿಯೂ ತಾನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವ... ವಿಶ್ವವಿದ್ಯಾನಿಲಯದ ವಲಯ ನಿರ್ದೇಶಕನೆಂದ... ನಮೂದಿಸಲು ಹೋಗಿಲ್ಲ. ಆ ಮೂಲಕ ಬ್ರಹ್ಮಕುಮಾ... ವಿವಿಯನ್ನು ಎಷ್ಟಕ್ಕೆ ಬೇಕೊ, ಅಷ್ಟು ಮಾತ್ರ ಬಳಸಿಕೊಂಡ... ದುಂಡಗಾಗುವ ಹುನ್ನಾರ ನಡೆಸಿದ್ದಾನೆ. ರಾಜ್ಯದ ವಿವಿಧೆ... ಅಕಾಡೆಮಿ ಫಾರ್ ಲೈಫ್ ಎಜುಕೇಶನ್ ಸಂಸ್ಥೆಯ ಹೆಸರ... ಖರೀದಿಸಿದ ಅಖಂಡ ಆಸ್ತಿಗೆ ಬಸವರಾಜ ಅಲಿಯಾ... ರಾಜಋಷಿಯೇ ಒಡೆಯನೆನ್ನುವುದರಲ್ಲಿ ಯಾ... ಅನುಮಾನವೂ ಇಲ್ಲ. ಬ್ರಹ್ಮಕುಮಾರಿ ಮೂಲಗಳನ್ನ... ತನ್ನತ್ತ ಡೈವರ್ಟ್ ಮಾಡುವುದಕ್ಕೋಸ್ಕರವೇ ಈ ಟ್ರಸ... ಹುಟ್ಟುಹಾಕಿದ್ದೆನ್ನುವುದರಲ್ಲಿ ಯಾವ ಸಂಶಯವೂ ಇಲ... ಇದೆಲ್ಲ ಒತ್ತಟ್ಟಿಗಿರಲಿ, ಹುಬ್ಬಳ್ಳಿ ವಿಜಯನಗರದಲ್ಲಿರು... ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ಶಾಖೆಯ ಆಸ್ತಿ... ಬಸವರಾಜ ಋಷಿ ಮತ್ತು ಬ್ರಹ್ಮಕುಮಾರಿ ನಿರ್ಮಲ... ಸೇರಿ ಬೀಗಜಡಿದು ತಮ್ಮ ವಶಕ್ಕೆ ಪಡೆಯುತ್ತಾರೆಂದ... ಇವರ ಆಸ್ತಿದಾಹ ಅದಿನ್ನೆಂತದ್ದಿರಬೇಡ.







Sale - Deed

SALE DEED OF 1/60 UNDIVIDED SHARE RIGHT, TITLE AND INTEREST IN THE LAND (PROPERTY) AND BUILDING

Sale deed consideration : Rs 50,000-00

Sale amount considered For stamp duty : Rs 5,68,000-00


This sale deed is made on this 22 nd day of December 2004, between Shri Sunil S/o Pralhad Ambore Age: Major, Occ: Doctor, R/O: Sai Clinic, IInd Cross, Veerbhadranagar, Belgaum 2) Vijay Maladkar S/o. V.L. Maladkar Age: Major, Occ: Employee, R/O: 194/C, III rd Cross, V th main, J.P. Nagar, Behind Ragi Gudda Temple, Bangalore.

(hereinafter called the "VENDORS of the First Part)


: And :

ACADEMY FOR LIFE EDUCATION, DHARWAD through it's President SHRI. B.K. BASAVARAJ RAJRUSHI Age: 64 years, R/O: Hubli. Through his G.P.A. Holder, Secretary of Academy for Life Education, Dharwad KUMARI. VANI. HEBBUR D/o. I. N. HEBBUR Age: 30 years, R/O: Hanuman Geradi Oni, Gadag.

(hereinafter called the "PURCHASER" of second part.)



ಬಸವರಾಜ ರಾಜಋಷಿ ತನ್ನ ಅಕಾಡೆಮಿ ಫಾರ್ ಲೈಫ್ ಎಜುಕೇಷನ್ ಹೆಸರಿನಲ್ಲಿ ನೋಂದಾಯಿಸಿಕೊಂಡಿರುವ ಆಸ್ತಿ ದಾಖಲೆಗಳು



ಅಸಲಿ ಫೋಟೋದಲ್ಲಿ ಉಷಾಕಿರಣ ಮತ್ತು ಸುಮಕ್ಕ



ನಕಲಿ ಫೋಟೋದಲ್ಲಿ ಉಷಾಕಿರಣ ಜೊತೆ ಪುಂಜಾನಿ

ಬಸವರಾಜನದ್ದು ದೊಡ್ಡ ವಂಚಕ ಜಾಲವೇ ಇದೆ. ...ದಲ್ಲೇ ಒಂದಷ್ಟು ಮರಿ ಕಿರಾತಕರನ್ನು ಬ್ರಹ್ಮಕುಮಾರಿ ...ಜದ ಕೇಂದ್ರಸ್ಥಾನವಾದ ಮೌಂಟ್ ಅಬುವಿನ ಪ್ರಮುಖ ...ದ್ದೆಗಳಲ್ಲಿ ಆಸೀನನಾಗಿಸಿದ್ದಾನೆ. ಹಾಗಾಗಿಯೇ ಇವನು ...ಜದ ಹೆಸರನ್ನು ಎಷ್ಟೇ ಕುಲಗೆಡಿಸಿದರು ಮೌಂಟ್ ... ಮುಖ್ಯಸ್ಥರು ಬಸವರಾಜನನ್ನು ನಿಯಂತ್ರಿಸುವ ...ಜಿಗೇ ಹೋಗುತ್ತಿಲ್ಲ.

ಫೋಟೋ ಫಿಕ್ಸಿಂಗ್ ಪ್ರಕರಣ

...ಪ್ರಜಾಪಿತ ಬ್ರಹ್ಮಕುಮಾರಿ ಹೆಸರಲ್ಲಿ ಭರ್ಜರಿ ಎತ್ತುವಳಿ ...ಡಲು ಈ ಬಸವರಾಜ ರಾಜಋಷಿ ಹೊಸಹೊಸ ...ಗಳನ್ನು ಹುಟ್ಟುಹಾಕುತ್ತಲೇ ಇರುತ್ತಾನೆ. ಉದಾಹರಣೆಗೆ ಈಚೆಗೆ ನಡೆಸಿದ 'ಶರಣರು ಕಂಡ ಶಿವ' ಮತ್ತು ...ಕಂಡ ಪರಮಾತ್ಮ' ಎಂಬೆರಡು ಆಧ್ಯಾತ್ಮಬೂದಿಯ ...ರ್ಯಕ್ರಮಗಳು ಬಸವರಾಜನ ಜೇಬನ್ನು ಭರ್ಜರಿಯಾಗೇ ...ಬಿಸಿದ್ದವು. ಹುಡುಕಿ-ಹುಡುಕಿ ಶ್ರೀಮಂತ ವರ್ಗವಿರುವ ...ಯೇ ತಳವೂರುವ ಈ ಕಾರ್ಯಕ್ರಮಗಳು ಅದಾಗಲೇ ...ಸ್ಸಿ 40 ಪ್ರದರ್ಶನ ಕಂಡಿವೆ! ಶರಣರ ವಚನ ...ವಳಿಯ ಆಳ-ಅಗಲಗಳ ನೆಲೆ ತಿಳಿಯದ ಬಸವರಾಜ ...ಗೆ ಅದ್ಯಾವ ಶಿವನನ್ನು ಸಾಕ್ಷಾತ್ಕಾರ ಮಾಡಿಸುತ್ತಾನೋ ...ವಪ್ರಭುವೇ ಬಲ್ಲ. ಅಸಲಿಗೆ ಈ ಕಾರ್ಯಕ್ರಮಗಳ ...ಸ್ಸಿನ ಪಾಲು ಸಲ್ಲಬೇಕಾದ್ದು ಉಷಾಕಿರಣ ಎನ್ನುವ ...ಕುಮಾರಿ 'ಅಕ್ಕ'ನಿಗೆ. ಯಾಕೆಂದರೆ ಬಸವರಾಜನ ...ಗ್ಯತೆಗೆ ಮೂರು ಮುಕ್ಕಾಲು ಜನ ಸೇರಿಸುವುದೂ ...ಸಾಧ್ಯ. ಅಂತದ್ದರಲ್ಲಿ ಅನಾಮತ್ತು ಸಾವಿರಾರು ಜನರನ್ನು ...ಸಿ ಉಷಾಕಿರಣ ಕಾರ್ಯಕ್ರಮ ಮಾಡಿದರೆ ...ಕೆಯಲ್ಲಿ ಆಸೀನನಾಗಿ ವಚನಗಳ ಬೋಂಗ ಊದಿ ... ಹೋಗುವಾಗ 1 ಲಕ್ಷ ವಸೂಲಿ ಮಾಡಿಕೊಳ್ಳುತ್ತಾನೆ. ಆದರೆ ಬಸವರಾಜನ ಕೀಚಕ ಬುದ್ಧಿ ಎಂತದ್ದೆಂದರೆ, ...ಶಹ ಉಷಾಕಿರಣಳಿಗೇ ಇನ್ನಿಲ್ಲದಂತೆ ಕಾಟಕೊಟ್ಟು ...ಯ ಚಾರಿತ್ರ್ಯವನ್ನೇ ಹಾಳು ಮಾಡಲು ಹವಣಿಸಿದ್ದ. ಉಷಾಕಿರಣಳ ಸಂಪೂರ್ಣ ಕುಟುಂಬವೇ ಪ್ರಜಾಪಿತ ...ಕುಮಾರಿ ಸಮಾಜಕ್ಕೆ ಸಮರ್ಪಿಸಿಕೊಂಡಂತಹುದು. ...ಪ್ರ ಮೂಲದ ಈಕೆಯ ತಂದೆ ಭೀಮಣ್ಣ ಮಡಿವಾಳ ...ರ್ಜ ಸಿಮೆಂಟ್ ಕಂಪನಿಯಲ್ಲಿ ಜನರಲ್ ಮೇನೇಜರ್ ...ನಿವೃತ್ತಿ ಹೊಂದಿದ್ದಾರೆ. ಉಷಾಕಿರಣ ಅಲ್ಲದೆ ಮತ್ತಿಬ್ಬರು ...ಣ್ಣುಮಕ್ಕಳೂ ಇವರಿಗಿದ್ದಾರೆ. ಆಧ್ಯಾತ್ಮಿಕದತ್ತ ಒಲವು ...ಂದಿದ್ದ ಭೀಮಣ್ಣ ಹಿರಿಯ ಮಗಳು ಉಷಾಕಿರಣಳನ್ನು ...ಎ (ತತ್ವಶಾಸ್ತ್ರ) ಓದಿಸಿದ್ದರು. ಆಕೆ ಬೆಂಗಳೂರು ...ವಿದ್ಯಾಲಯದಲ್ಲಿ 5ನೇ ರ್‍ಯಾಂಕ್ ಪಡೆದ ಪ್ರತಿಭಾವಂತೆ. ...ರೆ ಆಧ್ಯಾತ್ಮದ ಗೀಳು ಅತಿಯಾಗಿ ಇಡೀ ಕುಟುಂಬ ...ಹ್ಮಕುಮಾರಿ ಸಮುದಾಯದ ಸನ್ನಿಗೆ ಒಳಗಾಗಿ ...ಸಾದಕ್ಕೆ ಶಿಷ್ಯಾಗಿದ್ದರು. ಆಗಲೇ ಬಸವರಾಜನ ಪರಿಚಯ ಆದದ್ದು. ತತ್ವಶಾಸ್ತ್ರ ಪ್ರವೀಣೆ ಉಷಾಕಿರಣ ಇಂಗ್ಲಿಷ್‌ನಲ್ಲಿ ಆಧ್ಯಾತ್ಮದ ಕುರಿತು ಮಾತಿಗಿಳಿದಳೆಂದರೆ ತಲೆದೂಗದವರೇ ಇಲ್ಲ. ಅದನ್ನೇ ಬಂಡವಾಳ ಮಾಡಿಕೊಂಡ ಬಸವರಾಜ ಆಕೆಯನ್ನು ಬ್ರಹ್ಮಕುಮಾರಿ 'ಅಕ್ಕ'ನನ್ನಾಗಿಸಿ ಜನರನ್ನು ತನ್ನತ್ತ ಸೆಳೆದುಕೊಂಡಿದ್ದ.

ಈ ನಡುವೆ ಉಷಾಕಿರಣ ತನ್ನನ್ನೂ ಮೀರಿಸುವಂತೆ ಅನುಯಾಯಿಗಳ ನಡುವೆ ಹೆಸರು ಮಾಡುತ್ತಿದ್ದದ್ದು ಬಸವರಾಜನ ತಳ ಉರಿಸಿತ್ತು. ಅದೇ ವೇಳೆಗೆ ಅವರಿಬ್ಬರ ನಡುವೆ ಸಣ್ಣದೊಂದು ಮನಸ್ತಾಪವೂ ಹುಟ್ಟಿಕೊಂಡಿತ್ತು. 'ಶರಣರು ಕಂಡ ಶಿವ' ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿದ್ದ ಉಷಾಕಿರಣಳಿಗೆ ಆಯೋಜನೆಯ ಕೊನೆಯಲ್ಲಿ ಒಂದು ಲಕ್ಷ ಕಪ್ಪ ನೀಡಬೇಕೆನ್ನುವ ಮೌಖಿಕ ನಿಬಂಧನೆ ಹಾಕಿದ್ದ. ಅದು ಉಷಾಕಿರಣಳಿಗೆ ಸರಿಕಾಣಲಿಲ್ಲ. ರಾಜಋಷಿಯ ಬಲವಂತದ ಬೇಡಿಕೆಗೆ 'ಭಗವಂತನ ಭಕ್ತರಿಂದ ಹೀಗೆಲ್ಲ ವಸೂಲಿ ಮಾಡಕೂಡದು' ಎಂದು ಆಕೆ ಸಣ್ಣ ಪ್ರತಿಭಟನೆ ಎಸೆದಿದ್ದಳು. ಆದರೂ ಬಸವರಾಜ ಕಾರ್ಯಕ್ರಮದಲ್ಲಿ ವಸೂಲಿಗಿಳಿದಿದ್ದ.

ಈ ನಡುವೆ ಉಷಾಕಿರಣ ಧಾರವಾಡದ ಕುಂದಕ್ಕನ ಮನೆಯಲ್ಲಿ ಹೊಸದೊಂದು ಈಶ್ವರಿ ವಿವಿ ಶಾಖೆಯನ್ನು ತೆರೆದು ನಡೆಸತೊಡಗಿದ್ದಳು. ತಕ್ಕಮಟ್ಟಿಗೆ ಭಕ್ತರೂ ಸೇರತೊಡಗಿದ್ದರು. ಆಗ ಮತ್ತೆ ವಕ್ಕರಿಸಿದ ಬಸವರಾಜ ಭಕ್ತರ ಸಂಖ್ಯೆ ಹೆಚ್ಚುತ್ತಿದೆ ಎನ್ನುವ ಕಾರಣ ಮುಂದಿಟ್ಟು ಪ್ರತಿ ತಿಂಗಳು 6 ಸಾವಿರ ನೀಡಬೇಕೆಂದು ಕರಾರು ವಿಧಿಸಲು ಮುಂದಾಗಿದ್ದ. ತನ್ನ ಉಪಟಳವನ್ನು ಅಷ್ಟಕ್ಕೇ ನಿಲ್ಲಿಸದ ಸೈಟುದಾಹಿ ಬಸವರಾಜ ಶಾಖೆ ನಡೆಯುತ್ತಿದ್ದ ಕುಂದಕ್ಕನ ಮನೆಯನ್ನೇ ತನ್ನ ಟ್ರಸ್ಟ್ ಹೆಸರಿಗೆ ಬರೆಸಿಕೊಳ್ಳಲು ಹುನ್ನಾರ ಹೂಡಿದ್ದ. ಈ ವಿಚಾರ ಕುಂದಕ್ಕನ ಹಿರಿಮಗ ರವಿ ಎಂಬಾತನಿಗೆ ಗೊತ್ತಾಗಿ ತಕರಾರು ತೆಗೆದು ಬಸವರಾಜನಿಂದ ಮನೆಯನ್ನು ರಕ್ಷಿಸಿಕೊಂಡಿದ್ದ. ಆಸ್ತಿ ತನಗೆ ದಕ್ಕಲಿಲ್ಲವಲ್ಲಾ ಎಂಬ ಕೋಪಕ್ಕೆ ಇಲ್ಲಿ ಶಾಖೆ ನಡೆಯುವುದೇ ಬೇಡ ಮುಚ್ಚಿಬಿಡಿ ಎಂದು ಆದೇಶ ಹೊರಡಿಸಿದ್ದ.

ಆಗಲೂ ಕಂಗೆಡದ ಉಷಾಕಿರಣ ಭವಾನಿನಗರದ ಕೇಶವಾಪುರದಲ್ಲೊಂದು ಮನೆ ಬಾಡಿಗೆ ಪಡೆದು ಅಲ್ಲಿಯೇ ಹೊಸಶಾಖೆ ಆರಂಭಿಸಿದ್ದಳು. ಅದಕ್ಕೆ ಆಕೆಯ ತಂದೆ ಭೀಮಣ್ಣ ಮಡಿವಾಳರೇ ಧನಸಹಾಯ ಮಾಡಿದ್ದರು. ಈ ಹೊಸ ಶಾಖೆಗೂ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಮತ್ತೆ ವಕ್ಕರಿಸಿದ ಬಸವರಾಜ ಯಥಾಪ್ರಕಾರ 6 ಸಾವಿರ ಕಪ್ಪಕ್ಕೆ ಬೇಡಿಕೆಯಿಟ್ಟಿದ್ದ. ಅದಕ್ಕೆ ಉಷಾಕಿರಣ ಸುತಾರಾಂ ಒಪ್ಪಿರಲಿಲ್ಲ. ಆಗಲೇ ಶುರುವಾದದ್ದು ಬಸವರಾಜನ ಚಾರಿತ್ರ್ಯವಧಾ ಸ್ಕೀಮು.


ಉಷಾಕಿರಣಳ ಮೇಲೆ ಅಪಪ್ರಚಾರ ಮಾಡುವುದಕ್ಕೋಸ್ಕರವೇ ಮಾರುತಿ ಪುಂಜಾನಿ ಎಂಬ ಅಡ್ಡಕಸುಬಿಯೊಬ್ಬನನ್ನು ಅಖಾಡಕ್ಕೆ ಗದುಮಿದ್ದ. ಈತ ನೇಕಾರ ನಗರದಲ್ಲಿ ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದವ. ಫೋಟೋ ಮಿಕ್ಸಿಂಗ್, ಅಂದರೆ ಯಾರದೋ ದೇಹಕ್ಕೆ ಮತ್ಯಾರದೊ ಕತ್ತನ್ನು ಕಿಂಚಿತ್ತೂ ಅನುಮಾನ ಬರದಂತೆ ಜೋಡಿಸುವಲ್ಲಿ ಎಕ್ಸ್‌ಪರ್ಟ್. ಆಧ್ಯಾತ್ಮದ ಸೋಗಿನಲ್ಲಿ ಉಷಾಕಿರಣ ಶಾಖೆ ಸೇರಿಕೊಂಡ ಈತ ಬಸವರಾಜ ಹೇಳಿಕೊಟ್ಟಂತೆ ಆಕೆ ಒಬ್ಬಳೇ ಇರುವ ಸಮಯದಲ್ಲೇ ಹೆಚ್ಚಾಗಿ ಬರಲು ಶುರು ಮಾಡಿದ್ದ. ಒಳಗೆ ಉಷಾಕಿರಣಳೊಂದಿಗೆ ಸಭ್ಯವಾಗೇ ಇದ್ದರೂ ಹೊರಜಗತ್ತಿಗೆ ತನ್ನ ನಡೆನುಡಿಯಲ್ಲಿ ಅನುಮಾನ ಹುಟ್ಟಿಹಾಕುವುದು ಅವನ ಪಾಲಿನ ಕಾಯಕವಾಗಿತ್ತು. ಅದನ್ನಾತ ಅಚ್ಚುಕಟ್ಟಾಗಿ ಮಾಡುತ್ತಾ ಬಂದ. ಉಷಾಕಿರಣ ಮತ್ತು ತನ್ನ ನಡುವೆ ಅನೈತಿಕ ಸಂಬಂಧವಿದೆಯೆಂಬರ್ಥದ ಪುಕಾರು ಎಬ್ಬಿಸಿದ್ದ.

ಪ್ರಕರಣಕ್ಕೆ ಮತ್ತಷ್ಟು ಫೋರ್ಸ್ ಕೊಡಲು ಹುನ್ನಾರ ನಡೆಸಿದ ಬಸವರಾಜ, ತನ್ನ ನಂಬಿಗಸ್ಥೆ ನಿರ್ಮಲ ಎನ್ನುವ ಕುಮಾರಿಯನ್ನು ಉಷಾಕಿರಣಳ ಮನೆಗೆ ಕಳುಹಿಸಿ ಆಕೆಯದೊಂದು ಫೋಟೊ ಕದಿಯಲು ಹೇಳಿದ್ದ. ಹಾಗೆ ಬಂದ ನಿರ್ಮಲಾ ಕದ್ದದ್ದು ಜೈಪುರದಲ್ಲಿ ಉಷಾಕಿರಣ ಮತ್ತು ಸುಮಕ್ಕ ಎಂಬ ಮತ್ತೊಬ್ಬ ಕುಮಾರಿ ತೆಗೆಸಿಕೊಂಡ ಫೋಟೊವನ್ನು. ಆಕೆ ಕದ್ದುತಂದ ಫೋಟೊವನ್ನು ತನ್ನ ಶಿಷ್ಯ ಮಾರುತಿ ಪುಂಜಾನಿ ಕೈಗಿತ್ತ ಬಸವರಾಜ ಕಥೆಗೊಂದು ಟ್ವಿಸ್ಟ್ ನೀಡುವ ಉಪಾಯ ಹೇಳಿಕೊಟ್ಟಿದ್ದ. ಅದರಂತೆ ತನ್ನದೇ ಕೈಚಳಕದ ಮೂಲಕ ಫೋಟೋದಲ್ಲಿ ಉಷಾಕಿರಣ ಪಕ್ಕ ಇದ್ದ ಸುಮಕ್ಕನ ಚಿತ್ರವನ್ನು ಕಟ್ ಮಾಡಿ ಆ ಜಾಗಕ್ಕೆ ತನ್ನನ್ನೇ ಕೂರಿಸಿದ ಮಾರುತಿ ಪುಂಜಾನಿ ಅದನ್ನು ಬ್ರಹ್ಮಕುಮಾರಿ ಸಮಾಜದಲ್ಲಿ ಹರಿಬಿಟ್ಟಿದ್ದ (ನೀಡಿರುವ ಎರಡೂ ಫೋಟೊಗಳನ್ನು ಸೂಕ್ಷ್ಮವಾಗಿ ಗಮನಿಸಿ, ಒಂದು ಅಸಲೀ ಫೋಟೊ ಮತ್ತೊಂದು ಪುಂಜಾನಿ ಫಿಕ್ಸಿಂಗ್‌ನ ನಕಲೀ ಫೋಟೊ). ಅಷ್ಟುದಿನ ಇಬ್ಬರ ಸಂಬಂಧದ ಬಗ್ಗೆ ಗಾಸಿಪ್ ಮಾತ್ರವೇ ಕೇಳಿದ್ದ ಜನ, ಫೋಟೊ ನೋಡುತ್ತಿದ್ದಂತೆಯೇ ಉಷಾಕಿರಣಳ ಚಾರಿತ್ರ್ಯವನ್ನೇ ಅನುಮಾನದ ತಕ್ಕಡಿಯಲ್ಲಿಟ್ಟು ತೂಗಿಬಿಟ್ಟರು. ಆಕೆಯ ಶಾಖೆಗೆ ನೆರೆಯುತ್ತಿದ್ದ ಜನರ ಸಂಖ್ಯೆಯೂ ನೋಡನೋಡುತ್ತಿದ್ದಂತೆಯೇ ಕುಸಿಯತೊಡಗಿತ್ತು.

ಅಂತೂಇಂತೂ ಬಸವರಾಜ ತಾನಂದುಕೊಂಡಿದ್ದ ಉದ್ದೇಶವನ್ನು ಶಿಷ್ಯ ಮಾರುತಿ ಮೂಲಕ ಸಾಧಿಸಿಕೊಂಡಿದ್ದ. ಆದರೆ ಆಧ್ಯಾತ್ಮವನ್ನು ಹರಡಬೇಕಾದ ಶ್ವೇತ ಸಮುದಾಯದೊಳಗೇ ಹಾದರ, ಅನೈತಿಕ ಚಟುವಟಿಕೆಯ ಕೆಟ್ಟ ಘಮಲು ಹರಡಿಸಿ ಬ್ರಹ್ಮಕುಮಾರಿ ಸಮಾಜದ ತತ್ವವನ್ನೇ ಮಣ್ಣುಪಾಲು ಮಾಡಿದ್ದಾನೆ. ಇದು ಕೇವಲ ಒಬ್ಬ ಉಷಾಕಿರಣಳಿಗೆ ಆದ ದೌರ್ಜನ್ಯವಲ್ಲ, ತನ್ನ ಮಾತು ಕೇಳದ ಪ್ರತಿಯೊಬ್ಬ ಕುಮಾರಿಯನ್ನು ಈತ ಬಗ್ಗಿಸುವುದೇ ಇಂಥಾ ಥರ್ಡ್‌ಕ್ಲಾಸ್ ಮಾರ್ಗಗಳ ಮೂಲಕ. ಆಧ್ಯಾತ್ಮಕ್ಕೋಸ್ಕರ ತನ್ನ ಮೂರೂ ಹೆಣ್ಣುಮಕ್ಕಳನ್ನು ಅರ್ಪಿಸಿದ್ದ ಉಷಾಕಿರಣಳ ತಂದೆ ಭೀಮಣ್ಣ ಮಡಿವಾಳರಿಗೆ ಮಗಳ ಮೇಲೆ ಬಂದ ಈ ಆರೋಪ ಭಾರೀ ಆಘಾತವನ್ನೇ ಉಂಟುಮಾಡಿತ್ತು. ಹಠ ಬಿಡದ ಅವರು ಕೇಶವಾಪುರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ವಿಚಾರಣೆ ಮಾಡಲು ಪೊಲೀಸರು ಮಾರುತಿ ಪುಂಜಾನಿ ಹಾಗೂ ನಿರ್ಮಲಾರನ್ನು ಕರೆಸಿ ಬಿಸಿ ಮುಟ್ಟಿಸುತ್ತಿದ್ದಂತೆಯೇ ಬಸವರಾಜ ರಾಜಋಷಿಯ ಆಣತಿಯಂತೆಯೇ ತಾವು ಈ ಕೆಲಸ ಮಾಡಿದ್ದಾಗಿ ಒಪ್ಪಿಕೊಂಡು ತಪ್ಪೊಪ್ಪಿಗೆ ಪತ್ರಬರೆದು ಕೊಟ್ಟಿದ್ದರು. ಆದರೆ ಈ ಸತ್ಯಸಂಗತಿ ಪ್ರಪಂಚದ ಗಮನಕ್ಕೆ ಬರುವ ಮೊದಲೇ ಇಡೀ ಪ್ರಕರಣವನ್ನು ತನ್ನೆಲ್ಲಾ ಪ್ರಭಾವಬೀರಿ ಮುಚ್ಚಿಹಾಕಿದ ಬಸವರಾಜ ತಿಪ್ಪೆಸಾರಿಸಿದ್ದ.

ಇವತ್ತಿಗೂ ಎಷ್ಟೋ ಮುಗ್ಧ ಹೆಣ್ಣುಮಕ್ಕಳು ಆಧ್ಯಾತ್ಮದ ಅಮಲು ನೆತ್ತಿಗೇರಿಸಿಕೊಂಡು ಇಂಥಾ ಢೋಂಗಿ ರಾಜಋಷಿಗಳ ದಾಸ್ಯಕ್ಕೆ ತಮ್ಮನ್ನು ಅರ್ಪಿಸಿಕೊಳ್ಳುತ್ತಿದ್ದಾರೆ. ಅಂತಹವರ ಪಾಲಿಗೆ ಕೊನೆಗೆ ಉಳಿಯುವುದು ಬ್ಲ್ಯಾಕ್‌ಮೇಲ್ ಬದುಕು ಮಾತ್ರ. ಬಸವರಾಜನಂತ ಕಟುಗರು ರಿಯಲ್ ಎಸ್ಟೇಟ್ ದಂಧೆ ನಡೆಸಿಕೊಂಡು ಆರಾಮಾಗೇ ಇರುತ್ತಾರೆ. ಯಾಕೆಂದರೆ ನಮ್ಮದು 'ನಾಗರಿಕ' ಸಮಾಜ!

■ ಟಿ.ಎನ್.ಷಣ್ಮುಖ



ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ಪಹಣಿ ಪತ್ರಿಕೆ (R.T.C) ಫಾರಂ ನಂ. 16

1184593062

Print Page No: 2

ಆಧ್ಯಾತ್ಮದ ಟ್ರಸ್ಟ್ ಹೆಸರಿನಲ್ಲಿರುವ ಆಸ್ತಿ ದಾಖಲೆಗಳು

05 ⏮ ಹೊನ್ನಾವರ...

ಹವಾಡದಿಂದ ಪೂನಾ ಸಂಸ್ಥೆ ನೀಡಿದ್ದ ಅಳಿವೆ ಹೂಳೆತ್ತುವ ಕಾಮಗಾರಿ ವರದಿ ಸಮುದ್ರದ ಪಾಲಾಗಿಹೋಯ್ತು. ಸಿದ್ದು ಸರ್ಕಾರ ಅಧಿಕಾರಕ್ಕೆ ಬಂದಾಗ ಮತ್ತೆ ಅಳಿವೆ ಸುಗಮಗೊಳಿಸುವಿಕೆಗೆ 28 ಕೋಟಿಯ ಪ್ರಸ್ತಾಪ ಆಯ್ತು. ಆದರೀಗ ಈ 28 ಕೋಟಿ ತೆಗೆದಿಟ್ಟು ವರ್ಷ ಒಂದು ಕಳೆದರೂ ಮೀನುಗಾರಿಕಾ ಮಂತ್ರಿ ಅಭಯ ಜೈನ್‌ಗಾಗಲಿ ಬಂದರು ಮಂತ್ರಿ 'ಮಂತನ'ಸೂರ್‌ಗಾಗಲಿ ಅದರ ಖಬರೇ ಇಲ್ಲ.

ಸ್ಥಳೀಯ ಶಾಸಕ ವೈದ್ಯ ತಾನು ಮೀನುಗಾರ ಕುಲದವನೆಂದು ಬಾಯಿ ಬಡಿದುಕೊಳ್ಳುತ್ತಾನೆಯೇ ಹೊರತು 'ಅಳಿವೆ' ಸರಿಪಡಿಸಿ ಕುಲಬಾಂಧವರ ಜೀವ ಉಳಿಸಬೇಕೆಂದು ಯೋಚಿಸುತ್ತಿಲ್ಲ. ಪರ್ಸೆಂಟೇಜ್ ವ್ಯವಹಾರದಲ್ಲಿ ಬಿಜಿಯಾಗಿರುವ ವೈದ್ಯನಿಗೆ ಅಮಾಯಕ ಮೀನುಗಾರರ ಜೀವ-ಜೀವನೋಪಾಯ ಕಸುಬಿನತ್ತ ಲಕ್ಷ್ಯ ಹರಿಸಲು ಪುರಸೊತ್ತಾದರೂ ಎಲ್ಲಿದೆ?! ಕುಮಟಾ ನಕಲಿ ಶಾಸಕಿ ಶಾರದಮ್ಮನಿಗೆ ಅಳಿವೆ ಗೋಳೇ ಗೊತ್ತಿಲ್ಲ. ಅಸಲಿ ಶಾಸಕ ರವಿಕುಮಾರ್ ಶೆಟ್ಟಿ (ಶಾರದಾರ ಪುತ್ರ ರತ್ನ)ಗೆ ಮೀನುಗಾರರ ಜೀವ ಲೆಕ್ಕಕ್ಕಿಲ್ಲ. ಆತನದೇನಿದ್ದರೂ ಬಿಗ್ ಡೀಲ್-ಡಿಂಗ್‌ಡಾಂಗ್!!

ಬ್ರೇಕ್‌ವಾಟರ್ ಹಾಕಿ, ಪ್ರತ್ಯೇಕ ಚಾನೆಲ್ ಮಾಡಿ ಮೀನುಗಾರಿಕಾ ಬೋಟ್‌ಗಳು ಸರಾಗವಾಗಿ ಸಮುದ್ರಕ್ಕೆ ಹೋಗಿಬರುವಂತೆ ಹೂಳೆತ್ತುವ ಯೋಜನೆಗೆ 28 ಕೋಟಿ ಹಣ ತೆಗೆದಿಟ್ಟಿರುವುದು ಶಾಸಕದ್ವಯರಿಗೆ ಗೊತ್ತೇ ಇಲ್ಲ. ಈ ಪ್ಲಾನ್ ಯಾವ ಹಂತದಲ್ಲಿದೆ ಎಂದು ಮೀನುಗಾರಿಕೆ ಅಥವಾ ಬಂದರು ಇಲಾಖೆಯ ಬೃಹಸ್ಪತಿಗಳಿಗೂ ತಿಳಿದಿಲ್ಲ! ಮೀನುಗಾರ ಸಂಘಟನೆಗಳು ಈ ಪ್ರಾಜೆಕ್ಟ್ ಕತೆಯೇನೆಂದು ಸಂಬಂಧಿಸಿದವರಿಗೆ ಕೇಳುತ್ತಲೇ ಇದ್ದಾರೆ. ಮಂತ್ರಿ-ಶಾಸಕ-ಅಧಿಕಾರಿ ಎಲ್ಲರೂ ಕೈ ತಿರುಗಿಸಿ ಬೆನ್ನು ಹಾಕಿ ಹೋಗುತ್ತಿದ್ದಾರೆ. ಹೊನ್ನಾವರ ಬಂದರಿನಲ್ಲಿ ದೊಡ್ಡ ಪರ್ಷಿಯನ್ ಬೋಟು, ಸಣ್ಣ ಟ್ರಾಲರ್ ಬೋಟು ಮತ್ತು ಯಾಂತ್ರೀಕೃತ ದೋಣಿ ಎಂದು ಸುಮಾರು 200 ಮೀನುಗಾರಿಕಾ ಬೋಟುಗಳಿವೆ. ಇವೆಲ್ಲ ಸಾವಿರಾರು ಬೆಸ್ತರ ಕುಟುಂಬಗಳನ್ನು ಪೊರೆಯುತ್ತಿವೆ.

ಆದರೆ ಈ ಎಲ್ಲ ಬೋಟು-ದೋಣಿಗಳು ಈಗ ಹೊನ್ನಾವರ ಬಂದರು ಮತ್ತು ಆಚೆ ದಡದಲ್ಲಿರುವ ಕಾಸರಗೋಡು ಟೊಂಕದ ಧಕ್ಕೆಯಲ್ಲಿ ಲಾಂಗರು ಹಾಕಿಕೊಂಡು ನಿಂತಿವೆ. ಬೆಸ್ತ ಕುಟುಂಬಗಳು ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ದಿನದೂಡುತ್ತಿದ್ದಾರೆ. ಬಾಯಿ ತೆರೆದುಕೊಂಡು ನಿಂತಿರುವ ಅಳಿವೆ ರಕ್ಕಸ ಬೆಸ್ತರಿಗೆ ಕಡಲಿಗಿಳಿಯಲು ಬಿಡುತ್ತಿಲ್ಲ. ಸಾಂಪ್ರದಾಯಿಕ ಮೀನುಗಾರಿಕೆ ಆಗಸ್ಟ್ 1ರಿಂದ ಶುರುವಾಗಿದೆ. ನಿಷೇಧ ಸರ್ಕಾರಿ ಲೆಕ್ಕದಲ್ಲಿ ತೆರವಾಗಿದ್ದರೂ ಅಳಿವೆ ಭೂತ ಕಾಡುತ್ತಿದ್ದಾನೆ. ಇಷ್ಟೊತ್ತಿಗೆ ಹೊನ್ನಾವರ ಬಂದರಿನಲ್ಲಿ ಕಡಿಮೆಯೆಂದರೂ ಒಂದು ಕೋಟಿಯ ಮತ್ಸ್ಯ ವ್ಯವಹಾರ ನಡೆಯಬೇಕಿತ್ತು. ಬೋಟುಗಳನ್ನು ಅವಾ ಮತ್ತು ಮುಳುಗಿಸಿ ಬಿಡುವ ಅಳಿವೆ ಬೆದರಿಕೆಯಿಂದ ಹೊನ್ನಾವರ ಬಂದರಿನಲ್ಲಿ ಎಲ್ಲ ಖಾಲಿ-ಖಾಲಿ!!

ಜೀವ ಅಷ್ಟೇ ಅಲ್ಲ, ಲಕ್ಷಾಂತರ ಬೆಲೆಯ ಬೋಟು-ಬಲೆಗಳನ್ನು ಅಳಿವೆ ಆಪೋಷನ ಪಡೆಯುತ್ತಿರುವುದು ಮೀನುಗಾರರನ್ನು ಕಂಗಾಲಾಗಿಸಿ ಬಿಟ್ಟಿದೆ. ಕಡಲಿಗಿಳಿಯಲು ಸಾಧ್ಯವಾಗದೆ ಮೀನುಗಾರರೀಗ ಆಳುವ ಮಂತ್ರಿ-ಶಾಸಕ-ಅಧಿಕಾರಿಗಳಿಗೆ ದುಂಬಾಲು ಬಿದ್ದಿದ್ದಾರೆ. ಕೆಲವು ಧೈರ್ಯವಂತರು ಭರತದ ವೇಳೆಯಲ್ಲಿ ಸಾಹಸ ಮಾಡಿ ಸಮುದ್ರ ಪ್ರವೇಶಿಸುತ್ತಿದ್ದಾರೆ. ಆದರೆ ಹಿಡಿದ ಮೀನು ಧಕ್ಕೆಗೆ ತರಲು ಆಗುತ್ತಿಲ್ಲ. ಅಳಿವೆಯಲ್ಲಿ ಸಾಕಷ್ಟು ನೀರಿಲ್ಲದಿದ್ದರೆ ಸಮುದ್ರದಲ್ಲೇ ಸುತ್ತು ಹೊಡೆಯ ಬೇಕಾಗುತ್ತದೆ. ಆಗ ಬೋಟಲ್ಲಿದ್ದ ಮೀನು ಕೆಟ್ಟು ಹೋಗುತ್ತದೆ. ಹೊನ್ನಾವರದ ಮೀನುಗಾರರು ಅದೆಂಥ ಸಂಕಷ್ಟಕ್ಕೆ ಸಿಲುಕಿದ್ದಾರೆಂದರೆ, ಖಾಲಿ ಹೊಟ್ಟೆಯಲ್ಲಿ ದುಡಿಯ ಮೇಲಿರಲಾಗದೇ ಜೀವದ ಹಂಗು ತೊರೆದು ಸಮುದ್ರಕ್ಕೆ ಸೇರಬೇಕಾಗಿದೆ; ಅಳಿವೆ ರಾಕ್ಷಸನನ್ನು ಚಾಕಚಕ್ಯತೆಯಿಂದ ದಾಟಿ ಹೋಗಬೇಕಾಗಿದೆ!


ಅಸಹಾಯಕ ಮೀನುಗಾರರ ಅಳಿವೆ ಹೂಳೆತ್ತುವ ಆಗ್ರಹದ ಮೊರೆತ ಈಗ ಎದ್ದಿದೆ. ಅದು ಸಮುದ್ರದ ಅಬ್ಬರಕ್ಕಿಂತ ಜೋರಾಗುವ ಸೂಚನೆ ಗೋಚರಿಸುತ್ತಿದೆ. ಹಸಿದ ಹೊಟ್ಟೆಯ ಬೆಸ್ತರು ಬೀದಿಗಿಳಿದಾಗ ಕರ್ಮಗೇಡಿ ಶಾಸಕ-ಸಂಸದ-ಮಂತ್ರಿಗಳು ತಪ್ಪಿಸಿಕೊಳ್ಳುವುದು ಕಷ್ಟವಾದೀತು. ಇನ್ನಾದರೂ ಸಂಬಂಧಿಸಿದವರು ಎಚ್ಚೆತ್ತುಕೊಳ್ಳುವರಾ? ಅಳಿವೆ ಸಮಸ್ಯೆ ಗಂಭೀರವಾಗಿ ಪರಿಗಣಿಸಿ ಮೀನುಗಾರರಿಗೆ ನ್ಯಾಯ ಒದಗಿಸುವರಾ?! ಅಳಿವೆ ಬಾಯಿಗೆ ಶಾಶ್ವತ ತಡೆಗೋಡೆ ಹಾಕಿಸುವರಾ?

■ ನಮುಪ


ಮೇಲುಕೋಟೆ ವಜ್ರಾಂಗಿ ಕಳ್ಳ ಭಟ್ಟನ ಮೇಲೆ ಮತ್ತೆ ಬಿತ್ತು ಕೇಸ್



ರತ್ನಾಂಗಿ ಧರಿಸಿದ ಚಲುವನಾರಾಯಣಸ್ವಾಮಿ



ಅರ್ಚಕ ನರಸರಾಜಭಟ್ಟ



ರತ್ನಾಂಗಿ ಆಭರಣ

ಮೇಲುಕೋಟೆ ಚಲುವನಾರಾಯಣಸ್ವಾಮಿಯ ವಜ್ರಾಂಗಿ ಆಭರಣ ಕದ್ದ ಕೇಸು ರೀಓಪನ್ ಆಗಿದೆ. ಚಲುವನಾರಾಯಣಸ್ವಾಮಿಯನ್ನು ಅಲಂಕರಿಸಲು ಭಕ್ತರೊಬ್ಬರು ನೀಡಿದ್ದ ವಜ್ರಾಂಗಿ ಆಭರಣವನ್ನೇ ಲಪಟಾಯಿಸಿದ್ದ ಅರ್ಚಕ ನರಸರಾಜ ಭಟ್ಟ ಸುಳ್ಳು ಸಾಕ್ಷ್ಯಗಳನ್ನು ಹುಟ್ಟುಹಾಕಿ ಕೇಸನ್ನೇ ಮುಚ್ಚಿಹಾಕಿದೆ ಎಂದು ನಿಟ್ಟುಸಿರು ಬಿಡುತ್ತಿರುವಾಗಲೇ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ವಜ್ರಾಂಗಿ ಆಭರಣ ನೀಡಿದ್ದ ದಾನಿ ಮುರುಳಿ ಜಗನ್ನಾಥ್ ಹಾಗೂ ಅದನ್ನು ಮಾಡಿಕೊಟ್ಟ ಚೆನ್ನೈನ ವಿಜಯ ಮೆಟಲ್ ವರ್ಕ್ಸ್‌ನ ಮಾಲೀಕರು ಚಿನ್ನದ ತೂಕದಲ್ಲಿ ವ್ಯತ್ಯಾಸವಾಗಿಲ್ಲ ಎಂದು ಸುಳ್ಳು ಮಾಹಿತಿ ನೀಡಿದ್ದನ್ನೇ ಸತ್ಯವೆಂದು ನಂಬಿದ ಪಾಂಡವಪುರ ಪೊಲೀಸರು ನ್ಯಾಯಾಲಯಕ್ಕೆ ನರಸರಾಜ ಭಟ್ಟನ ವಿರುದ್ಧ ಬಿ ರಿಪೋರ್ಟ್ ಸಲ್ಲಿಸಿದ್ದರು. ಅಷ್ಟಕ್ಕೇ ತಾನಿನ್ನು ಬಚಾವ್ ಎಂದು ಭಟ್ಟ ಖುಷಿಯಿಂದ ಬೀಗುತ್ತಿದ್ದ. ಆದರೆ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ.ಬಿ.ಶ್ರೀನಿವಾಸ್‌ರ ದೂರು ಈಗ ಭಟ್ಟನ ಬುಡವನ್ನು ಬಿಸಿ ಮಾಡುತ್ತಿದೆ.

ವಜ್ರಾಂಗಿ ಅವ್ಯವಹಾರದ ಹಿನ್ನಲೆಯಲ್ಲಿ ಅರ್ಚಕ ನರಸರಾಜ ಭಟ್ಟನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸುವಂತೆ ಶ್ರೀನಿವಾಸ್ ಈ ಹಿಂದೆ ದೂರು ಸಲ್ಲಿಸಿದ್ದರೂ ಪಾಂಡವಪುರ ಪೊಲೀಸರು ಕ್ಯಾರೆ ಎಂದಿರಲಿಲ್ಲ. ಬೇಸತ್ತ ಎಂ.ಬಿ.ಶ್ರೀನಿವಾಸ್ ಅರ್ಚಕ ನರಸರಾಜ ಭಟ್ಟನ ವಿರುದ್ಧ ನೇರ ನ್ಯಾಯಾಲಯಕ್ಕೆ ಪಿಸಿಆರ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಧೀಶ ವೆಂಕಟೇಶಪ್ಪ ವಜ್ರಾಂಗಿ ಆಭರಣ ಕದ್ದ ಪ್ರಕರಣದಲ್ಲಿ ಅವ್ಯವಹಾರದ ವಾಸನೆ ಹೊಡೆಯುತ್ತಿದ್ದು 156 (3)ರಡಿ ನ್ಯಾಯಾಲಯಕ್ಕಿರುವ ಅಧಿಕಾರದನ್ವಯ ಅರ್ಜಿಯನ್ನೇ ದೂರೆಂದು ಪರಿಗಣಿಸಿ ಪ್ರಕರಣ ತನಿಖೆ ನಡೆಸಿ ಆಗಸ್ಟ್ 30 ರೊಳಗೆ ವರದಿ ಸಲ್ಲಿಸುವಂತೆ ಶ್ರೀರಂಗಪಟ್ಟಣ ಡಿವೈಎಸ್ಪಿ ಗೀತಾ ಪ್ರಸನ್ನರವರಿಗೆ ಸೂಚಿಸಿದೆ. ತನಿಖೆಗೆ ಪೂರಕವಾಗುವಂತೆ ಆಗಸ್ಟ್ 7ರಂದು ನರಸರಾಜ ಭಟ್ಟನ ಮೇಲೆ ಮೇಲುಕೋಟೆ ಠಾಣೆಯಲ್ಲಿ ಐಪಿಸಿ ಸೆಕ್ಷನ್ 379, 380, 406, 409, 420 ಮತ್ತು 451ರಡಿ ಕಳ್ಳತನ, ನಂಬಿಕೆದ್ರೋಹ, ವಂಚನೆ, ದೇವಾಲಯದ ಪಾವಿತ್ರ್ಯತೆಗೆ ಧಕ್ಕೆ, ಮೋಸ, ಅಧಿಕಾರ ದುರ್ಬಳಕೆ, ಅಕ್ರಮ ಪ್ರವೇಶ, ಭಕ್ತರ ಭಾವನೆಗೆ ಧಕ್ಕೆ ಮೊದಲಾದ ಅಂಶಗಳ ಮೇಲೆ ಮತ್ತೆ ಎಫ್‌ಐಆರ್ ಬಿದ್ದಿದೆ. ನ್ಯಾಯಾಲಯದ ಬಿಸಿ ತಟ್ಟುತ್ತಿದ್ದಂತೆಯೇ ಭಟ್ಟ ತಲೆಮರೆಸಿಕೊಂಡಿದ್ದಾನೆ.

ಪ್ರಕರಣದ ವಿವರ

ಚಲುವನಾರಾಯಣಸ್ವಾಮಿಗೆ ಬೆಂಗಳೂರಿನ ಮುರುಳಿ ಜಗನ್ನಾಥ ಎಂಬ ಭಕ್ತನೊಬ್ಬ 2009ರ ಏಪ್ರಿಲ್ 29ರಂದು 1200 ಗ್ರಾಂ ಚಿನ್ನ, 3815 ಗ್ರಾಂ ಬೆಳ್ಳಿ ಹರಳುಗಳನ್ನು ಬಳಸಿ ಸುಮಾರು 20 ಲಕ್ಷ ರೂಪಾಯಿ ಬೆಲೆಬಾಳುವ ಮೇಲಾಯ, ಕೀಳಾಯ, ಪಾದಜೋಡಿ ಹೊಂದಿರುವ ರತ್ನಾಂಗಿ ಆಭರಣವನ್ನು ಮಾಡಿಸಿಕೊಟ್ಟಿದ್ದರು.

ಆದರೆ ದೇವಾಲಯದ ಅರ್ಚಕ ನರಸರಾಜ ಭಟ್ಟ ಚಲುವನಾರಾಯಣಸ್ವಾಮಿಯ ರತ್ನಾಂಗಿ ಹಾಗೂ ಹವಳದ ಸರಗಳನ್ನು ಸುಮಾರು ನಾಲ್ಕು ತಿಂಗಳು ತನ್ನಲ್ಲಿಯೇ ಇಟ್ಟುಕೊಂಡಿದ್ದ. ಯಾವಾಗ ಚಲುವನಾರಾಯಣಸ್ವಾಮಿಗೆ ಅರ್ಚಕ ನರಸರಾಜ ಭಟ್ಟ ರತ್ನಾಂಗಿ ಆಭರಣ ಹಾಕದೆ ಇರುವುದು ಕಂಡುಬಂತೋ ಈ ಬಗ್ಗೆ ಕೆಲವೊಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು.

ತದನಂತರ ವಿಶ್ವ ಹಿಂದೂ ಧರ್ಮ ಸಂರಕ್ಷಣಾ ವೇದಿಕೆಯ ಶಂಕರ್, ರೈತಸಂಘದ ಜಿ.ರಮೇಶ್ ಮತ್ತಿತರರು ದೂರು ದಾಖಲಿಸಲು ಮುಂದಾಗಿದ್ದರು. ನಿಯಮದ ಪ್ರಕಾರ ಯಾವುದೇ ಆಭರಣ, ಹಣ ನೀಡಿದರೂ ಅದು ದೇವಾಲಯ ಕಾರ್ಯನಿರ್ವಹಣಾಧಿಕಾರಿಯ ಗಮನಕ್ಕೆ ಬರಲೇಬೇಕು. ಆದರೆ ಅರ್ಚಕ ನರಸರಾಜ ಭಟ್ಟ ನಾಲ್ಕು ತಿಂಗಳಾದರೂ ರತ್ನಾಂಗಿ ಆಭರಣದ ಬಗ್ಗೆ ತಿಳಿಸಿರಲೇ ಇಲ್ಲ, ಯಾವಾಗ ರತ್ನಾಂಗಿ ಆಭರಣ ಕಾಣೆಯಾದ ಸಂಗತಿ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿ, ದೂರು ಸಹ ದಾಖಲಾಗಲಿದೆ ಎಂಬ ಸುದ್ದಿ ಕಿವಿಗೆ ಬಿತ್ತೋ ಆಗ ಎಚ್ಚೆತ್ತ ದೇವಾಲಯದ ಕಾರ್ಯನಿರ್ವಹಣಾಧಿಕಾರಿ 2009 ಜುಲೈ 13ರಂದು ನರಸರಾಜ ಭಟ್ಟ ಸೇರಿದಂತೆ ಎಲ್ಲಾ ಅರ್ಚಕರುಗಳಿಗೆ 'ನನ್ನ ಹಾಗೂ ಕಚೇರಿಯ ಗಮನಕ್ಕೆ ಬಾರದೇ ದೇವರಿಗೆ ಆಭರಣಗಳನ್ನು ಅನಧಿಕೃತವಾಗಿ ಧರಿಸುತ್ತಿರುವುದು ಗಮನಕ್ಕೆ ಬಂದಿದೆ. ಇದು ಕಾನೂನುಬಾಹಿರವಾಗಿದ್ದು, ದೇವರಿಗೆ ಅನಧಿಕೃತವಾಗಿ ಧರಿಸಿರುವ ಆಭರಣಗಳಿದ್ದಲ್ಲಿ, ರಸೀದಿ ಪಡೆಯುವುದು ತಪ್ಪಿದಲ್ಲಿ ಸಂಬಂಧಿಸಿದವರ ಮೇಲೆ ಕ್ರಮ ಜರುಗಿಸಲಾಗುವುದು' ಎಂದು ನೋಟಿಸ್ ನೀಡಿದ್ದರು.

ಬೋಗಸ್ ರಸೀದಿ

ಹೀಗೊಂದು ನೋಟಿಸ್ ಕೈ ಸೇರುತ್ತಿದ್ದಂತೆಯೇ ಎಚ್ಚೆತ್ತುಕೊಂಡ ನರಸರಾಜ ಭಟ್ಟ ಮಾರನೇ ದಿನವೇ ಅಂದರೆ 2009 ಜುಲೈ 14ರಂದು ಚೆನ್ನೈನ ವಿಜಯ ಮೆಟಲ್ ವರ್ಕ್ಸ್ ಹೆಸರಿನ ಲೆಟರ್‌ಹೆಡ್ (ಜುಲೈ 13ರ ಹೆಸರಿನಲ್ಲಿ) ನೀಡಿ, ಅದರಲ್ಲಿ ದಾನಿಯಾದ ಬೆಂಗಳೂರಿನ ಮುರುಳಿ ಜಗನ್ನಾಥ್‌ರವರಿಂದ ಶ್ರೀ ಚಲುವನಾರಾಯಣಸ್ವಾಮಿಗೆ ಬೆಳ್ಳಿಯಂತೆ ಕಾಣುವ ಚಿನ್ನದ ಹರಳುಮಿಶ್ರಿತ ರತ್ನಾಂಗಿ ಕವಚ ಎಂದು ನಮೂದಿಸಿ ಕಾರ್ಯನಿರ್ವಹಣಾಧಿಕಾರಿಗೆ ನೀಡಿದ್ದ. ಅದರಲ್ಲಿ ಆಭರಣ ವಿವರ ಮತ್ತು ಮೌಲ್ಯ ಮಾತ್ರ ಬರೆಯಲಾಗಿತ್ತು, ಆದು ಅಧಿಕೃತ ರಸೀದಿ ಅಥವಾ ನಗದುಬಿಲ್ಲು ಎಂಬ ಬಗ್ಗೆ ಯಾವ ದಾಖಲೆ ಲೆಟರ್‌ಹೆಡ್‌ನಲ್ಲಿರಲಿಲ್ಲ, ಅಲ್ಲದೆ ಅರ್ಚಕ ನರಸರಾಜಭಟ್ಟ ದಾನಿಗಳಾದ ಮುರುಳಿ ಜಗನ್ನಾಥ್‌ರವರು 2009 ಏಪ್ರಿಲ್ 29ರಂದು ರತ್ನಾಂಗಿ ಆಭರಣವನ್ನು ಅರ್ಪಿಸಲು ಇಚ್ಛಿಸಿದ ಕಾರಣ ದೇವರ ವಿಗ್ರಹಕ್ಕೆ ಸೂಕ್ತವಾದ ಅಳತೆಯನ್ನು ಕಣ್ಣಂಚಿನಲ್ಲೇ ಊಹಿಸಿಕೊಂಡು ಮಾಡಿಸಿ ತಂದಿದ್ದರು. ಅದನ್ನು ದೇವರಿಗೆ ಅರ್ಪಿಸಿದಾಗ ಅದರ ಅಳತೆಯಲ್ಲಿ ವ್ಯತ್ಯಾಸವಾಗಿದ್ದ ಹಿನ್ನಲೆಯಲ್ಲಿ ಅದನ್ನು ವಾಪಸ್ ಪಡೆದು ಸರಿಪಡಿಸಿ ಜುಲೈ 14ರಂದು ದೇವಾಲಯದ ಕಾರ್ಯನಿರ್ವಹಣಾಧಿಕಾರಿಗಳ ಮುಂದೆ ಸಮರ್ಪಿಸಿದ್ದೇನೆಂದು ಸುಳ್ಳು ಹೇಳಿದ್ದ. ರತ್ನಾಂಗಿ ಆಭರಣದಲ್ಲಿ ನಡೆದಿರುವ ಅವ್ಯವಹಾರಗಳನ್ನು ಮುಚ್ಚಿಕೊಳ್ಳಲು ನರಸರಾಜ ಭಟ್ಟ ಹಾಗೂ ಆತನೊಂದಿಗೆ ಶಾಮೀಲಾಗಿರುವ ಕಳ್ಳಕೂಟ ಇಂತಹ ಅನೇಕ ಸುಳ್ಳುಗಳನ್ನು ಹೇಳಿರುವುದು ಉಪವಿಭಾಗಾಧಿಕಾರಿಗಳ ತನಿಖೆಯಲ್ಲಿ ಬಯಲಾಗಿತ್ತು.

ಸುಳ್ಳಿನ ಕಂತೆ

ಪಾಂಡವಪುರ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ನ್ಯಾಯಾಲಯ ವಿಚಾರಣೆ ನಡೆಸಿದ ನಂತರ ಅರ್ಚಕ ನರಸರಾಜ ಭಟ್ಟ ರತ್ನಾಂಗಿ ಆಭರಣದ ವಿಚಾರದಲ್ಲಿ ನೀಡಿರುವ ಅಷ್ಟೂ ಮಾಹಿತಿ ಸುಳ್ಳೆಂಬುದು ಸಾಬೀತಾಗಿತ್ತು, ದಾನಿ ಮುರುಳಿ ಜಗನ್ನಾಥ್ 2009ರ ಏಪ್ರಿಲ್ 29ರಂದು ಚಲುವನಾರಾಯಣಸ್ವಾಮಿಗೆ ರತ್ನಾಂಗಿ ಆಭರಣ ತಂದಿರುವುದಾದರೂ, ಅದನ್ನು ಯಾರ ಬಳಿ ತಯಾರು ಮಾಡಿಸಿದ್ದರು, ಆಭರಣ ತಯಾರಿಕೆ ಸಂಬಂಧ ನೀಡಿರುವ ಅಧಿಕೃತ ರಸೀದಿ, ಆಭರಣದ ತೆರಿಗೆ ಪಾವತಿ ಬಗ್ಗೆ ವಿವರಗಳು ಇರಲಿಲ್ಲ. ಸುದ್ದಿ ಬಹಿರಂಗವಾದ ನಂತರ ಚೆನ್ನೈನ ವಿಜಯಮೆಟಲ್ ವರ್ಕ್ಸ್‌ನವರ ಲೆಟರ್‌ಹೆಡ್‌ನಲ್ಲಿ 2009 ಏಪ್ರಿಲ್ 13ರಂದು ನೀಡಲಾಗಿದ್ದ ಪತ್ರ, ನಗದುಬಿಲ್ಲು ಅಥವಾ ಅಧಿಕೃತ ರಸೀದಿ ಅಲ್ಲವೆಂದು ವಿಚಾರಣೆಯಿಂದ ಬಯಲಾಗಿತ್ತು, ಅವೆಲ್ಲಾ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲು ನರಸರಾಜ ಭಟ್ಟ ಸೃಷ್ಟಿಸಿಕೊಂಡ ಸುಳ್ಳು ದಾಖಲೆಗಳಾಗಿದ್ದವು.

ಆಯುಕ್ತರ ಪ್ರಶ್ನಾರ್ಹ ನಡೆ

ದೇವಾಲಯ ವ್ಯವಸ್ಥಾಪನಾ ಸಮಿತಿಯ ನಿರ್ಣಯ ಪರಿಶೀಲಿಸಿದ ಧಾರ್ಮಿಕ ದತ್ತಿ ಆಯುಕ್ತರು ಉಪವಿಭಾಗಾಧಿಕಾರಿ ತನಿಖಾ ತಂಡ ಈ ಕುರಿತು ಸರ್ಕಾರದ ಉನ್ನತಮಟ್ಟದ ತನಿಖೆಗೆ ಶಿಫಾರಸು ಮಾಡಿರುವ ಅಂಶ, ಜಿಲ್ಲಾ ಸರ್ಕಾರಿ ವಕೀಲರು ತನಿಖೆ ಅಗತ್ಯ ಎಂದಿರುವ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ 'ದಾನಿಗಳು ಆಭರಣವನ್ನು ಯಾರ ವಶಕ್ಕೆ ನೀಡಿದ್ದರು, ಆಭರಣದ ತೂಕದಲ್ಲಿ ಹೇಗೆ ವ್ಯತ್ಯಾಸವಾಯಿತು, ಯಾರ ಬಳಿ ಇದ್ದಾಗ ವ್ಯತ್ಯಾಸ ಉಂಟಾಯಿತು ಎಂಬ ಬಗ್ಗೆ ದೇವಾಲಯ ವ್ಯವಸ್ಥಾಪನಾ ಸಮಿತಿಯ ವರದಿಯಲ್ಲಿ ಕಂಡುಬರುತ್ತಿಲ್ಲ, ಹಾಗಾಗಿ ಶಿಸ್ತುಕ್ರಮ ಜರುಗಿಸಲು ದೇವಾಲಯ ಸಮಿತಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗೇ ಬಿಟ್ಟದ್ದು' ಎಂದು ಆದೇಶಿಸಿದ್ದರು.

ಉಪವಿಭಾಗಾಧಿಕಾರಿ ನ್ಯಾಯಾಲಯ ಇವೆಲ್ಲವುಗಳ ಬಗ್ಗೆ ವಿಚಾರಣೆ ನಡೆಸಿ, ನರಸರಾಜ ಭಟ್ಟ ತಪ್ಪಿತಸ್ಥ ಎಂದು ವರದಿ ನೀಡಿದ್ದರೂ ಧಾರ್ಮಿಕದತ್ತಿ ಇಲಾಖೆ ಆಯುಕ್ತರು ಮತ್ತೆ ಒಂದಷ್ಟು ಅಂಶಗಳ ಮುಂದಿಟ್ಟು ಹೆಚ್ಚಿನ ತನಿಖೆ ಅಗತ್ಯವಿರುತ್ತದೆ ಎಂಬ ಬಗ್ಗೆ ಹೇಳಿರುವುದು ಪ್ರಶ್ನಾರ್ಹ ಸಂಗತಿಯಾಗಿತ್ತು, 2009ರ ಏಪ್ರಿಲ್ 29ರಂದು ರತ್ನಾಂಗಿ ಆಭರಣ ಅವ್ಯವಹಾರ ಪ್ರಕರಣ ನಡೆದಿದ್ದರೂ, ನಾಲ್ಕು ವರ್ಷಗಳಾದರೂ ಅರ್ಚಕ ನರಸರಾಜಭಟ್ಟನ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಾಧ್ಯವಾಗದಿದ್ದುದ್ದು ಇಡೀ ಪ್ರಕರಣದ ಭ್ರಷ್ಟ ವ್ಯಾಪ್ತಿಯನ್ನು ಪರಿಚಯಿಸುತ್ತದೆ.

ದಾನಿಯ ಗೊಂದಲದ ನಡೆ

ಈ ನಡುವೆ ರತ್ನಾಂಗಿ ಆಭರಣ ಮಾಡಿಸಿಕೊಟ್ಟ ಬೆಂಗಳೂರಿನ ಜಯನಗರದ ದಾನಿ ಮುರುಳಿ ಜಗನ್ನಾ ಹೇಳಿಕೆಗಳೇ ಗೊಂದಲ ಮೂಡಿಸುವಂತಿದ್ದವು. ರತ್ನಾಂಗಿಯ 1200 ಗ್ರಾಂ ಚಿನ್ನ, 3815 ಗ್ರಾಂ ಬೆಳ್ಳಿ ಇದೆ ಎಂ ಮೊದಲು ಹೇಳಿಕೆ ನೀಡಿದ್ದರು. ಅಲ್ಲದೆ ಚೆನ್ನೈನ ವಿಜಯ ಮೆಟಲ್‌ವರ್ಕ್ಸ್‌ನವರು ಆಭರಣದ ಬಾಬ್ತು 19,55,3 ರೂಗಳೆಂದು ಲೆಟರ್‌ಹೆಡ್‌ನಲ್ಲಿ ಬರೆದುಕೊಟ್ಟಿದ್ದ ತನಿಖೆಯ ವೇಳೆ ದೇವಾಲಯ ಆಭರಣ ಮೌಲ್ಯಮಾಪನಗಾರ ವೇದಮೂರ್ತಾಚಾರ್ 1200 ಗ ಚಿನ್ನ ಇಲ್ಲ, ಬದಲಿಗೆ 387 ಗ್ರಾಂ ಮಾತ್ರ ಇದೆ ಎಂ ವರದಿ ನೀಡಿದ್ದರು. ಹಾಗಾದರೆ ಇನ್ನು ಉಳಿಕೆ 8 ಗ್ರಾಂ ಚಿನ್ನ ಏನಾಯಿತು? ಅಲ್ಲದೆ ಬೆಳ್ಳಿಯ ಪ್ರಮಾಣದ ಹೇಗೆ ಹೆಚ್ಚಾಯಿತು? ಎಂಬ ಪ್ರಶ್ನೆಗಳು ಮೂಡಿದ್ದ ಚಿನ್ನವನ್ನು ಕರಗಿಸಿ ತೆಗೆದುಕೊಂಡು ಬೆಳ್ಳಿಯನ್ನು ಅ ಪ್ರಮಾಣದಲ್ಲಿ ಸೇರಿಸಲಾಗಿದೆ ಎಂಬುದು ಇದರಿಂ ಸಾಬೀತಾಗಿತ್ತು.

ಆದರೆ ಉಪವಿಭಾಗಾಧಿಕಾರಿ ವಿಚಾರಣೆ ನಡೆ ಸಂದರ್ಭದಲ್ಲಿ ಭಟ್ಟನನ್ನು ರಕ್ಷಿಸುವ ಸಲುವಾಗಿ ದಾ ಮುರುಳಿ ಜಗನ್ನಾಥ್ ತನ್ನ ಹೇಳಿಕೆಯನ್ನು ತಿರುಚಿ, ವಜ್ರಾ ತೂಕದಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದಿದ್ದರು. ಹಾಗೆಯೆ ಚೆನ್ನೈನ ವಿಜಯ ಮೆಟಲ್ ವರ್ಕ್ಸ್‌ನ ಮಾಲೀಕರೂ ಭಟ್ ರಕ್ಷಣೆಗೆ ಮುಂದಾಗಿ ಆಭರಣದಲ್ಲಿ ಯಾವುದ ವ್ಯತ್ಯಾಸವಾಗಿಲ್ಲ ಎಂದು ಹೇಳಿಕೆ ನೀಡಿದ್ದರು. ಈ ಆಧಾರ ಮೇಲೆ 2014ರ ಫೆ.28ರಂದು ಮೇಲುಕೋಟೆ ಪೊಲೀಸ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದರು. ಇಷ್ಟೇ ತನಿಖೆ ನಡೆಯುವವರೆಗೆ ನಾಪತ್ತೆಯಾಗಿ ತೆರೆಮರೆಯ ಕೈಯಾಡಿಸುತ್ತಿದ್ದ ಭಟ್ಟ, ಪೊಲೀಸರು ಬಿ ರಿಪೋರ್ಟ ಸಲ್ಲಿಸುತ್ತಿದ್ದಂತೆಯೇ ಮೇಲುಕೋಟೆಯಲ್ಲಿ ಪ್ರತ್ಯಕ್ಷನಾಗಿ

ಆದರೆ ಈಗ ಎಂ.ಬಿ.ಶ್ರೀನಿವಾಸ್ ಸಲ್ಲಿಸಿ ಅರ್ಜಿಯಿಂದಾಗಿ ಮತ್ತೆ ಅಜ್ಞಾತವಾಸದ ಮೊರೆ ಹೋಗಿದ್ದಾ ಮೇಲುಕೋಟೆ ಚಲುವನಾರಾಯಣಸ್ವಾಮಿಯ ಸನ್ನಿಧಿ ಬರುವ ಭಕ್ತರ ಸಂಖ್ಯೆ ಹೆಚ್ಚಾದಂತೆಲ್ಲಾ ಆದಾಯ ಹೆಚ್ಚಾಗಿದೆ. ಪ್ರತಿವರ್ಷ ನಡೆಯುವ ವೈರಮುಡಿ ಉತ್ಸವ ದೇಶ-ವಿದೇಶಗಳಿಂದ ಭಕ್ತರು ಬರುತ್ತಾರೆ. ಈ ಹಿನ್ನಲೆಯ ದೇವಸ್ಥಾನದ ಮೇಲೆ ಹಿಡಿತ ಸಾಧಿಸಲು ಅರ್ಚಕರು ನಾಲ್ಕಾರು ಬಣಗಳು ಮುಗಿಬೀಳುತ್ತವೆ. ಪ್ರತಿ ಬಾರಿಯ ಈ ಜಗಳ ಇದ್ದೇ ಇರುತ್ತದೆ. ದೇವಸ್ಥಾನದಿಂದ ಬರು ಆದಾಯದ ಮೇಲೆ ಕಣ್ಣಿಟ್ಟಿರುವ ಅರ್ಚಕ ಕುಟುಂಬಗ ಭಕ್ತಾದಿಗಳು ನೀಡುವ ಹಣ-ಆಭರಣಗಳ ಬಗ್ಗೆ ಸು ಲೆಕ್ಕ ಕೊಡುತ್ತಾ ತಮ್ಮ ತಿಜೋರಿಯನ ತುಂಬಿಸಿಕೊಳ್ಳುತ್ತಿದ್ದಾರೆ. ನರಸರಾಜಭಟ್ಟನ ಪ್ರಕರಣ ಒಂದ ಸ್ಯಾಂಪಲ್ ಅಷ್ಟೆ. ಬೆವರು ಕಾಣದ ಇಂತಹ ಅರ್ಚ ಬುಡಗಳಿಗೆ ಬಿಸಿ ನೀರು ತಗುಲಬೇಕೆಂದರೆ ಡಿವೈ ಗೀತಾ ಪ್ರಸನ್ನರು ಪ್ರಾಮಾಣಿಕ ತನಿಖೆ ಕೈಗೆತ್ತಿಕೊಂ ವಜ್ರಾಂಗಿ ಕಳ್ಳನಿಗೆ ತಕ್ಕ ಪಾಠ ಕಲಿಸಬೇಕಿದೆ.

■ ಎನ್. ನಾಗೇ

...ಎಬೋಲಾ ಮಾರಿಯ ಸುತ್ತಮುತ್ತ...



...ಂದಿ ಜ್ವರ, ಚಿಕುನ್‌ಗುನ್ಯಾ, ಎಚ್‌ಐವಿ ಮುಂತಾದ ...ಯಿಲ್ಲದ ರೋಗಗಳನ್ನು ಹಿಂದಿಕ್ಕಿ ಇದೀಗ ಎಬೋಲಾ ... ಹೆಸರಿನ ರೋಗ ದಾಳಿಯಿಟ್ಟಿದೆ. ಇಂದಿಗೂ ...ದಂತಹ ಬಡದೇಶಗಳನ್ನು ಕಾಡುತ್ತಿರುವ, ಪ್ರತಿವರ್ಷ ...ತರ ಮಂದಿಯ ಸಾವಿಗೆ ಕಾರಣವಾಗುತ್ತಿರುವ ...ರೋಗ, ಮಲೇರಿಯಾ ಮುಂತಾದವುಗಳು ಈ ...ೋಲಾ ಮುಂದೆ ಏನೂ ಅಲ್ಲ ಎಂಬಂಥ ಸುದ್ದಿಗಳು ...ವಾಗಿವೆ. ಈ ಹಿನ್ನೆಲೆಯಲ್ಲಿ ಈ ಎಬೋಲಾ ಮಾರಿಯ ...ರ್ವಾಪರಗಳನ್ನು ಸ್ವಲ್ಪ ಕೆದಕಿ ನೋಡೋಣ.

...ತುಕಕಾರಿ ಸುದ್ದಿಗಳೆಂದರೆ ಮಾಧ್ಯಮಗಳಿಗೆ ಹಬ್ಬ. ...ಂದರೆ ಟಿಆರ್‌ಪಿಯೇ ಅವುಗಳ ಜೀವ ಜೀವಾಳ. ...ಪ್ರದೇ ಸಮಸ್ಯೆ ಎದುರಾದಾಗ ಸಮಸ್ಯೆಯ ವಿವಿಧ ...ಮುಗಳನ್ನು ವಿಶ್ಲೇಷಣೆಗೊಳಪಡಿಸುವ ಕೆಲಸ ವಿರಳದಲ್ಲಿ ... ಸುದ್ದಿ ಮಾಧ್ಯಮಗಳ ಇಂಥಾ ಹೊಣೆಗೇಡಿ ವರ್ತನೆ ...ನಡುವೆಯೂ ನಮಗೆ ಅಲ್ಲೊಂದು ಇಲ್ಲೊಂದು ...ಬ್ದಾರಿಯುತ ಬರಹಗಳು ಕಂಡುಬರುತ್ತವೆ. ಹಿರಿಯ ...ರ್ತರಾದ ನಾಗೇಶ ಹೆಗಡೆಯವರು ತಮ್ಮ ವಿಜ್ಞಾನ ... ಅಂಕಣದಲ್ಲಿ ಸಮಯೋಚಿತ ಹಾಗೂ ಉಪಯುಕ್ತ ...ನ ಬರೆದಿದ್ದಾರೆ.

...ಬೋಲಾ ಮಾರಿ ದಾಂಗುಡಿಯಿಟ್ಟ ಬಗೆಯನ್ನು ವಿವರಿಸಿದ್ದಾರೆ:

"2013ರ ಡಿಸೆಂಬರ್ 6ರಂದು ಗಿನಿ ದೇಶದ ...ಯೂಂಡು ಎಂಬ ಹಳ್ಳಿಯಲ್ಲಿ ಎರಡು ವರ್ಷದ ... ಸತ್ತಿತು. ಮುಂದಿನ ಒಂದು ತಿಂಗಳಲ್ಲಿ ಆ ಮಗುವಿನ ...ತಾಯಿ, ಅಜ್ಜಿ ಸತ್ತರು. ಅವರ ಆರೈಕೆಗೆಂದು ಹೋಗಿದ್ದ ...ಗಿತ್ತಿ ಅಲ್ಲೇ ಸಮೀಪದ ಮೆಸೆಂಟಾ ಆಸ್ಪತ್ರೆಯಲ್ಲಿ ... ಆಕೆಯನ್ನು ಪರೀಕ್ಷಿಸಿದ ಆರೋಗ್ಯ ಕಾರ್ಯಕರ್ತನಿಗೆ ...ರಿ 10ರಂದು ಸಾವು ಬಂತು. ಇವನಿಗೆ ಶುಶ್ರೂಷೆ ...ದ ವೈದ್ಯರು ಫೆಬ್ರವರಿ 24ರಂದು ಸತ್ತರು. ಐದು ...ಳ ನಂತರ ಇದೇ ವೈದ್ಯರ ಸಮೀಪ ಸಂಬಂಧಿಯೊಬ್ಬ ...ಸ್ಪಷ್ಟಿದ. ಹತ್ತು ದಿನಗಳ ನಂತರ ವೈದ್ಯರ ಇಬ್ಬರು ...ಂದಿರು ಅಸು ನೀಗಿದರು."

...ಗೆ ಎಂಟು ತಿಂಗಳ ಹಿಂದೆ ಗಿನಿ ದೇಶದಲ್ಲಿ ...ಭವಾದ ಎಬೋಲಾ ಸಾವಿನ ಯಾತ್ರೆ ಪಶ್ಚಿಮ ಆಫ್ರಿಕಾ ...ದ ನಾಲ್ಕು ದೇಶಗಳನ್ನು ಆವರಿಸಿದೆ. ಇದುವರೆಗೆ ...ಯೂಗಿರುವಂತೆ ಸಾವಿನ ಸಂಖ್ಯೆ ಒಂದು ಸಾವಿರ ...ದೆ. ಸುಮಾರು 1750 ಮಂದಿ ರೋಗಿಗಳು ...ೋಲಾ ಸೋಂಕು ತಗುಲಿ ಆಸ್ಪತ್ರೆ ಸೇರಿದ್ದಾರೆ. ಇದರಲ್ಲಿ ...ತೇಕರು ಸಾವಿನ ಹಾದಿಯಲ್ಲಿದ್ದಾರೆ ಎನ್ನಬಹುದು. ...ಕೆಂದರೆ ಎಬೋಲಾ ಸೋಂಕು ತಗುಲಿದವರಲ್ಲಿ ...ಉಳಿದವರು ಶೇಕಡ 10-20 ಮಾತ್ರ!


ಈ ರೋಗದ ಚಿಕಿತ್ಸಾ ವಿಧಾನವೇ ಭಯಭೀತಿ ...ಟ್ಟಿಸುತ್ತದೆ. ರೋಗಿಯನ್ನೂ ಯಾರೂ ಮುಟ್ಟಿಸಿ ...ಳ್ಳುವಂತಿಲ್ಲ, ಪಂಜರದ ಪ್ರಾಣಿಗಳನ್ನು ನೋಡುವಂತೆ ...ದಿಂದಲೇ ಅವರ ಆರೈಕೆ ಆಗಬೇಕು. ರೋಗಿಯ ...ಮೂತ್ರ ಶುಚಿ ಮಾಡುವವರೂ ಗಗನಯಾತ್ರಿಯ ... ನಖಶಿಖಾಂತ ಕವಚ ಧರಿಸಬೇಕು. ಮದ್ದು-ಮಾತ್ರೆ ...ಟ್ಟು ಹೊರಕ್ಕೆ ಬಂದಕೂಡಲೇ ತಾನು ತೊಟ್ಟ ಕವಚವನ್ನು ... ತುರ್ತಾಗಿ ಹೂಳಬೇಕು; ಇಲ್ಲವೇ ಸುಡಬೇಕು. ...ದ, ರಕ್ತಭೇದಿಯ ಲಕ್ಷಣಗಳು ಹೆಚ್ಚಾದಲ್ಲಿ ಸಾವು ...ಟ್ಟ ಖಚಿತ, ಅದೂ ನರಕಯಾತನೆಯ ಸಾವು. ದೇಹದ ... ರಂಧ್ರಗಳಿಂದಲೂ, ಕಿವಿ ಮೂಗುಗಳು ಮಾತ್ರವಲ್ಲದೆ ...ರಿನ ಗ್ರಂಥಿಗಳಿಂದಲೂ ರಕ್ತದ್ರವ ಜಿನುಗುತ್ತದೆ ಎಂದರೆ ...ಹಿಸಿಕೊಳ್ಳಿ.

ಈ ವೈರಸ್ ಅನ್ನು ಪರಿಣಾಮಕಾರಿಯಾಗಿ ಎದುರಿಸ ... ಯಾವುದೇ ಚಿಕಿತ್ಸೆ ಸದ್ಯ ಲಭ್ಯವಿಲ್ಲ, ಚಿಕಿತ್ಸೆ ಎಂಬುದು ... ಕೇವಲ ನಾಮಕಾವಸ್ತೆಗಷ್ಟೆ. ಆದರೆ ಈ ರೋಗಾಣು ...ಯು ಮೂಲಕ ಹರಡುವುದಿಲ್ಲ ಎಂಬುದಷ್ಟೆ ...ಧಾನದ ಸಂಗತಿ. ತೇವಾಂಶವಿಲ್ಲದಿದ್ದರೆ ಈ ವೈರಾಣು ...ಕುಳಿಯುವುದಿಲ್ಲ, ರೋಗಿಯ ಜೀವದ್ರವ ಅಂದರೆ ... ಬೆವರು, ಜೊಲ್ಲು, ಮಲಮೂತ್ರ, ವೀರ್ಯ, ಕಣ್ಣೀರು ...ಂತಾದವುಗಳು ಬೇರೊಬ್ಬರ ದೇಹಕ್ಕೆ ಸೋಂಕಿದರೆ ...ತ್ರ ಎಬೋಲಾ ವೈರಾಣು ಅಂಟಿಕೊಳ್ಳುತ್ತದೆ.

ಈ ರೋಗದ ವಿಲಕ್ಷಣತೆ ಏನೆಂದರೆ ಆಸ್ಪತ್ರೆಗಳೇ ...ರ ಕ್ಯಾರಿಯರ್ ಏಜೆಂಟ್‌ಗಳಾಗುತ್ತವೆ. ಡಾಕ್ಟರ್‌ಗಳೇ ...ರೋಗಿಗಳಾಗುತ್ತಾರೆ. ರೋಗಿಗಳೇ ಡಾಕ್ಟರ್‌ಗಳಾಗಿ ತಮಗೆ ...ೇ ಶುಶ್ರೂಷೆ ಮಾಡಿಕೊಳ್ಳಬೇಕಾದ ಸ್ಥಿತಿ ಬರುತ್ತದೆ! ...ಸಿಯೆರ್ರಾ ಲಿಯೋಣ್‌ನಲ್ಲಿ ರೋಗಿಗಳ ಚಿಕಿತ್ಸೆಯಲ್ಲಿ ...ತೊಡಗಿದ್ದ ಇಬ್ಬರು ತಜ್ಞ ವೈದ್ಯರು ಸ್ವತಃ ಎಬೋಲಾಗೆ ...ಬಲಿಯಾಗಿದ್ದಾರೆ. ಈ ದೇಶಗಳಲ್ಲಿ ಅದೆಷ್ಟೋ ಮಂದಿ ...ಶುಶ್ರೂಷಕ/ಕಿಯರಿಗೆ ಮಾರಕ ಸೋಂಕು ತಗುಲಿದೆ.

ಈ ಹಿನ್ನೆಲೆಯಲ್ಲಿ ಉದ್ಯೋಗ ನಿಮಿತ್ತ ನೈಜೀರಿಯಾದಲ್ಲಿ ಕೆಲಸ ಮಾಡುತ್ತಿರುವ ಭಾರತದ 5 ಮಂದಿ ವೈದ್ಯರು ತವರಿಗೆ ವಾಪಸ್ಸಾಗಲು ಮುಂದಾಗಿದ್ದಾರೆ. ಆದರೆ ಅದು ಅಷ್ಟು ಸುಲಭದ ಸಂಗತಿಯಲ್ಲ. ಹೆಚ್ಚು ವೇತನದ ಆಕರ್ಷಣೆಯಿಂದ ದೇಶ ತೊರೆದಿದ್ದ ಈ ಮಂದಿ ತಮ್ಮ ಪಾಸ್‌ಪೋರ್ಟ್‌ಗಳನ್ನು ಆಯಾ ಆಸ್ಪತ್ರೆಯ ಆಡಳಿತ ಮಂಡಳಿಗಳ ವಶದಲ್ಲಿಟ್ಟಿದ್ದಾರೆ. ಪರಸ್ಪರ ಒಪ್ಪಿತ ನಿಬಂಧನೆಗಳ ಪ್ರಕಾರ ಅವುಗಳನ್ನು ಬೇಕೆಂದಾಗ ವಾಪಸ್ ಪಡೆದುಕೊಳ್ಳುವಂತಿಲ್ಲ. ಹೀಗಾಗಿ ಸದರಿ ವೈದ್ಯರು ತಮ್ಮ ಪಾಸ್‌ಪೋರ್ಟ್‌ಗಳನ್ನು ವಾಪಸ್ ಕೊಡಿಸುವಂತೆ ಭಾರತದ ರಾಯಭಾರಿ ಕಚೇರಿಗೆ ದುಂಬಾಲು ಬಿದ್ದಿದ್ದಾರೆ.

ಆದರೆ ಭಾರತದ ವೈದ್ಯ ವೃತ್ತಿಯ ನೀತಿ-ನಿಯಮಗಳ ಪ್ರಕಾರ ವೈದ್ಯರಾದವರು ಸಾಂಕ್ರಾಮಿಕ ರೋಗ ಹರಡುತ್ತಿರುವ ಸಂದರ್ಭದಲ್ಲಿ ತಮ್ಮ ವೈದ್ಯಕೀಯ ಕರ್ತವ್ಯವನ್ನು ತೊರೆಯುವಂತಿಲ್ಲ. ಹೀಗೆ ಈ ವಿಷಯ ಹಲವು ವಿರೋಧಾ



ಭಾಸಗಳಿಗೆ ದಾರಿ ಮಾಡಿದೆ. ಮುಂದೆ ಇದು ಮತ್ತೊಂದು ದೇವಯಾನಿ ಪ್ರಕರಣದಂತಾದರೂ ಆಶ್ಚರ್ಯವಿಲ್ಲ.

ಮತ್ತೊಂದು ಕಡೆ ಅತಿ ಹೆಚ್ಚು ಎಬೋಲಾಗ್ರಸ್ತವಾಗಿರುವ ಸಿಯೆರ್ರಾ ಲಿಯೋನ್ ಮತ್ತು ಲೈಬೀರಿಯಾಗಳಲ್ಲಿ ಇನ್ನೊಂದು ರೀತಿಯ ವಿಚಿತ್ರ ಬೆಳವಣಿಗೆಯಾಗಿದೆ. ಅಲ್ಲಿನ ಸರ್ಕಾರಗಳು ಎಬೋಲಾ ತುರ್ತು ಪರಿಸ್ಥಿತಿ ಘೋಷಿಸಿವೆ. ಅಲ್ಲಿನ ಪೊಲೀಸ್ ಹಾಗೂ ಸೇನಾಪಡೆಗಳು ರೋಗಗ್ರಸ್ತ ಪ್ರದೇಶಗಳನ್ನು ಸುತ್ತುವರೆದಿವೆ. ಆ ಪ್ರದೇಶಗಳಿಂದ ಯಾರೂ ಹೊರಬರದಂತೆ ನಿರ್ಬಂಧ ವಿಧಿಸಲಾಗಿದೆ. ಔಷಧಿ, ಆಹಾರದಂಥ ಅಗತ್ಯ ವಸ್ತುಗಳ ಸರಬರಾಜಿನ ಹೊರತಾಗಿ ಇತರೆ ವಾಣಿಜ್ಯ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ. ಹೀಗಾಗಿ ಹೆದ್ದಾರಿಗಳಲ್ಲಿ ಮಾತ್ರವಲ್ಲದೆ ಒಳದಾರಿಗಳಲ್ಲೂ ಪೊಲೀಸ್ ಹಾಗೂ ಸೇನಾಪಡೆಗಳು ಗಸ್ತು ತಿರುಗುತ್ತಿದ್ದಾರೆ.

ಎಬೋಲಾ ಮಾರಿಯಿಂದ ದೇಶವನ್ನು ರಕ್ಷಿಸಿಕೊಳ್ಳಬೇಕೆಂದರೆ ಇಂಥ ಕ್ರಮ ಅನಿವಾರ್ಯ ಎಂದು ಅಲ್ಲಿನ ಸರ್ಕಾರಗಳು ಸಮರ್ಥನೆ ನೀಡುತ್ತಿವೆ. ಅಕ್ಷರಶಃ ನರಕಗಳಾಗಿರುವ ಎಬೋಲಾ ಪೀಡಿತ ಹಳ್ಳಿಗಾಡಿನ ಜನರನ್ನು ದೇವರೇ ಕಾಪಾಡಬೇಕು.

ವಿಜ್ಞಾನ-ತಂತ್ರಜ್ಞಾನಗಳು ದಾಪುಗಾಲಿಡುತ್ತಿರುವ ಇಂಥಾ ಆಧುನಿಕಯುಗದಲ್ಲಿ ಇಷ್ಟೆಲ್ಲಾ ಸಂಭವಿಸುತ್ತಿದೆ. ಮಂಗಳಯಾನಗಳು, ಧೂಮಕೇತುವಿಗೆ ಪ್ರಯಾಣಗಳು, ಸಾವಿರಾರು ಕಿಲೋಮೀಟರ್ ದೂರದ ಗುರಿಯನ್ನು ಹೊಡೆದುರುಳಿಸಬಲ್ಲ ಕ್ಷಿಪಣಿಗಳು ಇತ್ಯಾದಿ ಇತ್ಯಾದಿ ಸಂಶೋಧನೆಗಳು ಯಥೇಚ್ಛವಾಗಿ ಬರುತ್ತಿವೆ. ಎಲ್ಲ ಸಂಶೋಧನೆಗಳೂ ಲಾಭ-ನಷ್ಟಗಳ ಲೆಕ್ಕಾಚಾರದ ಸುಳಿಯಲ್ಲಿ ಸಿಲುಕಿವೆ. ಬಡದೇಶಗಳಲ್ಲಿ ಹುಳುಹುಪ್ಪಟೆಗಳಂತೆ ಉದುರಿಬೀಳುತ್ತಿರುವ ಮನುಷ್ಯ ಜೀವಿಗಳ ರಕ್ಷಣೆ ಕಾರ್ಪೊರೇಟ್ ಜಗತ್ತಿಗೆ ಆದ್ಯತೆಯಾಗಲು ಹೇಗೆ ತಾನೆ ಸಾಧ್ಯ?!

ಈ ಹಿಂದೆ ಹಂದಿಜ್ವರದ ಭೀತಿ ಆವರಿಸಿದ್ದಾಗ ದೂರದಿಂದಲೇ ಜ್ವರವನ್ನು ಗುರುತಿಸಬಲ್ಲ ದುಬಾರಿ ಯಂತ್ರಗಳನ್ನು ಇದೇ ಕಂಪನಿಗಳು ತಯಾರಿಸಿ ಆ ಯಂತ್ರವನ್ನು ಇಡೀ ಭೂಗ್ರಹದ ತುಂಬಾ ವಿತರಣೆ ಮಾಡಿದ್ದವು. ಸಹಾಯಾರ್ಥ ಎಂದುಕೊಳ್ಳಬೇಡಿ. ದುಬಾರಿ ಬೆಲೆಗೆ. ಕರ್ನಾಟಕ ಸರ್ಕಾರ ಕೂಡ ಇಂಥಾ ದುಬಾರಿ ಯಂತ್ರಗಳನ್ನು ಖರೀದಿಸಿತ್ತು. ಅದರ ಏಜೆಂಟರು ಯಾರು? ಒಳವ್ಯವಹಾರದ ಮರ್ಮವೇನು? ಹೋಗಲಿ, ಇಂದು ಯಾರಾದರೂ ಆ ಯಂತ್ರಗಳ ಧೂಳನ್ನಾದರೂ ಒರೆಸುತ್ತಿದ್ದಾರೋ ಇಲ್ಲವೋ ಎಂಬ ಸಂಗತಿ ಒಂದು ತನಿಖೆಯ ನಂತರವೇ ಹೊರಬರುತ್ತದೆ. ಇದು ನಮ್ಮ ಸರ್ಕಾರಗಳು ವ್ಯವಹರಿಸುತ್ತಿರುವ ರೀತಿ.

ಎಬೋಲಾ ಎಂಬ ರೋಗ ಪತ್ತೆಯಾಗಿ ಇಲ್ಲಿಗೆ 38 ವರ್ಷಗಳು ಸಂದಿವೆ. ಆಫ್ರಿಕಾದ ಈ ಬಡ ದೇಶಗಳಿಂದ ಅಪಾರ ಪ್ರಮಾಣದ ಖನಿಜ, ತೈಲ ಮತ್ತು ಅರಣ್ಯ ಸಂಪತ್ತನ್ನು ಲೂಟಿಹೊಡೆದ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ಹಾಗಿರಲಿ, ವಿಶ್ವ ಸಂಸ್ಥೆ ಕೂಡ ಎಬೋಲಾ ವೈರಸ್ ಬಗ್ಗೆ ಕಿಂಚಿತ್ತಾದರೂ ಕ್ರಮ ಕೈಗೊಂಡ ಉದಾಹರಣೆಯೂ ಇಲ್ಲ, ಬದಲಿಗೆ ಆಫ್ರಿಕಾ ದೇಶದ ವಿವಿಧ ಬುಡಕಟ್ಟುಗಳ ನಡುವಿನ ವೈಷಮ್ಯಕ್ಕೆ ಗಾಳಿ ಊದಿ ರಕ್ತಪಾತವನ್ನು ಹೆಚ್ಚಿಸುವ ತಂತ್ರಗಳನ್ನು ಹೆಣೆದರು. ನಂತರ ಶಾಂತಿ ಸ್ಥಾಪನೆಯ ಹೆಸರಿನಲ್ಲಿ ಶಾಂತಿಪಾಲನಾ ಪಡೆಗಳನ್ನು ನಿಯೋಜಿಸಿದವು. ಇಂಥಾ 'ಶಾಂತಿಪಾಲನಾ ಪಡೆ'ಗಳಲ್ಲಿ ಭಾರತದ ನೂರಾರು ಸೈನಿಕರೂ ಇಂದಿಗೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಅದು ಹಾಗಿರಲಿ.

ಈಗ ಇದ್ದಕ್ಕಿದ್ದಂತೆ ಎಬೋಲಾ ವೈರಾಣು ಬಗ್ಗೆ ಪಾಶ್ಚಿಮಾತ್ಯ ದೇಶಗಳಿಗೆ ಎಲ್ಲಿಲ್ಲದ ಕಾಳಜಿ ಬಂದುಬಿಟ್ಟಿದೆ. ಒಂದೆಡೆ ಕಾರ್ಪೊರೇಟ್ ಮಾಧ್ಯಮಗಳು ಎಬೊಲಾ ಬಗ್ಗೆ ದಿಗಿಲು ಹುಟ್ಟಿಸುತ್ತಿದ್ದರೆ, ಮತ್ತೊಂದೆಡೆ ಎಬೋಲಾಗೆ ಔಷಧಿ ಕಂಡುಹಿಡಿಯುವ ಪ್ರಕ್ರಿಯೆಯೂ ನಿಗೂಢವಾಗಿ ಸಾಗುತ್ತಿದೆ. ಅಮೆರಿಕಾದ ವಿಜ್ಞಾನಿಗಳ ತಂಡ ರೂಪಿಸಿಕೊಂಡಿರುವ ಝೀಮ್ಯಾಪ್ ಎಂಬ ಕಂಪನಿ ಈ ವಿಷಯದಲ್ಲಿ ಪ್ರಗತಿ ಸಾಧಿಸಿರುವುದಾಗಿ ಹೇಳಿಕೊಂಡಿದೆ. ಗ್ಲಾಕ್ಸೋ ಸ್ಮಿತ್‌ಲೈನ್, ಫೈಜರ್ ಕಂಪನಿಗಳೂ ಸಂಶೋಧನೆಯಲ್ಲಿ ತೊಡಗಿಕೊಂಡಿರುವುದಾಗಿ ಸುದ್ದಿಗಳಿವೆ.

ಮನುಷ್ಯರ ಮೇಲೆ ಪ್ರಯೋಗಿಸುವ ಮೊದಲು ಅನುಸರಿಸಬೇಕಾದ ಕಟ್ಟಳೆಗಳನ್ನೆಲ್ಲಾ ಬದಿಗೊತ್ತಿ ನೇರವಾಗಿ ರೋಗಿಗಳ ಮೇಲೆ ಪ್ರಯೋಗಿಸಲು ಪಶ್ಚಿಮ ರಾಷ್ಟ್ರಗಳ ಹಿಡಿತದಲ್ಲಿರುವ ವಿಶ್ವ ಆರೋಗ್ಯ ಸಂಸ್ಥೆ ಅವಸರದಲ್ಲಿ ತೀರ್ಮಾನಿಸಿದೆ. ಲೈಬೀರಿಯಾ ದೇಶ ಇಂಥಾ ಪ್ರಯೋಗಕ್ಕೆ ಬಾಗಿಲು ತೆರೆದಿರುವ ಸುದ್ದಿಯೂ ಬಂದಿದೆ.

ಈ ಎಬೋಲಾ ವೈರಾಣು ಮಿಲಿಟರಿ ಲ್ಯಾಬಿನಲ್ಲಿ ಜೀವಾಣು ಅಸ್ತ್ರವಾಗಿ ತಯಾರಾಗಿದ್ದು ಎಂದು ಹೇಳಲು ಸೂಕ್ತ ಸಾಕ್ಷ್ಯಾಧಾರಗಳು ಇಲ್ಲವಾದರೂ ಇದನ್ನು ಜೈವಿಕ ಅಸ್ತ್ರವಾಗಿ ಬಳಸಿಕೊಳ್ಳುವ ಸಾಧ್ಯತೆಗಳಿವೆ ಎಂದು ಹಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ನಾಗೇಶ ಹೆಗಡೆಯವರ ಮಾತಿನಲ್ಲೇ ಹೇಳುವುದಾದರೆ "ಎಬೋಲಾ ರೋಗಿಯ ಕಣ್ಣೀರಿನಲ್ಲೂ ನಂಜಾಣುಗಳಿರುವ ಹಾಗೆ ರೋಗಿಗಳ ಬಗ್ಗೆ ಅನುಕಂಪ ತೋರುವವರ (ಅಮೆರಿಕದ) ಕಣ್ಣೀರಿನಲ್ಲೂ ಸ್ವಾರ್ಥದ ನಂಜಾಣುಗಳಿದ್ದಾವು."

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಎಬೋಲಾ ಸಾಗಿಬಂದ ಹಾದಿಯಲ್ಲಿ...

ಎಬೋಲಾ ಎಂಬುದೊಂದು ಜೀವನದಿಯ ಹೆಸರು ಎಂದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. 1976ರಲ್ಲಿ ಜೈರೆ ದೇಶದ(ಈಗ ಕಾಂಗೋ ಗಣರಾಜ್ಯದ ಭಾಗವಾಗಿದೆ.) ಎಬೋಲಾ ನದಿ ದಂಡೆಯ ಹಳ್ಳಿಗಳಲ್ಲಿ ಈ ಮಾರಕ ರೋಗ ಪ್ರಪ್ರಥಮ ಬಾರಿಗೆ ಕಾಣಿಸಿಕೊಂಡು 280 ಜನರನ್ನು ಬಲಿತೆಗೆದುಕೊಂಡಿತ್ತು. ಹೀಗೆ ಆ ವೈರಸ್‌ಗೆ ಎಬೋಲಾ ನದಿಯ ಹೆಸರು ಅಂಟಿಕೊಂಡಿದ್ದು ಒಂದು ವಿಚಿತ್ರ ಸತ್ಯ. ಎಬೋಲಾ ನದಿ ತನ್ನ ಹಾದಿಯುದ್ದಕ್ಕೂ ಲಕ್ಷಾಂತರ ಜೀವರಾಶಿಗಳನ್ನು ಪೊರೆದು ಪೋಷಿಸುತ್ತಿದ್ದರೆ, ಈ ಎಬೋಲಾ ಹೆಸರಿನ ವೈರಸ್ ತಾನು ಸಾಗಿದ ಹಾದಿಯುದ್ದಕ್ಕೂ ಇದುವರೆಗೆ ಸುಮಾರು 2000 ಮಂದಿಯನ್ನು ಬಲಿ ತೆಗೆದುಕೊಂಡಿದೆ.

1976 : ಜೈರೆಯಲ್ಲಿ 280, ಸೂಡಾನ್‌ನಲ್ಲಿ 151, 1995 : ಮತ್ತೆ ಜೈರೆಯಲ್ಲಿ 254, 2000-01 : ಉಗಾಂಡದಲ್ಲಿ 224, 2001-02 : ಗಬಾನ್‌ನಲ್ಲಿ 53 ಮತ್ತು ಕಾಂಗೋದಲ್ಲಿ 44, 2003 : ಕಾಂಗೋದಲ್ಲಿ 157, 2007 : ಮತ್ತೆ ಕಾಂಗೋದಲ್ಲಿ 187 ಮತ್ತು ಉಗಾಂಡದಲ್ಲಿ 37, 2008 : ಫಿಲಿಪ್ಪೈನ್ಸ್‌ನ ತೋಟದ ಕೂಲಿಗಳಲ್ಲಿ ಕಾಣಿಸಿಕೊಂಡಿತ್ತು, 2014 : ಗಿನಿಯ, ಲೈಬೀರಿಯ, ಸಿಯೆರ್ರಾ ಲಿಯೋಣ್ ಮತ್ತು ನೈಜೀರಿಯಾಗಳಲ್ಲಿ ಸತ್ತವರ ಸಂಖ್ಯೆ ಸಾವಿರ ದಾಟಿದೆ. ರೋಗಪೀಡಿತರು 1750 ಮಂದಿ. ಇದರಲ್ಲಿ ಅಮೆರಿಕ, ಜರ್ಮನಿ, ಫ್ರಾನ್ಸ್ ಮುಂತಾದ ಪಾಶ್ಚಿಮಾತ್ಯ ದೇಶಗಳ ಪ್ರಜೆಗಳೂ ಇದ್ದಾರೆ.

ಭಾರತ- ಕೈಗೊಂಡ ಕ್ರಮಗಳೇನು?

ಪ್ರಪಂಚದಾದ್ಯಂತ ಅಡೆತಡೆಯಿಲ್ಲದೆ ವ್ಯಾಪಿಸುತ್ತಿರುವ ಎಬೋಲಾ ನಿಯಂತ್ರಣಕ್ಕೆ ಎಲ್ಲಾ ದೇಶಗಳು ಸಮರೋಪಾದಿಯ ಕ್ರಮ ಕೈಗೊಳ್ಳುತ್ತಿವೆ. ಆದರೆ ಈ ವಿಷಯದಲ್ಲಿ ಭಾರತ ಮಾತ್ರ ಮಾಮೂಲಿಯಂತೆ ಬೇಕಾಬಿಟ್ಟಿಯಾಗಿ ವರ್ತಿಸುತ್ತಿದೆ.

ಎಬೋಲಾ ಪಿಡುಗು ಮತ್ತೆ ದಾಳಿಯಿಟ್ಟು 5 ತಿಂಗಳು ದಾಟಿದ ನಂತರ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ಗಳ ಆಡಳಿತ ಮಂಡಳಿಗೆ ಮತ್ತು ರಾಜ್ಯ ಸರ್ಕಾರಗಳಿಗೆ ಒಂದು ಸೂಚನೆಯನ್ನು ಹೊರಡಿಸಿತು. ಇದು ಅತ್ಯಂತ ಬೇಜವಾಬ್ದಾರಿತನದಿಂದ ಕೂಡಿದ್ದು ಈ ರೋಗದ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಳ್ಳಬೇಕಿಲ್ಲ ಎಂಬಂಥ ಧೋರಣೆಯನ್ನು ವ್ಯಕ್ತಪಡಿಸುತ್ತಿತ್ತು.

ಅದರ ಪ್ರಕಾರ "ಯಾವುದೇ ವ್ಯಕ್ತಿ ಎಬೋಲಾ ಪೀಡಿತ ಪ್ರದೇಶಗಳಿಗೆ ಭೇಟಿಕೊಟ್ಟ ಹಿನ್ನಲೆಯವರಾಗಿದ್ದರೂ ಕೂಡ ಸೋಂಕು ತಗಲುವ ಸಾಧ್ಯತೆ ಕಡಿಮೆ". ಮಾಮೂಲಿಯಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸೂಚನೆ ನೀಡಲಾಗಿತ್ತು. ಹೀಗಾಗಿ ಇದುವರೆಗೆ ಕೇಂದ್ರ ಅಥವ ಯಾವುದೇ ರಾಜ್ಯ ಸರ್ಕಾರ ಅಥವ ಏರ್‌ಪೋರ್ಟ್ ಅಥಾರಿಟಿಗಳು ಈ ಎಬೋಲಾ ಮಾರಿಯನ್ನು ಎದುರಿಸಲು ಸೂಕ್ತವಾಗಿ ಸನ್ನದ್ಧರಾಗಿಲ್ಲ.

ಭಾರತದ ಮಾಧ್ಯಮಗಳೂ ಸರ್ಕಾರದ ಧೋರಣೆಯನ್ನೇ ಸತ್ಯವೆಂಬಂತೆ ಪ್ರಚುರಪಡಿಸಿದವು. ಸ್ವತಃ ವೈದ್ಯರಾಗಿರುವ ಕೇಂದ್ರ ಆರೋಗ್ಯ ಮಂತ್ರಿ ಡಾ.ಹರ್ಷವರ್ಧನ್ ಆಗಸ್ಟ್ 6ರಂದು ಉಭಯ ಸದನಗಳಲ್ಲಿ 'ಸರ್ಕಾರ ಎಲ್ಲಾ ಕ್ರಮ ತೆಗೆದುಕೊಂಡಿದೆ' ಎಂಬಂಥ ಹೇಳಿಕೆಯನ್ನೂ ಕೊಟ್ಟರು.

ಆದರೆ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ಎಬೋಲಾ ಹರಡುವ ಸಾಧ್ಯತೆಯನ್ನು ಅಷ್ಟೊಂದು ಲಘುವಾಗಿ ತಳ್ಳಿಹಾಕಲಾಗದು. ಪಶ್ಚಿಮ ಆಫ್ರಿಕಾ ದೇಶಗಳಿಂದ ಭಾರತಕ್ಕೆ ನೇರವಾಗಿ ವಿಮಾನ ಸೌಲಭ್ಯ ಇಲ್ಲವೆಂದರೂ ಕೊಲ್ಲಿ ರಾಷ್ಟ್ರಗಳ ಮೂಲಕ ವಾಯುಸಂಚಾರ ಮೊದಲಿನಿಂದಲೂ ನಡೆದೇ ಇದೆ. ಉದಾಹರಣೆಗೆ ಪ್ರತಿವರ್ಷ ಸುಮಾರು 45,000 ಮಂದಿ ನೈಜೀರಿಯಾ ಪ್ರಜೆಗಳು ಭಾರತದ ವೀಸಾ ಪಡೆದುಕೊಳ್ಳುತ್ತಿದ್ದಾರೆ ಎಂದರೆ ವೈರಸ್ ಹರಡುವ ಸಂಭವನೀಯತೆಯನ್ನು ನಾವು ಊಹಿಸಬಹುದು.

ಸರ್ಕಾರ ಇಂಥಾ ಬೇಜವಾಬ್ದಾರಿ ಧೋರಣೆಯನ್ನು ಬದಿಗೊತ್ತಿ ಅಗತ್ಯ ಸಿಬ್ಬಂದಿಗಳನ್ನು ತರಬೇತುಗೊಳಿಸಿ, ಸೂಕ್ತ ಆಸ್ಪತ್ರೆ ಮತ್ತು ಪರಿಕರಗಳೊಂದಿಗೆ ಕೂಡಲೇ ಸಜ್ಜಾಗುವುದು ಒಳಿತು.

ಪುರುಷತ್ವ ಪರೀಕ್ಷೆ ತೋಡಿದ ಹಳ್ಳಕ್ಕೆ ತಾನೇ ಬಿದ್ದ!



ಕಪಟಿ ನಿತ್ಯಾನಂದ

ತೋಡಿದ ಹಳ್ಳಕ್ಕೆ ತಾನೇ ಬಿದ್ದಿದ್ದಾನೆ ಬಿಡದಿಯ ಕಪಟಿ ನಿತ್ಯಾನಂದ. ಯಾರದೋ ಉಡದಾರಕ್ಕೆ ಕೈಹಾಕಲು ಹೋಗಿ ತಾನೇ ಬೆತ್ತಲಾದಂತೆ ಆತನ ದುರ್ಗತಿ ಮತ್ತು ಪಜೀತಿ ಯಾವ ಪಾಪಿಗೂ ಬೇಡ!

ಅವತ್ತು ಸನ್ ಟಿವಿಯಲ್ಲಿ ನಟಿಯೊಬ್ಬಳ ಜೊತೆ ನಿತ್ಯಾನಂದನ ಬೆಡ್‌ರೂಂ ಲೀಲಾವಳಿ ಬಯಲಾದ ಬೆನ್ನಲ್ಲೇ ಒಂದಾನೊಂದು ಕಾಲದ ಪರಮಾಪ್ತೆ ಆರತಿ ರಾವ್ ತನ್ನ ಮೇಲೆ 'ಸ್ವಾಮೀಜಿ' ಎಸಗಿದ ಲೈಂಗಿಕ ದೌರ್ಜನ್ಯದ ಬಗ್ಗೆ ಬಿಡದಿ ಪೊಲೀಸರಿಗೆ ನೀಡಿದ ದೂರಿಗೆ ಪ್ರತಿಯಾಗಿ 'ತಾನು ಗಂಡಸೇ ಅಲ್ಲ, ತನಗೆ ಯಾವುದೇ ಲೈಂಗಿಕ ಕಾರ್ಯಾಚರಣೆ ಎಸಗುವ ಸಾಮರ್ಥ್ಯವೇ ಇಲ್ಲ...' ಎಂದು ಯಾವ ಕಳ್ಳ ನೆಪವೊಡ್ಡಿ ಬಚಾವಾಗಲು ಆತ 'ತಂತ್ರ' ಹೆಣೆದನೋ ಅದೇ ಈಗ ಉರುಳಾಗಿ ಪರಿಣಮಿಸಿದೆ.

ಕಾಮುಕ ಸ್ವಾಮಿಗಳು, ಹೆಣ್ಣುಬಾಕ ರಾಜಕಾರಣಿಗಳು, ಸೋಗಲಾಡಿ ದೊಡ್ಡ ಮನುಷ್ಯರೆಲ್ಲ ತಾವು ಸೆಕ್ಸ್ ಪಜೀತಿಗೆ ಬಿದ್ದಾಗಲೆಲ್ಲ ಇಂಥದ್ದೇ ನೆಪವೊಡ್ಡಿ ಬಚಾವಾಗಲು ಯತ್ನಿಸುತ್ತಾರೆ. ತೀರ ಇತ್ತೀಚೆಗೆ ಅಪ್ರಾಪ್ತ ಬಾಲೆಯ ಮೇಲೆ ದೌರ್ಜನ್ಯವೆಸಗಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ಖದೀಮ ಸ್ವಾಮಿ ಆಸಾರಾಮ್ ಬಾಪು ಕೂಡ ಇಂಥದ್ದೇ ತಂತ್ರ ಬಳಸಿದ್ದ. ತಾನು 72ರ ಹಣ್ಣು ಮುದುಕ, ತನಗೆ ಲೈಂಗಿಕ ಕ್ರಿಯೆಯ ಶಕ್ತಿಯೇ ಇಲ್ಲ, ಈ ವೃದ್ಧಾಪ್ಯದಲ್ಲಿ ರೇಪ್ ಮಾಡುವುದಿರಲಿ, ಹೆಣ್ಣನ್ನು ಕಣ್ಣೆತ್ತಿ ನೋಡುವುದಕ್ಕೂ ತನಗೆ ಆಸಕ್ತಿ ಇಲ್ಲ ಎಂದೇ ದೇವಮಾನವ ಆಸಾರಾಮ್ ಬಾಪು ಹಠಕ್ಕೆ ಬಿದ್ದಿದ್ದ.

ಆದರೆ ಕೋರ್ಟು ಆತನ ಲೈಂಗಿಕ ಪರೀಕ್ಷೆ ಅರ್ಥಾತ್ ಪುರುಷತ್ವ ಪರೀಕ್ಷೆಗೆ ಆದೇಶಿಸಿತಲ್ಲ; ಸತ್ಯ ಆಗ ಹೊರಬಿತ್ತು, 72 ವರ್ಷದ ಮುದುಕ ಆಸಾರಾಮ್ ಬಾಪು ಲೈಂಗಿಕವಾಗಿ ಇನ್ನೂ ಸಕ್ರಿಯನಾಗಿದ್ದ ಮತ್ತು ಕಾಮಕ್ರೀಡೆಗೆ ಸಮರ್ಥನಾಗಿದ್ದ!

ಪುರುಷತ್ವ ಪರೀಕ್ಷೆ

ಇದೇ ಪಜೀತಿಗೆ ಈಗ ಬಿಡದಿ ನಿತ್ಯಾನಂದ ಬಿದ್ದಿದ್ದಾನೆ. ಮಾಜಿ ಸಖಿ ಆರತಿ ರಾವ್ ಆತನ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿದಾಗ, ಅದಕ್ಕೂ ಮುನ್ನ ಸರ್ಕಾರ ಸ್ವಯಂಪ್ರೇರಿತವಾಗಿ ಹೂಡಿದ್ದ ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ 'ತಾನು ಗಂಡಸೇ ಅಲ್ಲ, ತನಗೆ ಲೈಂಗಿಕ ದೌರ್ಜನ್ಯವೆಸಗುವ ದೈಹಿಕ ಸಾಮರ್ಥ್ಯವೇ ಇಲ್ಲ' ಎಂದು ವಾದಿಸಿ ಬಿಟ್ಟರೆ ತಾನು ಸಲೀಸಾಗಿ ಬಚಾವಾಗಬಹುದೆಂಬುದು ಆತನ ಹುನ್ನಾರವಾಗಿತ್ತು. ಬಹುಶಃ ಸರ್ಕಾರ ಮತ್ತು ಆರತಿ ರಾವ್ ದಾಖಲಿಸಿದ್ದ ದೂರಿಗೆ ಸಾಂದರ್ಭಿಕ ಸಾಕ್ಷ್ಯಾಧಾರಗಳ ಮೇಲೆ ತಾನು ನಿರ್ದೋಷಿ ಎಂದು ವಾದಿಸ ಹೊರಟಿದ್ದರೆ ಇಡೀ ಪ್ರಕರಣ ಬೇರೆಯದೇ ತಿರುವು ಪಡೆಯುತ್ತಿತ್ತೇನೊ.

ಆದರೆ ನಿತ್ಯಾನಂದ ತಾನು ಗಂಡಸೇ ಅಲ್ಲ, ತನಗೆ 'ರತಿಶಕ್ತಿ'ಯೇ ಇಲ್ಲ ಎಂದು ವಾದಿಸಿದ್ದೇ ಆತನ ಎಲ್ಲಾ ಪಾಪಕರ್ಮಗಳ ನಿರ್ಧಾರಕ ಅಳತೆಗೋಲಾಗಿ ಪರಿಣಮಿಸಿತು. ಈಗ ಬಾಯಿಬಾಯಿ ಬಡಿದುಕೊಳ್ಳುತ್ತಿದ್ದಾನೆ. ತೋಡಿದ ಹಳ್ಳಕ್ಕೆ ತಾನೇ ಬಿದ್ದು ದಿನಕ್ಕೊಂದು ಪಜೀತಿ ಮಾಡಿಕೊಳ್ಳುತ್ತಿದ್ದಾನೆ. ರಾಮನಗರದ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಹಿಡಿದು ರಾಜ್ಯ ಹೈಕೋರ್ಟ್, ಸುಪ್ರೀಂಕೋರ್ಟ್‌ತನಕ ತನ್ನ ಪುರುಷತ್ವ ಪರೀಕ್ಷೆ ವಿರುದ್ಧ ಆತ ಮಾಡುತ್ತಿರುವ ಸರ್ಕಸ್ ಮತ್ತು ಪೇಚಾಟಗಳ ಪಜೀತಿಯದ್ದೇ ದೊಡ್ಡ ಕತೆ.

ಘಟನೆ ನಡೆದದ್ದು 2010ರಲ್ಲಿ. ಸನ್ ಟಿವಿಯಲ್ಲಿ ಬಯಲಾದ ನಿತ್ಯನ ಬೆಡ್‌ರೂಂ ಲೀಲೆ ಮತ್ತು ಆರತಿ ರಾವ್ ನೀಡಿದ ಅತ್ಯಾಚಾರದ ದೂರುಗಳೆರಡರ ವಿಚಾರಣೆ ಶುರುವಾಗಿದ್ದು ರಾಮನಗರದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ. ಮೊದಮೊದಲು ತಾನು ಆರತಿ ರಾವ್‌ರನ್ನು ನೋಡಿದ್ದೇ ಅಪರೂಪ ಎಂದ. ಆ ನಂತರ ಕಾರು ಚಾಲಕ ಲೆನಿನ್ ಕರುಪ್ಪನ್ ಮಾತು ಕೇಳಿ ಆಕೆ ಮಿಥ್ಯಾರೋಪ ಮಾಡುತ್ತಿದ್ದಾಳೆ ಎಂದ. ತದನಂತರ ಆಕೆಗೆ ಲೈಂಗಿಕ ಕಾಯಿಲೆ ಅಂಟಿತ್ತು ಅದರ ಚಿಕಿತ್ಸೆಗೆಂದು ನನ್ನ ಬಳಿ ಬಂದಿದ್ದಳು ಎಂದ. ಆಕೆಗೆ ಗುಪ್ತ ಲಿಂಗವ್ಯಾಧಿ ಇರೋದು ಗೊತ್ತಾಗಿಯೂ ನಾನೇಕೆ ಆಕೆಯನ್ನು ಅತ್ಯಾಚಾರ ಮಾಡ್ತೀನಿ ಎಂದು ದುರುಳ ಪ್ರಶ್ನೆಯಿಟ್ಟ. ಇಂಥ ಅಸಂಬದ್ಧ ಅಪದ್ಧಗಳೆಲ್ಲ ಒಂದೊಂದಾಗಿ ಆತನ ಕೊರಳಿಗೇ ಉರುಳಾಗುತ್ತಿದ್ದಂತೆ ನಿತ್ಯಾನಂದ ಹೊಸ ವರಸೆಯೊಂದನ್ನು ಶುರುವಿಟ್ಟ.

ಅದು ತಾನು ಗಂಡಸೇ ಅಲ್ಲ, ತನಗೆ ಲೈಂಗಿಕ ಸಾಮರ್ಥ್ಯವೇ ಇಲ್ಲ... ಎಂಬ ಕಳ್ಳ ನೆಪ!

ಕಳ್ಳಾಟ ಶುರು

ಅದಕ್ಕೆ ಅಮೆರಿಕದ ಯಾವುದೋ ಆಸ್ಪತ್ರೆಯ ಲೈಂಗಿಕ ವಿಜ್ಞಾನ ವಿಭಾಗದಲ್ಲಿ ತಾನು ಸೆಕ್ಸ್ ಟೆಸ್ಟ್‌ಗೆ ಒಳಪಟ್ಟಂತೆ, ಅಲ್ಲಿನ ವೈದ್ಯರು ತನ್ನನ್ನು ಪರೀಕ್ಷಿಸಿ ಲೈಂಗಿಕವಾಗಿ ಈತ ನಪುಂಸಕ ಎಂದು ಪ್ರಮಾಣಪತ್ರ ನೀಡಿದಂತೆ ದಾಖಲೆಯೊಂದನ್ನು ಸೃಷ್ಟಿಸಿದ್ದ ನಿತ್ಯಾನಂದ ಇದನ್ನು ಏನೆಲ್ಲಾ ತಲೆ ಓಡಿಸಿ ಸಂಪಾದಿಸಿದ್ದನೆಂದರೆ ಅಮೆರಿಕದ ಯಾವುದೋ ಆಸ್ಪತ್ರೆಯ ಮೇಲಾಗಲಿ ಅಲ್ಲಿನ ಡಾಕ್ಟರ್‌ಗಳ ಮೇಲಾಗಲಿ ಭಾರತದ ಕೋರ್ಟು, ಕಾನೂನು, ಸಂವಿಧಾನಗಳಿಗೆ ಯಾವ ಅಧಿಕಾರವೂ ಇರಲಿಲ್ಲ.



ಆಸಾರಾಂ ಭಾಪು



ಲೆನಿನ್ ಕುರುಪ್ಪನ್



ಆರತಿ ರಾವ್

ನಿತ್ಯಾನಂದ ನಪುಂಸಕ ಎಂದಮೇಲೆ ಆತ ಅತ್ಯಾಚಾರ ಎಸಗಿದ್ದಕ್ಕಾಗಲಿ, ಬೆಡ್‌ರೂಮಿನಲ್ಲಿ ನಟಿ ಜೊತೆ ನಡೆಸಿದ ಚಕ್ಕಂದಕ್ಕಾಗಲಿ ಅರ್ಥವೇ ಇರಲಿಲ್ಲ. ಕನಿಷ್ಠ ದಾಖಲೆಗಳ ಸತ್ಯಾಸತ್ಯತೆ ಪರಿಶೀಲಿಸುವುದಕ್ಕೂ ಅವಕಾಶವಿರಲಿಲ್ಲ. ಆಗ ತಲೆ ಎತ್ತಿದ್ದೇ ನಿತ್ಯಾನಂದನ ಪುರುಷತ್ವ ಪರೀಕ್ಷೆ!

ಮೂರ್ನಾಲ್ಕು ವರ್ಷಗಳ ಕಾಲ ತನ್ನ ಪುರುಷತ್ವ ಪರೀಕ್ಷೆಯನ್ನು ಕುಂಟು ನೆಪವೊಡ್ಡಿಕೊಂಡೇ ಮುಂದೂಡುತ್ತಾ ಬಂದ. ನಡುನಡುವೆ ಕೋರ್ಟಿಗೆ ಚಕ್ಕರ್ ಹಾಕುತ್ತಿದ್ದ. ಕೆಲವೊಮ್ಮೆ ಅನಾರೋಗ್ಯ ಇನ್ನೂ ಕೆಲವೊಮ್ಮೆ ದೇವತಾಕಾರ್ಯ, ಹಿಮಾಲಯದಲ್ಲಿ ಯೋಗ, ತಪಸ್ಸು, ಹೋಮ, ಹವನ; ಇಂಥದ್ದೇ ನೆಪವೊಡ್ಡಿ ನಾಲ್ಕು ವರ್ಷಗಳ ಕಾಲ ತನ್ನ ಪುರುಷತ್ವ ಪರೀಕ್ಷೆಯಿಂದ ಬಚಾವಾಗುತ್ತಲೇ ಇದ್ದ. ಇತ್ತ ರಾಮನಗರದ ಮ್ಯಾಜಿಸ್ಟ್ರೇಟ್ ಕೋರ್ಟು ನಿತ್ಯನ ಕಳ್ಳಾಟದ ವಿರುದ್ಧ ಅದೆಷ್ಟು ರೋಸತ್ತು ಹೋಗಿತ್ತೆಂದರೆ ಜುಲೈ 28ಕ್ಕೆ ಏನಾದರೂ ಪುರುಷತ್ವ ಪರೀಕ್ಷೆಗೆ ಹಾಜರಾಗದೆ ಹೋದರೆ ವಾರಂಟ್ ಜಾರಿಗೊಳಿಸುತ್ತೇನೆಂದೇ ಎಚ್ಚರಿಸಿತ್ತು.

ಇದಕ್ಕೆ ನಿತ್ಯಾನಂದ ಹೈಕೋರ್ಟಿನಿಂದ ತಡೆಯಾಜ್ಞೆ ತರುತ್ತೇನೆಂದೇ ಜುಲೈ 16ರಂದು ಹೈಕೋರ್ಟಿಗೆ ವಿಶೇಷ ಅರ್ಜಿಯೊಂದನ್ನು ಸಲ್ಲಿಸಿಬಿಟ್ಟ. ರಾಮನಗರದ ಕೋರ್ಟಿನ ವಿಚಾರಣೆಗೆ ತಡೆ ನೀಡಬೇಕೆಂದೇ ವಕೀಲ ಸಿ.ವಿ. ನಾಗೇಶ್ ಮೂಲಕ ಮೊರೆಯಿಟ್ಟ. ಆದರೆ ಹೈಕೋರ್ಟ್ ನಿತ್ಯಾ ಗ್ಯಾಂಗಿನ ಕಳ್ಳಾಟವನ್ನು ಸೂಕ್ಷ್ಮವಾಗೇ ಗಮನಿಸಿತ್ತು. 2012ರಿಂದಲೂ ನಡೆಯುತ್ತಿರುವ ವಿಚಾರಣೆಗೆ ನಿತ್ಯಾನಂದ ಆಗಲಿ ಆತನ ನಾಲ್ವರು ಸಹಚರರಾಗಲಿ ಯಾರೂ ಹಾಜರಾಗುತ್ತಿಲ್ಲ, ಇದೇ ಜುಲೈ 28ಕ್ಕೆ ರಾಮನಗರದ ಕೋರ್ಟಿನಲ್ಲಿ ಶುರುವಾಗುವ ವಿಚಾರಣೆಗೆ ನಿತ್ಯಾನಂದ ಸೇರಿದಂತೆ ಪ್ರತಿಯೊಬ್ಬರೂ ಹಾಜರಾಗಲೇ ಬೇಕು... ಎಂದು ನಿಷ್ಠುರವಾಗಿಯೇ ಆದೇಶಿಸಿತ್ತು. ಆ ಪ್ರಕಾರ ಜುಲೈ 28ಕ್ಕೆ ನಿತ್ಯಾನಂದ ರಾಮನಗರದ ಕೋರ್ಟಿಗೆ ಬಂದೇ ಬರುತ್ತಾನೆಂದೂ ಪುರುಷತ್ವ ಪರೀಕ್ಷೆಗೆಂದು ಆತನನ್ನು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರಿಗೆ ಒಪ್ಪಿಸಲಾಗು[...] ಎಂದೂ ಮಾಧ್ಯಮ ಪ್ರತಿನಿಧಿಗಳು ಮುಗಿಬಿದ್ದಿದ್ದರು.

ಹೈಕೋರ್ಟ್ ಛೀಮಾರಿ

ವಿಕಟವೆಂದರೆ ಅವತ್ತು ರಾಮನಗರ ಕೋರ್ಟ[...] ಬಂದಿದ್ದು ನಿತ್ಯಾನಂದನ ವಕೀಲರು ಮಾತ್ರ. ನಿತ್ಯಾನಂದನಾ[...] ಆತನ ಚೇಲಾಗಳಾಗಲಿ ಪತ್ತೆಯೇ ಇರಲಿಲ್ಲ. ಅ[...] ಕೋರ್ಟ್ ತಾಳ್ಮೆಯೂ ಮುಗಿದುಹೋಗಿತ್ತು. ಹಿಮಾಲ[...] ದಲ್ಲಿ ಸ್ವಾಮೀಜಿ ತಪಸ್ಸಿಗೆ ಕುಳಿತಿದ್ದಾರಾದ್ದರಿಂದ ಕೋರ್ಟ[...] ಹಾಜರಾಗಲು ಆಗುತ್ತಿಲ್ಲ ಎಂದು ವಕೀಲರು ಹೇಳಿದ್ದ[...] ಕೋರ್ಟು ತಾನೇ ಹೇಗೆ ಒಪ್ಪಲು ಸಾಧ್ಯ? ನಿರ್ದಾಕ್ಷಿಣ್ಯವಾ[...] ನಿತ್ಯಾನಂದನ ವಿರುದ್ಧ ಬಂಧನದ ವಾರಂಟು ಜಾರಿಗೊ[...] ಲಾಯ್ತು. ವಿಚಾರಣೆಯನ್ನು ಆಗಸ್ಟ್ 7ಕ್ಕೆ ಮುಂದೂ[...] ಲಾಯಿತಾದರೂ ಅರೆಸ್ಟ್ ವಾರಂಟ್ ಜಾರಿಯಾದ ಸ[...] ಮಾತ್ರ ಎಲ್ಲಾ ಪತ್ರಿಕೆಗಳಲ್ಲೂ ರಾರಾಜಿಸಿತ್ತು.

ಇಷ್ಟಾಗ್ಯೂ ತನ್ನ ಪುರುಷತ್ವದ ಮರ್ಮ [...] ಜಗಜ್ಜಾಹೀರುಗೊಳ್ಳುತ್ತೋ ಎಂದು ಭೀತಿಗೆ ಬಿದ್ದ ನಿತ್ಯಾನ[...] ಆಗಸ್ಟ್ 2ಕ್ಕೆ ಮತ್ತೆ ಹೈಕೋರ್ಟ್ ಮೊರೆ ಹೊಕ್ಕು ಜು[...] 6ಕ್ಕೆ ಹೈಕೋರ್ಟು ನೀಡಿದ್ದ ಆದೇಶದಲ್ಲಿ ಖು[...] ಹಾಜರಾತಿಗೆ ಒತ್ತಾಯಿಸಿರಲಿಲ್ಲ. ಹೀಗಾಗಿ ಜುಲೈ 2[...] ಸ್ವಾಮೀಜಿ ರಾಮನಗರದ ಕೋರ್ಟಿಗೆ ಬರಲಿಲ್ಲ. ಆದ್ದರಿ[...] ರಾಮನಗರ ಕೋರ್ಟು ಜಾರಿಗೊಳಿಸಿದ ಅರೆಸ್ಟ್ ವಾರಂ[...] ತಡೆ ನೀಡಬೇಕು ಮತ್ತು ಈಗಾಗಲೇ ಪುರುಷತ್ವ ಪರೀಕ್ಷೆ[...] ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ಆಗಸ್ಟ್ [...] ನಿಗದಿಯಾದ ಪುರುಷತ್ವ ಪರೀಕ್ಷೆಗೂ ತಡೆ ನೀಡಬೇಕೆಂ[...] ವಕೀಲರ ಮೂಲಕ ಒತ್ತಾಯಿಸಿದ್ದ.

ಹೈಕೋರ್ಟು ನಿತ್ಯಾನಂದನ ಕಳ್ಳಾಟದ ವಿರುದ್ಧ ಅದೆ[...] ನಿಷ್ಠುರವಾಗಿತ್ತೆಂದರೆ; ಅರೆಸ್ಟ್ ವಾರಂಟ್‌ಗೆ ಮಾತ್ರ [...] ತಡೆಕೊಟ್ಟು ಯಾವುದೇ ಕಾರಣಕ್ಕೂ ಆಗಸ್ಟ್ 1[...] ರಾಮನಗರದ ಕೋರ್ಟಿನ ವಿಚಾರಣೆ ತಪ್ಪಿಸಿಕೊಳ್ಳುವಂ[...]

ರಂಜಿತಾ ಬಂದಳು ದಾರಿ ಬಿಡಿ



ಈ ಮಧ್ಯೆ ತಾನೆಲ್ಲಿ ವಕ್ಕರಿಸಲಿ ಎಂಬಂತೆ ತಮಿಳು ನಟಿ ರಂಜಿತಾ ಸುಪ್ರೀಂಕೋರ್ಟಿಗೆ ಅರ್ಜಿಯೊಂದನ್ನು ಸಲ್ಲಿಸಿದ್ದಾಳೆ. ಆ ಪ್ರಕಾರ ನಿತ್ಯಾನಂದನ ಪುರುಷತ್ವ ಪರೀಕ್ಷೆಗೆ ತನ್ನನ್ನೂ ಭಾಗಿದಾರಳನ್ನಾಗಿ ಕೋರ್ಟು ಪರಿಗಣಿಸಬೇಕು ಎಂಬುದು ರಂಜಿತಾಳ ಒತ್ತಾಯ.

ಇದರರ್ಥ ನಿತ್ಯಾನಂದ ಗಂಡಸಾ ನಪುಂಸಕನಾ ಎಂಬುದಕ್ಕೆ ತನ್ನ ಅಭಿಪ್ರಾಯವನ್ನು ಕೇಳಿಯೇ ನಿರ್ಧಾರ ಕೈಗೊಳ್ಳಬೇಕೆಂಬುದು ಆಕೆಯ ಒತ್ತಾಯ. ಇದು ಎಷ್ಟೊಂದು ಹಾಸ್ಯಾಸ್ಪದವೆಂದರೆ ನಿತ್ಯಾನಂದನಿಗೆ ಲೈಂಗಿಕ ಶಕ್ತಿ ಅರ್ಥಾತ್ ರತಿ ಶಕ್ತಿ ಇದೆಯಾ ಇಲ್ಲವಾ ಎಂಬುದನ್ನು ರಂಜಿತಾ ಪ್ರಮಾಣೀಕರಿಸುತ್ತಾಳಂತೆ!

ಸುಪ್ರೀಂಕೋರ್ಟ್ ತನ್ನ ವಿಚಾರಣೆಯಲ್ಲಿ ಇದನ್ನು ಮಾರ್ಮಿಕವಾಗೇ ಲೆಕ್ಕ ಹಾಕಿ ರಂಜಿತಾಳ ಅರ್ಜಿ ವಜಾ ಮಾಡುತ್ತದೆ. ಅಂದರೆ ಸುಪ್ರೀಂಕೋರ್ಟ್ ಏನಿದ್ದರೂ ನಿತ್ಯಾನಂದ ಸಲ್ಲಿಸಿದ ಹೈಕೋರ್ಟ್ ಮೇಲಿನ ಆಕ್ಷೇಪಣೆಗಷ್ಟೇ ಹೊರತು ಆತನ ಪುರುಷತ್ವ ಪರೀಕ್ಷೆ ಬಗ್ಗೆ ಏನಾದರೂ ಸಾಕ್ಷ್ಯಾಧಾರಗಳಿದ್ದರೆ ಅದನ್ನು ರಾಮನಗರದ ಕೋರ್ಟಿನಲ್ಲೇ ಸಲ್ಲಿಸಬೇಕೆಂಬುದು ಸುಪ್ರೀಂ ಆದೇಶವಾಗಿತ್ತು.

ಮೇಲುನೋಟಕ್ಕಿದು ತಮಾಷೆಯಾಗೇ ಕಾಣಬಹುದು; ಆದರೆ ಮಾರ್ಮಿಕವಾಗಿ ರಂಜಿತಾ ನಿತ್ಯಾನಂದನ ಪುರುಷತ್ವದ ಶೀರ್ಪುದಾರಳೆ? ನಿತ್ಯಾನಂದ ಪುರುಷನಾ ನಪುಂಸಕನಾ ಆತನಿಗೆ ಲೈಂಗಿಕ ತಾಕತ್ತಿದೆಯಾ ಎಂಬ ಬಗ್ಗೆ ತಮಿಳು ನಟಿ ರಂಜಿತಾ ಅಷ್ಟೊಂದು ನಿಖರವಾಗಿ ಹೇಗೆ ಮತ್ತು ಏಕೆ ಸಾಕ್ಷಿಯಾಗಬಲ್ಲಳು? ಕುಂಬಳಕಾಯಿ ಕಳ್ಳಿ ಎಂದರೆ ಹೆಗಲು ಮುಟ್ಟಿಕೊಂಡಳಂತೆ...!

ಪುರುಷತ್ವ ಪರೀಕ್ಷೆ ಎಂದರೆ...!

ನಿತ್ಯಾನಂದ ತನ್ನ ಪುರುಷತ್ವ ಪರೀಕ್ಷೆಗೆ ಈ ಪ[...] ಭಯ ಬೀಳುತ್ತಾನೆಂದರೆ ಅದರಲ್ಲಿ ಬೇರೆಯದೇ ಹಕೀಕ[...] ಬೇಕಲ್ಲವೆ?

ಬೆಂಗಳೂರಿನ ಮೆಡಿವೇವ್ ಗರ್ಭಧಾರ[...] ಸಂಶೋಧನಾ ಆಸ್ಪತ್ರೆಯ ನಿರ್ದೇಶಕ ಡಾ. ಶರತ್‌ಕುಮಾ[...] ತೆರೆದಿಡುವ ವಿವರಣೆಯೇ ನಿತ್ಯಾನಂದನ ಭೀತಿಗೆ ಕಾ[...] ಕಲ್ಪಿಸುತ್ತದೆ. ಯಾರೇ ವ್ಯಕ್ತಿಯ ಪುರುಷತ್ವ ಪರೀಕ್ಷೆ ಎಂಬು[...] ನಮ್ಮಲ್ಲಿ ರಕ್ತ ಪರೀಕ್ಷೆ, ರೋಗ ಪರೀಕ್ಷೆಗಿಂತಲೂ ತಿ[...] ಭಿನ್ನ ಮತ್ತು ಮುಜುಗರಕ್ಕೀಡು ಮಾಡುವಂಥದ್ದು. ಮೂ[...] ಹಂತಗಳಲ್ಲಿ ನಡೆಯುವ ಪುರುಷತ್ವ ಪರೀಕ್ಷೆ ಒಂದೇ ದಿ[...] ಮುಗಿಯುವಂಥದ್ದಲ್ಲ.

ಮೊದಲು ಆರೋಪಿಯನ್ನು ಪೂರ್ತಿ ಬೆತ್ತಲುಗೊ[...] ಲಾಗುತ್ತದೆ. ಅದು ದೈಹಿಕ ಪರೀಕ್ಷೆ ಅಂದರೆ ಹೊ[...] ಜನನೇಂದ್ರಿಯಗಳು ಒಬ್ಬ ವಯಸ್ಕನಿಗಿರುವ ಪ್ರಮಾಣದ[...] ಇದೆಯಾ ಎಂದು ಪರೀಕ್ಷಿಸಲಾಗುತ್ತದೆ. ಜನನೇಂದ್ರಿಯಗ[...] ಅದು ಸರಿಯಾಗಿದೆ ಎಂದು ಪ್ರಮಾಣೀಕರಿಸಿದ್ದ ನಂತರ[...] ಎರಡನೇ ಹಂತದ ಅಂದರೆ Vasoditaler ಅರ್ಥಾ[...] ಶಿಶ್ನ ನಿಮಿರುವಿಕೆಯ ಪರೀಕ್ಷೆ!

ಇಲ್ಲಿ ವೈದ್ಯರ ಮತ್ತೊಂದು ತಂಡ ಆರೋಪಿಯ[...] ನಗ್ನಗೊಳಿಸಿ ಆತನ ಶಿಶ್ನಕ್ಕೆ PGE-1 ಎಂಬ ಇಂಜೆಕ್ಷ[...] ಚುಚ್ಚುತ್ತದೆ. ಅದು ಶಿಶ್ನದ ರಕ್ತನಾಳಗಳನ್ನು ಹಿಗ್ಗಿಸು[...] ಇಂಜೆಕ್ಷನ್. ಇಂಥದೊಂದು ಇಂಜೆಕ್ಷನ್ ನೀಡಿದ ಕೂಡ[...] ಶಿಶ್ನ ನಿಮಿರುತ್ತದೆಯೆಂದರೆ ಆತ ಲೈಂಗಿಕವಾಗಿ ಎರಡ[...] ಹಂತದ ಪರೀಕ್ಷೆಯಲ್ಲಿ ಪಾಸಾದ ಹಾಗೆಯೆ. ಮುಂದಿನ[...] ಅಂದರೆ ಮೂರನೇ ಹಂತದ್ದು ಇನ್ನೂ ಸೂಕ್ಷ್ಮವಾದ ಪರೀ[...] ಇದು ಹಾರ್ಮೋನುಗಳು ಅರ್ಥಾತ್ ಒಳಜನನೇಂದ್ರಿಯ[...] ಪರೀಕ್ಷೆ. ಆರೋಪಿಯ ಗುದದ್ವಾರದೊಳಕ್ಕೆ ಸ್ಕ್ಯಾನಿಂ[...] ಯಂತ್ರವೊಂದನ್ನು ತುರುಕಿ ಶುಕ್ಲ ಗ್ರಂಥಿ (Prostat[...] ವೀರ್ಯಗ್ರಂಥಿ ಅಸ್ತಿತ್ವದಲ್ಲಿದೆಯಾ ಎಂಬುದನ್ನು ಮೊದ[...] ಖಚಿತಪಡಿಸಿಕೊಳ್ಳುತ್ತಾರೆ. ಆ ನಂತರ ಒಬ್ಬ ಗಂಡಸ[...] ಇರಬೇಕಾದಷ್ಟು ಪ್ರಮಾಣದ ಹಾರ್ಮೋನುಗಳು ಇದೆಯ[...] ಎಂಬುದನ್ನು ಪರೀಕ್ಷಿಸಲಾಗುತ್ತದೆ. ಇದಾದನಂತ[...] ವರ್ಣತಂತುಗಳು ಅಂದರೆ Chromozomes [...] ಪರೀಕ್ಷೆಯಾಗಬೇಕು. ಆ ನಂತರದ್ದು ಜೀನ್ಸ್ ಅಂದ[...] ವಂಶವಾಹಿಗಳ ಪರೀಕ್ಷೆ. ಇದು ವೀರ್ಯ ಪರೀಕ್ಷೆಯ ಮೂ[...] ಬಯಲಾಗುತ್ತದೆ. ಫಲವತ್ತತೆ, ಫಲವಂತಿಕೆ ಮತ್ತು ಪುರುಷ[...] ಎಲ್ಲವನ್ನೂ ಬಿಡಿಬಿಡಿಯಾಗಿ ಸೂಕ್ಷ್ಮವಾಗಿ ವೈದ್ಯರುಗ[...] ಪರೀಕ್ಷಿಸಿದ ನಂತರವೇ ನಿತ್ಯಾನಂದನ ಅಸಲೀ ಮ[...] ಬಯಲಾಗುತ್ತದೆ. ವಿದೇಶಿ ಮೆಡಿಕಲ್ ಸರ್ಟಿಫಿಕೇಟ[...] ಮೂಲಕ ಕೋರ್ಟನ್ನು ವಂಚಿಸಬಹುದು. ಆದ[...] ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರ ಕಣ್ಣಿಗೆ ಹೇಗೆ ತಾ[...] ಮಣ್ಣೆರಚಲು ಸಾಧ್ಯ?

ಕ್ಷಿಪ್ತಪ್ತ ಮಾಡಿದ್ದಷ್ಟೇ ಅಲ್ಲ, ಆಗಸ್ಟ್ 6ರಂದು ಷತ್ವ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಹಾಜರಾಗಲೇ . ಎಂದು ನೆತ್ತಿಗೆ ಬಡಿದಂತೆ ಆದೇಶ ಹೊರಡಿಸಿತ್ತು. ಪುರುಷತ್ವ ಪರೀಕ್ಷೆಯಿಂದ ಬಚಾವಾಗುವ ..ದನ ಹುನ್ನಾರದ ಮಟ್ಟಿಗೆ ಹೈಕೋರ್ಟ್ ಮತ್ತು ..ನಗರದ ಕೋರ್ಟುಗಳ ಬಾಗಿಲು ಶಾಶ್ವತವಾಗಿ ..ದಂತಾಗಿತ್ತು.

ಸುಪ್ರೀಂ ತಪರಾಕಿ

..ಾಗಂತ ನಿತ್ಯಾನಂದ ಬಿಡಬೇಕಲ್ಲ. ಸುಪ್ರೀಂಕೋರ್ಟ್ ಮೋಹನ್ ಪರಾಸರನ್‌ರನ್ನು ಹಿಡಿದದ್ದೇ ಆಗಸ್ಟ್ ..ು ವಿಶೇಷ ಮೇಲ್ಮನವಿಯೊಂದನ್ನು ಸಲ್ಲಿಸಿದ. ..ರ್ಟ್ ತನಗೆ ವಾದ ಮಂಡಿಸಲು ಅವಕಾಶವನ್ನೇ ..್ಲವಾದ್ದರಿಂದ ಇದು ಸಹಜ ನ್ಯಾಯ ಪರಿಪಾಲನೆ ಉಲ್ಲಂಘನೆಯಾಗಿದೆ. ಸಾಲದ್ದಕ್ಕೆ ಅರ್ಜಿದಾರರ ..ಿಗೆ ಅನಾರೋಗ್ಯವಿದ್ದದ್ದನ್ನು ಕೋರ್ಟು ಪರಿಗಣಿಸಿಲ್ಲ. ..ನಗರದ ಕೋರ್ಟ್‌ಗೆ ಹಾಜರಾಗಲು ಸ್ವಾಮೀಜಿ ..ದರೆ ಪುರುಷತ್ವ ಪರೀಕ್ಷೆಗಷ್ಟೇ ನಮ್ಮ ತಕರಾರು ..ದು. ನಿತ್ಯನ ವಕೀಲರ ವಾದವಾಗಿತ್ತು. ಇಡೀ ..ಣವನ್ನು ಸೂಕ್ಷ್ಮವಾಗಿ ಗಮನಿಸಿದ ಸುಪ್ರೀಂಕೋರ್ಟ್ ..ಮೂರ್ತಿಗಳಾದ ರಂಜನ್ ಪ್ರಕಾಶ್ ದೇಸಾಯಿ ಮತ್ತು ..ರಮಣರ ಪೀಠ ನೇರವಾಗಿ ಕರ್ನಾಟಕ ಸರ್ಕಾರಕ್ಕೇ ..ಸು ಜಾರಿ ಮಾಡಿತ್ತು. ಇಷ್ಟೇ ಅಲ್ಲದೆ ವಿಚಾರಣೆಗೆ ..ಪದೇ ಅಸಹಕಾರ ತೋರುತ್ತಿರುವ ನಿತ್ಯಾನಂದನನ್ನು ಪದಗಳಿಂದಲೇ ತರಾಟೆಗೆ ತೆಗೆದುಕೊಂಡಿತ್ತು. ..ದೇ ಕಾರಣಕ್ಕೂ ವಿಚಾರಣೆಗೆ ತಡೆಯೊಡ್ಡದೆ ಪ್ರತಿ ..ದನ್ನೂ ಸಮರ್ಪಕ ರೀತಿಯಲ್ಲೇ ಅರ್ಜಿದಾರರು ..ಸಬೇಕು ಎಂದು ಸುಪ್ರೀಂಕೋರ್ಟ್ ಎಚ್ಚರಿಕೆಯನ್ನೂ ..ತ್ತು.

..ದರೆ ಸುಪ್ರೀಂಕೋರ್ಟ್ ಇಲ್ಲಿ ನಿತ್ಯಾನಂದನಿಗೆ ..ಿಕ ಅನುಕೂಲವೊಂದನ್ನು ಕಲ್ಪಿಸಿತ್ತು. ಅದು ಪುರುಷತ್ವ ..್ಷೆಗೆ ನೀಡಿದ ತಾತ್ಕಾಲಿಕ ತಡೆ. ಅಂದರೆ ಯಾವುದೇ ..ಕ್ಕೂ ಆಗಸ್ಟ್ 18ರಂದು ರಾಮನಗರದ ಕೋರ್ಟ್‌ಗೆ ..ಕೊಳ್ಳುವಂತಿಲ್ಲ; ಶತಾಯಗತಾಯ ಹಾಜರಾಗಲೇಬೇಕು. ಪುರುಷತ್ವ ಪರೀಕ್ಷೆಯ ವಿಷಯವನ್ನು ಆಗಸ್ಟ್ ..ಹೊತ್ತಿಗೆ ಕರ್ನಾಟಕ ಸರ್ಕಾರದ ವರದಿ ನೋಡಿದ ..ವೇ ನಿರ್ಧರಿಸಿದರಾಯ್ತು. ಆ ಹೊತ್ತಿಗೆ ಕರ್ನಾಟಕ ..ರ ಈ ಬಗ್ಗೆ ತನ್ನ ಸ್ಪಷ್ಟ ನಿಲುವನ್ನು ಮಂಡಿಸಲೇಬೇಕು... ಆಗಸ್ಟ್ 5ರಂದು ಸುಪ್ರೀಂಕೋರ್ಟ್ ನೀಡಿದ ..ತರ ಆದೇಶವಾಗಿತ್ತು.

ನಪುಂಸಕ ನಿಜವಾಗಿದ್ದರೆ...?

..ಚಿತ್ರವೆಂದರೆ ಆಗಸ್ಟ್ 12ಕ್ಕೆ ರಾಜ್ಯ ಸರ್ಕಾರವೇ ..ಮಾರಿತ್ತು. ಒಂದು ವಾರದ ಕಾಲಾವಕಾಶ ಕೊಟ್ಟರೂ ಸರ್ಕಾರ ಸುಪ್ರೀಂಕೋರ್ಟಿಗೆ ತನ್ನ ಪ್ರಮಾಣಪತ್ರ ..ದೇ ಇರಲು ಕೊಟ್ಟ ಕಾರಣವೇನು ಗೊತ್ತೆ?

..ಯಾರೋ ಅಧಿಕಾರಿ ಅದಕ್ಕೆ ಸಹಿ ಮಾಡಬೇಕಿತ್ತಂತೆ. ..ು ಸಹಿ ಮಾಡಲು ಲಭ್ಯವಿಲ್ಲದ ಕಾರಣ ಇನ್ನೊಂದು ..ದ ಕಾಲಾವಕಾಶ ಬೇಕಂತೆ. ಇದು ಸರ್ಕಾರ ..ಂಕೋರ್ಟಿಗೆ ಸಲ್ಲಿಸಿದ ನೆಪ. ಇದನ್ನು ಗಂಭೀರವಾಗೇ ..ಣಿಸಿದ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರವನ್ನು ..ವಾಗಿಯೇ ತರಾಟೆಗೆ ತೆಗೆದುಕೊಂಡಿತ್ತು. ಆಗಸ್ಟ್ 20ರ ..ತ್ತಿಗೆ ಕರ್ನಾಟಕ ಸರ್ಕಾರ ತನ್ನ ಪ್ರಮಾಣ ಪತ್ರ ..ಲೇಬೇಕೆಂಬ ಷರತ್ತನ್ನೂ ವಿಧಿಸಿದೆ. ಅಂದರೆ ಆಗಸ್ಟ್ .. ಸುಪ್ರೀಂಕೋರ್ಟು ನಿತ್ಯಾನಂದನ ಪುರುಷತ್ವ ಪರೀಕ್ಷೆಯ ..ಂತೆ ತನ್ನ ಸ್ಪಷ್ಟ ಆದೇಶ ನೀಡಲಿದೆ. ಹೆಚ್ಚೆಂದರೆ ..ಂದು ವಾರ ತಳ್ಳಬಹುದಷ್ಟೆ. ಆದರೆ ಆಗಸ್ಟ್ 18ರ ..ನಗರದ ಕೋರ್ಟ್ ವಿಚಾರಣೆಯನ್ನು ನಿತ್ಯಾನಂದ ..ುವಂತಿಲ್ಲ. ಜೈಲು ಮತ್ತು ಪುರುಷತ್ವ ಪಜೀತಿ ಎರಡೂ ..ಟ್ಟಿಗೆ ನಿತ್ಯಾನಂದನ ಕೊರಳಿಗೆ ಉರುಳಾಗುತ್ತಿವೆ.

..ಮೊದಲು ರಾಮನಗರದ ಕೋರ್ಟು, ಅದರ ವಿರುದ್ಧ ..ೋರ್ಟು, ಹೈಕೋರ್ಟು ಛೀಮಾರಿ ಎಂದು ಮತ್ತೆ ..ನಗರದ ಕೋರ್ಟು, ಅದರಿಂದ ಬಚಾವಾಗಲು ಮತ್ತೆ ..ೋರ್ಟು. ಹೈಕೋರ್ಟು ಸೊಪ್ಪು ಹಾಕಲಿಲ್ಲ ಎಂದು ..ಂಕೋರ್ಟು. ಅಲ್ಲೂ ಮುಖಭಂಗ ಇಲ್ಲೂ ಅಭಿಮಾನ .. ಹೀಗೆ ಪುರುಷತ್ವ ಪರೀಕ್ಷೆಯೆಂಬುದು ನಿತ್ಯಾನಂದನ ..ಗೆ ಬೆನ್ನು ಬಿಡದ ಬೇತಾಳದಂತೆ ಬೆನ್ನತ್ತಿದೆ. ಏನೇ .. ಹೊಡೆದರೂ ಅದರಿಂದ ಬಚಾವಾಗುವುದು ಕಷ್ಟ. .. ಪ್ರಶ್ನೆಯೆಂದರೆ- ಸ್ವತಃ ನಿತ್ಯಾನಂದನೇ ಹೇಳಿಕೊಂಡಂತೆ ..' ಗಂಡಸಲ್ಲ, ನಪುಂಸಕ ಎಂಬುದೇ ನಿಜವಾಗಿದ್ದರೆ ..ಷತ್ವದ ಪರೀಕ್ಷೆಗೆ ಹಿಂದೇಟೇಕೆ? ಹಾಗೊಮ್ಮೆ ..ಕದ ಯಾವುದೋ ಆಸ್ಪತ್ರೆ ಈತನಿಗೆ ಲೈಂಗಿಕ ..ಷ್ಯವಿಲ್ಲ ಎಂದು ನೀಡಿದ ಪ್ರಮಾಣ ಪತ್ರ ಕೂಡ .. ಅಲ್ಲಿ ಎಂದಮೇಲೆ ಇಲ್ಲಿನ ಆಸ್ಪತ್ರೆಗಳಲ್ಲಿ ಮತ್ತೊಮ್ಮೆ ..ಷತ್ವದ ಪರೀಕ್ಷೆಯಾಗಲು ಏನು ಕಷ್ಟ? ಪುರುಷತ್ವ ..ೆ ಎಂದರೇನೇ ಕನಸಲ್ಲೂ ಬೆಚ್ಚಿ ಬೀಳುವಂಥ ಭೀತಿಗೆ ..ತ್ಯಾನಂದ ಯಾವ ಮರ್ಮ ಅಡಗಿರಬಹುದೋ!

■ ಡಾ. ಸೋಮನಾಥ್

ಕೊಪ್ಪಳ: ದಲಿತ ಮಹಿಳೆಯ ಹತ್ಯೆ ಮತ್ತು ಪೊಲೀಸರ ಪೈಶಾಚಿಕತೆ!



ಸುತ್ತಲಿನ ಗ್ರಾಮಗಳಂತೆಯೇ ಹೊಸಗುಡ್ಡ ಕೂಡಾ ಕನಕಗಿರಿ ಹೋಬಳಿಯಲ್ಲಿ ಬರುವ 80 ಮನೆಗಳಿರುವ ಒಂದು ಕುಗ್ರಾಮ. ನಾಲ್ಕು ದಲಿತ ಕುಟುಂಬಗಳನ್ನು ಬಿಟ್ಟರೆ ಮಿಕ್ಕವರು ನಾಯಕ ಸಮುದಾಯಕ್ಕೆ ಸೇರಿದವರು. ಈ ಗ್ರಾಮದ 42 ವರ್ಷದ ಹನುಮಮ್ಮ ಎಂಬ ದಲಿತ ಹೆಂಗಸು ಕಳೆದ ತಿಂಗಳು ಅತ್ಯಂತ ಭೀಕರವಾಗಿ ಹತ್ಯೆಗೊಳಗಾಗಿದ್ದಾಳೆ. ಮನೆಯಿಂದ ಹೊರಹೋದ ಆಕೆ ನಾಲ್ಕು ದಿನಗಳ ನಂತರ ಸಿಕ್ಕಿದ್ದು ಹೆಣವಾಗಿ. ಅದೆಂತಹ ವಿಕೃತ ಕೊಲೆಯೆಂದರೆ ಹೆಣದ ಕಾಲುಗಳನ್ನು ಅಡ್ಡಡ್ಡ ಸೀಳಲಾಗಿತ್ತು, ಕಲ್ಲುಗಳಿಂದ ಜಜ್ಜಲಾಗಿತ್ತು, ಮೈಮೇಲೆ ಬಟ್ಟೆಗಳೇ ಇರಲಿಲ್ಲ. ಬಕ್ಕಬೋರಲು ಬಿದ್ದಿದ್ದ ಹೆಣವನ್ನು ನೋಡಿದ ಎಂತವರಿಗೇ ಆದರೂ ಕೊಲೆಗೂ ಮುನ್ನ ಅಲ್ಲೊಂದು ಅತ್ಯಾಚಾರ ನಡೆದಿರುವ ವಾಸನೆ ಬಡಿಯುವಂತಿತ್ತು. ಇದೊಂದು ವ್ಯವಸ್ಥಿತ ಕೊಲೆ. ಕೊಲೆ ಹೇಗಾದಳು? ಏಕೆ ಆದಳು? ಎಂಬಿತ್ಯಾದಿ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಹೊರಟರೆ ಅನೈತಿಕ ಸಂಬಂಧವೆಂಬ ಸಿದ್ಧ ಉತ್ತರ ಊರವರ ಬಾಯಿಂದ ಕೇಳಿಬರುತ್ತದೆ. ಕೊಲೆ ಹಿಂದಿರುವುದು ಅನೈತಿಕ ಸಂಬಂಧದ ಕಾರಣವೇ ಇರಬಹುದಾದರೂ ಅಂತಹ ಅಪರಾಧಕ್ಕೆ ಪ್ರಚೋದನೆ ದೊರೆತದ್ದು ದಲಿತ ಸಮುದಾಯದ ಅಸಹಾಯಕತೆಯಿಂದ ಎಂಬುದಂತೂ ಸತ್ಯ!

ಹತ್ಯೆಯಾದ ಹನುಮಮ್ಮಳನ್ನು 20 ವರ್ಷಗಳ ಹಿಂದೆ ಸಿಂಧನೂರಿನ ಹುಲಿಗುಡ್ಡದ ಮರಿಯಪ್ಪ ಎಂಬುವನಿಗೆ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ಐದು ವರ್ಷಕ್ಕೇ ಆತ ತೀರಿಕೊಂಡಿದ್ದ. ಅಷ್ಟರಲ್ಲಾಗಲೆ ಹನುಮಕ್ಕನಿಗೆ ದೇವೇಂದ್ರಪ್ಪ ಮತ್ತು ನಿರುಪಾದಿಯೆಂಬ ಗಂಡು ಮಕ್ಕಳು ಹುಟ್ಟಿದ್ದರು. ಅವರನ್ನು ಸಾಕುವ ಹೊಣೆಹೊತ್ತ ಆಕೆ ಹೊಸಗುಡ್ಡಕ್ಕೆ ಬಂದು ನೆಲೆಸಿದ್ದಳು. ಕೂಲಿ ಕೆಲಸ ಮಾಡಿಕೊಂಡು ತಂಗಿ, ತಾಯಿ ಮತ್ತು ಮಕ್ಕಳ ಜವಾಬ್ದಾರಿಯನ್ನೂ ಹೊತ್ತಿದ್ದ ಗಟ್ಟಿಗಿತ್ತಿ ಆಕೆ. ಅಂತಹ ಹನುಮಮ್ಮ ಕಳೆದ ನಾಲ್ಕು ವರ್ಷಗಳಿಂದ ಅದೇ ಗ್ರಾಮದ ನಾಯಕ ಸಮುದಾಯದ ರಾಮಣ್ಣ ಎಂಬುವನೊಂದಿಗೆ ಅಕ್ರಮ ಸಂಬಂಧ ಬೆಳೆಸಿಕೊಂಡಿದ್ದಳು. ಇದು ಆ ಹಳ್ಳಿಯ ಮಟ್ಟಿಕ್ಕೆ ಬಹಿರಂಗ ಸತ್ಯ. ಜಾತಿಯ ಕಾರಣಕ್ಕೋ, ಸಾಮಾಜಿಕ ಒತ್ತಡಕ್ಕೋ ಸಿಲುಕಿದ್ದ ಆ ದಲಿತ ಕುಟುಂಬ ಬಲಾಢ್ಯರನ್ನು ಧಿಕ್ಕರಿಸಲಾದ ಅಸಹಾಯಕತೆಯಲ್ಲಿ ಅನೈತಿಕ ಚೌಕಟ್ಟಿನಿಂದ ಹೊರಬರಲಾರದೆ ತೊಳಲಾಡುತ್ತಲೇ ಇತ್ತು.


ಹನುಮಮ್ಮ ಹತ್ಯೆಯಾಗುವುದಕ್ಕಿಂತ ನಾಲ್ಕು ದಿನಗಳ ಮುಂಚೆ ಆಕೆಯ ಮನೆಗೇ ಬಂದಿದ್ದ ರಾಮಣ್ಣನಿಗೆ 'ಈ ರೀತಿ ಮನೆಗೆ ಬರುವುದು ಸರಿಯಲ್ಲ' ಎಂಬ ಒಂದು ಸಣ್ಣ ಪ್ರತಿರೋಧವನ್ನು ಕುಟುಂಬವರ್ಗದವರು ಒಡ್ಡಿದ್ದರು. ಇದು ರಾಮಣ್ಣನ ಕೋಪ ನೆತ್ತಿಗೇರುವಂತೆ ಮಾಡಿತ್ತು. ಅದೇ ಆಕ್ರೋಶದಲ್ಲಿ 'ಈ ಊರಿನಲ್ಲಿ ಹೇಗೆ ಬದುಕುತ್ತೀರೋ ಒಂದು ಕೈ ನೋಡಿಕೊಳ್ಳುತ್ತೇನೆ' ಎಂದು ಬೆದರಿಸಿದ್ದ. ಅದಾದ ನಾಲ್ಕೇ ದಿನಕ್ಕೆ ಹನುಮಮ್ಮ ಹೆಣವಾದದ್ದು ಸ್ಪಷ್ಟ ಅನುಮಾನವನ್ನು ಹುಟ್ಟುಹಾಕುತ್ತದೆ. ಇಲ್ಲಿಯವರೆಗೆ ತನಗಿಷ್ಟ ಬಂದಂತೆ ಬಳಕೆಯಾಗುತ್ತಿದ್ದ ಹನುಮಮ್ಮ ಈಗ ಕೈತಪ್ಪಿ ಹೋಗುತ್ತಾಳೆಂದು ಬೇಗುದಿಗೆ ಬಿದ್ದ ರಾಮಣ್ಣ ಒಂದು ಯಕಶ್ಚಿತ್ ದಲಿತ ಕುಟುಂಬ ತಾನೆ, ತನ್ನ ಜಾತಿ ಬಲದ ಮುಂದೆ ಈ ಮಹಿಳೆ ಯಾವ ಲೆಕ್ಕವೆಂದು ಲೆಕ್ಕಾಚಾರವನ್ನೂ ಹಾಕಿ ಆಕೆಯನ್ನು ಹತ್ಯೆಗೈದಿರಬಹುದೆನ್ನುವ ಜನರ ಮಾತುಗಳನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಕೊಲೆಗೂ ಮುಂಚಿನ ರಾಮಣ್ಣನ ಬೆದರಿಕೆ ಇಂಥಾ ಅನುಮಾನ ಹುಟ್ಟುಹಾಕಿದರೆ, ಕೊಲೆ ನಂತರ ನಡೆದ ವಿದ್ಯಮಾನಗಳು ಈ ಅನುಮಾನವನ್ನು ಮತ್ತಷ್ಟೂ ಬಲಗೊಳಿಸುತ್ತವೆ.

ಕೊಲೆಯಾದ ದಿನ ಆಕೆ ಗಂಡನ ಮನೆಯಾದ ಹುಲಿಗುಡ್ಡಕ್ಕೆ ಹೋಗಿಬರುವುದಾಗಿ ಹೇಳಿಹೋಗಿದ್ದಳು. ವಾಪಸ್ಸು ಹೊಸಗುಡ್ಡಕ್ಕೆ ನಡೆದು ಬರುವಾಗ ಹನುಮಮ್ಮ ತನ್ನ ಮನೆಯ ಕೂಗಳತೆ ದೂರದಲ್ಲಿ ಶವವಾಗಿ ಹೋಗಿದ್ದಳು. ಆಕೆಯ ಬರುವಿಕೆಗಾಗಿ ಎದುರು ನೋಡುತ್ತಿದ್ದ ಮಕ್ಕಳು, ತಾಯಿ, ತಂಗಿ ವಿರುಪಮ್ಮರಿಗೆ ಕುರಿಕಾಯುವವರು ಬಂದು ಹೇಳಿದ ಮೇಲಷ್ಟೇ ಸಂಗತಿ ಗೊತ್ತಾದದ್ದು.

ಕೊಲೆಯಾದ ಜಾಗಕ್ಕೆ ಪೊಲೀಸರು ಶ್ವಾನವನ್ನು ಕರೆತಂದರೂ ಅದು ಕಾರಿನಿಂದ ಇಳಿಯಲಿಲ್ಲವೇಕೆ? ಎನ್ನುವ ಪ್ರಶ್ನೆಗಳು ದಲಿತ ಕುಟುಂಬದ ಮೇಲಿನ ವ್ಯವಸ್ಥಿತ ದೌರ್ಜನ್ಯವನ್ನು ಬಿಚ್ಚಿಡುತ್ತವೆ.

ಮರ್ಯಾದೆಹೀನ ಹತ್ಯೆಯೇ?


ಪೊಲೀಸರ ಪ್ರಕಾರ ಇದೊಂದು ಮರ್ಯಾದೆಹೀನ ಹತ್ಯೆ! ಇದಕ್ಕೆ ಆಧಾರಗಳೇನು ಎಂದು ಕೇಳಿದರೆ ಹನುಮಮ್ಮನ ಮಕ್ಕಳು ಮತ್ತು ತಮ್ಮಂದಿರ ಕಡೆ ಪೊಲೀಸ್ ಕೈಬೆರಳುಗಳು ಎದ್ದು ನಿಲ್ಲುತ್ತವೆ. ರಾಮಣ್ಣನ ಜೊತೆ ಅನೈತಿಕ ಸಂಪರ್ಕ ಹೊಂದಿ ಕುಟುಂಬದ ಮಾನ ಹಾಳು ಮಾಡುತ್ತಿದ್ದ ಆಕೆಯನ್ನು ಅವಳ ಮಕ್ಕಳು, ತಮ್ಮಂದಿರೇ ಕೊಂದಿದ್ದಾರೆನ್ನುವುದು ಪೊಲೀಸ್ ಪಾಠ! ಅಲ್ಲದೆ ಪ್ರಕರಣದ ಪ್ರಮುಖ ಸೂತ್ರಧಾರಿ ರಾಮಣ್ಣನ ಜೊತೆ ಬೇರಾವುದೊ ಕಾರಣಕ್ಕೆ ವೈರತ್ವ ಕಟ್ಟಿಕೊಂಡಿದ್ದ ಅವನದೇ ಜಾತಿಯ ರುದ್ರಪ್ಪ ಎಂಬ ಯುವಕನನ್ನೂ ಹನುಮಮ್ಮನ ಮಕ್ಕಳು ಮತ್ತು ತಮ್ಮಂದಿರ ಜೊತೆ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಒಟ್ಟಿನಲ್ಲಿ ಮರ್ಯಾದಾ ಹತ್ಯೆಯ ನೆಪದಲ್ಲಿ ಕುಟುಂಬವನ್ನು ಬೆದರಿಸಿ ಪ್ರಕರಣವನ್ನೇ ಮುಚ್ಚಿಹಾಕುವ ಹುನ್ನಾರ ನಡೆಯುತ್ತಿರುವುದಂತೂ ಸತ್ಯ.



ಆರೋಪಿ ರಾಮಣ್ಣ



ಹನುಮೇಶ್ ನಾಯಕ್



ಶಾಸಕ–ಶಿವರಾಜ ತಂಗಡಗಿ

ತರಾತುರಿಯಲ್ಲಿ ಶವವನ್ನು ಸುಟ್ಟಿದ್ದೇಕೆ?


ಹನುಮಮ್ಮ ಕೊಲೆಯಾದ ಸಂಜೆ, ದಲಿತರ ಮನೆಗೆ ಎಂದೂ ಬಾರದ ರಮೇಶ್ ಎಂಬ ವ್ಯಕ್ತಿ ಬಂದಿದ್ದ. ಈತ ರಾಮಣ್ಣನ ಹತ್ತಿರದ ಸಂಬಂಧಿ ಎನ್ನುವುದು ಎಷ್ಟು ಮುಖ್ಯವೋ ಸ್ಥಳೀಯ ಗೂಂಡಾ ರೌಡಿಶೀಟರ್, ಪುಡಿ ರಾಜಕೀಯದಲ್ಲಿ ಪ್ರಭಾವಿಯಾದ ಹನುಮೇಶ್ ನಾಯಕನ ತಮ್ಮನೂ ಹೌದೆಂಬುದೂ ಅಷ್ಟೇ ಮುಖ್ಯ. ಈ ಹನುಮೇಶನಿಗೆ ಮಂತ್ರಿ ಶಿವರಾಜ್ ತಂಗಡಗಿಯ ಕೃಪಾಕಟಾಕ್ಷವೂ ಇದೆ. ಸ್ಥಳೀಯ ಜನ ಮಾತನಾಡಿಕೊಳ್ಳುವಂತೆ ಕನಕಗಿರಿ ಪೊಲೀಸ್ ಠಾಣೆಯನ್ನು ಹನುಮೇಶ್ ನಾಯಕನ ಮನೆಯ ಹಿತ್ತಲಿಗೆ ಹೋಲಿಸಲಾಗುತ್ತಿದೆ.

ಅಂಥಾ ಹನುಮೇಶನ ತಮ್ಮ ರಮೇಶ ಅವತ್ತು ಹನುಮಮ್ಮನ ಕುಟುಂಬದವರಿಗೆ 'ಈ ಕೊಲೆಯ ಬಗ್ಗೆ ಕೇಸು ಮಾಡಬೇಡಿ, ನಿಮಗೆ ಎರಡು ಲಕ್ಷ ಹಣವನ್ನು ಕೊಡಿಸುತ್ತೇನೆ' ಎಂದು ಹೇಳಿದ್ದ. ಜೊತೆಗೆ ಶವವನ್ನು ಸುಡಲು ಕಟ್ಟಿಗೆ ಮತ್ತು ಸೀಮೆಎಣ್ಣೆ ವ್ಯವಸ್ಥೆಯನ್ನು ಮಾಡಿ ಶವವನ್ನು ಸುಡಲು ಒತ್ತಡವನ್ನೂ ಹೇರಲಾಗಿತ್ತು. ಹತ್ಯೆಯಾದ ಹನುಮಮ್ಮನ ಮಕ್ಕಳು ಮತ್ತು ತಮ್ಮಂದಿರು ತಮ್ಮ ಸಂಪ್ರದಾಯದಂತೆ ಶವವನ್ನು ಸುಡುವುದಿಲ್ಲ ಹೂಳುತ್ತೇವೆ ಎಂದು ಹೇಳಿದರೂ ಇವರ ಮಾತಿಗೆ ಕಿವಿಗೊಡದ ಆ ಜನ ತರಾತುರಿಯಲ್ಲಿ ಹೆಣವನ್ನು ಸುಟ್ಟು ಬೂದಿ ಮಾಡಿದ್ದರು. ಸುಡುವ ಸಂಪ್ರದಾಯ ಇಲ್ಲದೇ ಇದ್ದರೂ, ಸುಡಲು ಒತ್ತಡ ಹಾಕಿದ್ದೇಕೆ? ಪೊಲೀಸರು ಸುಮ್ಮನಿದ್ದಿದ್ದೇಕೆ?

ಕನಕಗಿರಿ ಪೊಲೀಸರ ಪೈಶಾಚಿಕತೆ ಎಂತಹದ್ದೆಂದರೆ ತನಿಖೆಯ ನೆಪದಲ್ಲಿ ಹನುಮಮ್ಮನ ಗಂಡನ ಮನೆಗೆ ಹೋಗಿ, ಅವರನ್ನು ಬೆದರಿಸಿ 33,000 ರೂಪಾಯಿ ಕಿತ್ತುಕೊಂಡಿದ್ದಾರೆ. ಹನುಮಮ್ಮನ ಮಕ್ಕಳು ಮತ್ತು ತಮ್ಮಂದಿರನ್ನು ಕರೆಸಿಕೊಂಡು ಹಿಗ್ಗಾಮುಗ್ಗಾ ಥಳಿಸಿ ಕೊಲೆ ಆಪಾದನೆಯನ್ನು ಅವರ ಮೇಲೆ ಹೊರಿಸಿ ಜೈಲಿಗಟ್ಟಿದ್ದಾರೆ. ಈ ಪ್ರಕರಣದ ದೂರುದಾರರೆಂದು ಹನುಮಮ್ಮನ ಚಿಕ್ಕಪ್ಪನಾದ ಅನಕ್ಷರಸ್ಥ ಹನುಮಂತಪ್ಪ ತಂದೆ ರಗಡಪ್ಪನನ್ನು ತಮ್ಮ ಕೃತ್ಯಕ್ಕೆ ಪೊಲೀಸರು ಬಳಸಿಕೊಂಡಿದ್ದಾರೆ. ಈತನಿಗೆ ಪೊಲೀಸರು ಸಹಿಹಾಕಿಸಿಕೊಂಡಿದ್ದು ಬಿಟ್ಟರೆ ಬೇರೇನೂ ಗೊತ್ತಿಲ್ಲ. ಹಠಾತ್ತನೆ ಎರಗಿ ಬಂದ ಹತ್ಯೆಯಿಂದ ಕನಲಿ ಹೋಗಿದ್ದ ಆ ದಲಿತ ಕುಟುಂಬವೀಗ ಇದ್ದ ಗಂಡು ಮಕ್ಕಳೂ ಜೈಲು ಸೇರಿದ್ದರಿಂದ ಅಕ್ಷರಶಃ ಅನಾಥವಾಗಿದೆ. ಈಗ ಮನೆಯಲ್ಲಿ ಹೆಣ್ಣುಮಕ್ಕಳು ಬಿಟ್ಟರೆ ಬೇರಾರೂ ಇಲ್ಲ. ಇವರು ಕೂಡಾ ಜೀವವನ್ನು ಕೈಯಲ್ಲಿಡಿದುಕೊಂಡು ಮುಂದೇನಾಗುತ್ತದೋ ಎಂಬ ಆತಂಕದಲ್ಲಿ ಬದುಕುತ್ತಿದ್ದಾರೆ. ಹನುಮಮ್ಮನ ತಾಯಿಯಂತೂ ಅನ್ನ ನೀರು ಬಿಟ್ಟು ಇಂದೋ ನಾಳೆಯೋ ಎಂದು ಕೊನೆ ದಿನಗಳನ್ನು ಎಣಿಸುತ್ತಿದ್ದಾಳೆ.

ಈ ಕುಟುಂಬಕ್ಕೆ ನ್ಯಾಯ ಸಿಗುವುದೇ?


■ ಕುಮಾರ್ ಸಮತಳ





ಬಸವತತ್ವ ಪ್ರಚುರಪಡಿಸಿದ್ದಕ್ಕೆ ಪೊಲೀಸ್ ದೂರು

ಕಲಬುರ್ಗಿ ಜಿಲ್ಲೆಯ ಕೋಳಿ ದೆವ್ವ ಎಂದೆ ಹೆಸರಾದ ಆಂದೋಲಾ ಮಠದ ಸ್ವಯಂಘೋಷಿತ ಸಿದ್ಧಲಿಂಗಸ್ವಾಮಿ ಒಬ್ಬ ನಟೋರಿಯಸ್ ಸನಾತನಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ರಮೋದ ಮುತಾಲಿಕ್ ಎಂಬ ಮನುವಿನ ಸಂತತಿಯವನ ಸಖ್ಯ ಹೊಂದಿ ಅಲ್ಪಸಂಖ್ಯಾತರ ಕುರಿತು ಬಾಯಿಗೆ ಬಂದಂತೆ ಮಾತಾಡುವುದು ಈ ಸಿದ್ಧಲಿಂಗಸ್ವಾಮಿಯ ಮನೋಧರ್ಮ. ಸೂಫಿ ಸಂತರ-ಶರಣರ ನಾಡಾದ ಕಲಬುರ್ಗಿಯಲ್ಲಿ ಆಗಾಗ ತನ್ನ ಮಾತುಗಳ ಮೂಲಕ ಕಿಚಾಯಿಸುತ್ತ ತಾನು ಯಾವ ವ್ಯಕ್ತಿತ್ವವನ್ನು ಹೊಂದಿದವನು ಎಂಬುದನ್ನು ಜಗಜ್ಜಾಹೀರುಗೊಳಿಸಿದ್ದಾನೆ.




ಆಂದೋಲ ಮಠದ ಸ್ವಯಂಘೋಷಿತ ಸಿದ್ಧಲಿಂಗಸ್ವಾಮಿ

ತೀರಾ ಇತ್ತೀಚೆಗೆ ಸಾಹಿತಿ ಹಾಗೂ ನಮ್ಮ ಪತ್ರಿಕೆಯ ವರದಿಗಾರ ವಿಶ್ವಾರಾಧ್ಯ ಸತ್ಯಂಪೇಟೆ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ ವೈಚಾರಿಕ-ವೈಜ್ಞಾನಿಕ ಮನೋಭಾವನೆಗಳನ್ನು ಪ್ರಚುರ ಪಡಿಸುತ್ತಿದ್ದದ್ದು ಈ ಸಿದ್ಧಲಿಂಗಸ್ವಾಮಿಗೆ ನುಂಗಲಾಗದ ತುತ್ತಾಗಿತ್ತು. ಜೊತೆಜೊತೆಗೆ ಸತ್ಯಂಪೇಟೆ ಬಸವಾದಿ ಶರಣರ ತತ್ವಗಳನ್ನು ಪ್ರಸಾರ ಮಾಡುತ್ತಿರುವುದು ಆ ಢೋಂಗಿ ಸ್ವಾಮಿಗೆ ಸಂಕಟದ ಸಂಗತಿಯಾಗಿತ್ತು. ಇದಲ್ಲದೆ ಕೆಲವು ತಿಂಗಳುಗಳ ಹಿಂದೆ ಜಿಲ್ಲೆಯ ಜೇವರ್ಗಿ ಪಟ್ಟಣದಲ್ಲಿ ಜರುಗಿದ ಅಡ್ಡಪಲ್ಲಕ್ಕಿ ಮಹೋತ್ಸವ ವಿವಾದದ ಸಂಗತಿಯನ್ನು ಕುರಿತು ನಮ್ಮ ಪತ್ರಿಕೆಯಲ್ಲಿ ಸತ್ಯಂಪೇಟೆ ಬರೆದ ನಿಷ್ಪಕ್ಷಪಾತ ವರದಿಗಳೂ ಸನಾತನಿಗಳ ನಿದ್ದೆ ಕೆಡಿಸಿತ್ತು.

ಹೇಗಾದರೂ ಸೈ ಸತ್ಯಂಪೇಟೆ ಮೇಲೆ ಮುಗಿಬೀಳಬೇಕು ಎಂದು ಸನಾತನಿಗಳು ಸಿದ್ಧವಾಗುತ್ತಿದ್ದ ಸಂದರ್ಭದಲ್ಲೇ ಸತ್ಯಂಪೇಟೆ ನೂರಾರು ಜನ ಪಂಚಪೀಠದ ಮಠಾಧೀಶರುಗಳ ಫೋಟೋವನ್ನು ಫೇಸ್‌ಬುಕ್‌ನಲ್ಲಿ ಹಾಕಿ ಅದರ ಮೇಲೆ 'ಅಡ್ನಾಡಿಗಳು!?' ಎಂಬ ತಲೆ ಬರಹ ನೀಡಿದ್ದನ್ನು ನೋಡಿ ಇವರೆಲ್ಲರಿಗೆ ಮಿರ್ಚಿ ಇಟ್ಟಂತಾಯಿತು.

'ನಮ್ಮ ಸನಾತನ ಪರಂಪರೆಯ ಮಠಾಧೀಶರ ಮೇಲೆಯೇ ಹೀಗೆಲ್ಲ ನಿರ್ಭಯವಾಗಿ ಟೀಕಿಸಿದರೆ ಮುಂದೆ ತಮ್ಮ ಪೀಠಗಳು- ಕುರ್ಚಿಗಳು ಸದ್ದಿಲ್ಲದೆ ಕಾಲನ ವಶವಾಗುತ್ತವೆ' ಎಂಬ ಭಯದಿಂದ ಸನಾತನಿಗಳು ತಲ್ಲಣಗೊಂಡರು.

ಸನಾತನಿಗಳ ಒಕ್ಕೂಟದ ಮುಖ್ಯಸ್ಥನಾಗಲು ಹೇಗೂ ತುದಿಗಾಲ ಮೇಲೆ ನಿಂತಿರುವ ಸಿದ್ದಲಿಂಗಸ್ವಾಮಿಯನ್ನು ಸತ್ಯಂಪೇಟೆಯ ವಿರುದ್ಧ ಛೂಬಿಟ್ಟರಾಯಿತೆಂದು ಪುಡಿ ಮಠಾಧೀಶರ ಗುಂಪು ನಿರ್ಧರಿಸಿತು. ಆನಂತರ ಜಿಲ್ಲಾಧಿಕಾರಿಗಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಮುಂದೆ ರೇವಣಸಿದ್ಧಶಿವಾಚಾರ್ಯ ಸರಡಗಿ, ವಿಶ್ವಾರಾಧ್ಯ ಶಿವಾಚಾರ್ಯ ಮಾಗಣಗೇರಿ, ಗುರುಮೂರ್ತಿ ಶಿವಾಚಾರ್ಯ ಪಾಳ, ಶಿವಮೂರ್ತಿ ಶಿವಾಚಾರ್ಯ ದೇವಾಪುರ, ಶೀಲವಂತ ಶಿವಾಚಾರ್ಯ ಮದ್ರಿಕಿ, ರುದ್ರಮುನಿ ಶಿವಾಚಾರ್ಯ ಮಳ್ಳಿ,




ಮಠದೊಳಗಣ ಬಾವುಗಗಳು ಪುಸ್ತಕದ ಮುಖಪುಟ

ಚಂದ್ರಶೇಖರ ಶಿವಾಚಾರ್ಯ ಆಲಮೇಲ್, ಕಂಠಿ ಶಿವಾಚಾರ್ಯ ನಾಗಣಸೂರ ಹಾಗೂ ಶ್ರೀರಾಮಸೇನೆಯ ಕೆಲವು ಪುಡಿಗಳನ್ನು ಕಟ್ಟಿಕೊಂಡು ಸತ್ಯಂಪೇಟೆಯನ್ನು ಬಂಧಿಸಿ ಜೇಲಿಗೆ ಕಳಿಸಬೇಕೆಂದು ಸಿದ್ದಲಿಂಗಸ್ವಾಮಿ ಅಬ್ಬರಿಸಿದ್ದಾನೆ.

ಹಾಗೆ ನೋಡಿದರೆ ಅಡ್ನಾಡಿ ಎಂಬ ಶಬ್ಧ ಅಸಂವಿಧಾನಿಕವಾದ ಪದವೇ ಅಲ್ಲ. ಎಲ್ಲೆಂದರಲ್ಲಿ ಬೀಡುಬಿಟ್ಟಿರುವುದಕ್ಕೆ ಬಿಡಾಡಿ ಎಂದು ಕರೆಯುವಂತೆ, ನಾಡಿನ ತುಂಬೆಲ್ಲ ಸಂಚರಿಸುವವರನ್ನು ನಾಡಾಡಿ ಎಂದೆನ್ನುವಂತೆಯೆ ಅಡ್ಡ ನಾಡಿ ಎಂದರೆ ಅಡ್ಡಡ್ಡ ತಿರುಗಾಡುವವನು ಎಂದು ಅರ್ಥ. ಅಡ್ನಾಡಿ ಪದ ಬಯ್ಗುಳ ಪದವಾಗುವುದಿಲ್ಲ ಎಂದು ಗಮನಿಸಿದ ಸನಾತನಿಗಳ ಪಟಾಲಂ ಜಟ್ಟಿ ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲವೆಂದು ತೋರಿಸಿಕೊಳ್ಳುವುದಕ್ಕೆ ಸತ್ಯಂಪೇಟೆಯವರೆ ಈ ಹಿಂದೆ ಪತ್ರಿಕೆಗಳಲ್ಲಿ ಬರೆದು ಪುಸ್ತಕವಾಗಿ ಪ್ರಕಟ 'ಮಠಗಳು ಮಾರಾಟಕ್ಕೆ ಇವೆ' ಎಂಬ ಪುಸ್ತಕ ಮಠಾಧೀಶರ ತೇಜೋ ಮಾಡಲಾಗಿದೆ. ಹಿಂದು ಧರ್ಮೀಯರ ಭಾವನೆಗಳನ್ನು ಕೆರಳಿಸಿ ಪೂಜ್ಯ ಗುರುಗಳ ಚಾರಿತ್ರ್ಯ ಹನನ ಮಾಡಲಾಗಿದೆ ಎಂದು ಬೊಬ್ಬೆ ಹೊಡೆದರು.

ಆಶ್ಚರ್ಯದ ಸಂಗತಿಯೆಂದರೆ, ನಮ್ಮ ಪತ್ರಿಕೆಯಲ್ಲಿ 2008-2009 ಈ ಪುಸ್ತಕದಲ್ಲಿರುವ ಹಲವು ಲೇಖನಗಳನ್ನು ಪ್ರಕಟಿಸಿದಾಗ ಉತ್ತರ ಕರ್ನಾಟ ಜನತೆಯನ್ನು ಚಿಂತನೆಗೆ ಹಚ್ಚಿತ್ತು, ಸಾಕಷ್ಟು ಸಂಖ್ಯೆಯ ಓದುಗರ ಬೆಂಬಲ ಈ ಲೇಖನಗಳು ಪಡೆದವು. ಬಸವ ಪ್ರಣೀತ ಲಿಂಗಾಯತ ತತ್ವಕ್ಕೆ ಮಗ್ಗ ಮುಳ್ಳಾದ ಮಠಾಧೀಶರ ನಡಾವಳಿಗಳ ಕುರಿತು ಆರೋಗ್ಯಪೂರ್ಣ ಟೀಕೆಗಳಿದ್ದ ಆಗ ಗಪ್ ಚುಪ್ ಆಗಿ ಕುಳಿತುಕೊಂಡ ಈ ಶಕ್ತಿಗಳು ಕೇಂದ್ರದಲ್ಲಿ ಬಿ ಸರಕಾರ ಅಧಿಕಾರಕ್ಕೆ ಬರುತ್ತಿರುವಂತೆ ಚಿಗಿತುಕೊಳ್ಳತೊಡಗಿವೆ. ಆದರೆ ಈ ಅವಿವೇಕತನವನ್ನು ಖಂಡಿಸಿ ಗುಲ್ಬ ಜಿಲ್ಲೆಯ ದಲಿತ ಪ್ಯಾಂಥರ್, ಸೌಹಾ ಭಾರತ, ದಲಿತ ಸಂಘರ್ಷ ಸಮಿತಿ, ಜನ ವಾದಿ ಮಹಿಳಾ ಸಂಘಟನೆ, ಭಾರತೀಯ ಕಮ್ಯುನಿಸ್ಟ್ ಪಕ್ಷ ಹಾಗ ಪ್ರಗತಿಪರ ಚಿಂತಕರ ವೇದಿಕೆ, ಕ.ರಾ.ರೈ.ಸಂಘ ಮುಂತಾದವರು ವಿಶ್ವಾರಾಧ್ಯ ಸತ್ಯಂಪೇಟೆಯ ಮೇಲಾ ಪೋಲಿಸ್ ದೌರ್ಜನ್ಯವನ್ನು ಖಂಡಿಸಿ ಆರ್.ಕೆ. ಹುಡುಗಿ, ಮೀನಾಕ್ಷಿ ಬಾಳಿ, ಶ್ರೀಶೈಲ ಘೂಳಿ, ವಿಜಯಕುಮಾರ ತೇಗಲತಿಪ್ಪಿ, ಶಿವಣ್ಣ ಇಜೇರಿ, ಶಿವಣ್ಣಗೌಡ ಕಲ್ಲಹಂಗರಗಾ, ಸುರೇಶ ಬಡಿಗೇರ, ಡಾ.ಶ್ರೀಶೈಲ ನಾಗರಾ ಮೊದಲಾದವರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ.



ವಿಶ್ವಾರಾಧ್ಯ ಸತ್ಯಂಪೇಟೆ

ಎಲ್ಲಿ ಮುಕ್ತವಾದ ಸ್ವಾತಂತ್ರ್ಯವಿರುತ್ತದೊ ಅಲ್ಲಿ ಆರೋಗ್ಯಕರವಾದ ಸಮಾ ಸೃಷ್ಟಿಯಾಗುತ್ತದೆ. ಎಲ್ಲಾ ಬಂಧನಗಳನ್ನು ಕಳಚಿದಾಗಲೆ ಸ್ವಾತಂತ್ರ್ಯದ ವಿಹಂಗಮವಾಗಿ ತಿರುಗಾಡಬಹುದು. ಇದು ಬುದ್ಧ, ಬಸವ, ಅಂಬೇಡ್ಕ ಲೋಹಿಯಾ, ಪೆರಿಯಾರ, ಮಹಾತ್ಮ ಜ್ಯೋತಿಬಾ ಫುಲೆ, ನಾರಾಯಣ ಗು ವಿವೇಕಾನಂದರಂತಹ ವಿಚಾರವಾದಿಗಳ ನಾಡು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಾಗ ಹಲ್ಲೆ ಪ್ರಜಾಪ್ರಭುತ್ವದ ಮೇಲಾಗುವ ಹಲ್ಲೆ.

ಸಮಾಜ ಪರಿವರ್ತನೆಯಲ್ಲಿ ನಂಬಿಕೆ ಇರುವ, ಸಕಲ ಜೀವಾತ್ಮ ಲೇಸಾಯಬೇಕೆಂದು ಬಯಸುವ, ಮೌಢ್ಯಗಳು ಸಮಾಜದಿಂದ ಅಳಿಯ ಎಂಬ ಕಳಕಳಿ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇದನ್ನು ಅರಿ ಸಂಬಂಧಿಸಿದ ಪೋಲಿಸ್ ಇಲಾಖೆಗೆ ನಿರ್ದೇಶನ ಕೊಡಬೇಕಿದೆ.

■ ವರದಿಗಾ

03 ⏮ ಕಂಡಹಾಗೆ....

ಚಾಟೇಶ್ವರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅವತ್ತು ಬಂಧನಕ್ಕೊಳಗಾದ 11 ಜನರಲ್ಲಿ, ಹಲವರು ಇನ್ನೂ ಹನ್ನೊಂದು ಹನ್ನೆರಡು ವರ್ಷದವರಾಗಿದ್ದರೆ, ಆಗ ವಾಜಪೇಯಿಗೆ 18 ಮತ್ತು ಅವರ ಅಣ್ಣ ಪ್ರೇಮ್‌ಗೆ 21 ವರ್ಷಗಳಾಗಿತ್ತು, ಅಷ್ಟೇ ಅಲ್ಲದೆ ಮಿಕ್ಕವರೆಲ್ಲರೂ ಅನಕ್ಷರಸ್ಥರಾಗಿದ್ದರೆ, ವಾಜಪೇಯಿ ಸಹೋದರರು ಕಾಲೇಜು ವಿದ್ಯಾಭ್ಯಾಸ ಪಡೆದಿದ್ದ ಸುಶಿಕ್ಷಿತರಾಗಿದ್ದರು.

ಬಂಧನವಾದ ಮೂರು ದಿನಗಳ ನಂತರ, ಸೆಪ್ಟಂಬರ್ 1, 1942 ರಂದು ಮ್ಯಾಜಿಸ್ಟ್ರೇಟ್ ಶಬ್ಬೀರ್ ಹಸನ್‌ರವರ ಮುಂದೆ ವಾಜಪೇಯಿ ನೀಡಿದ ಹೇಳಿಕೆ ಕೂಡ ಇಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

ಕಾನೂನು ಉಲ್ಲಂಘನೆಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂಬುದು ವಾಜಪೇಯಿಗೆ ಗೊತ್ತಿದ್ದರೂ ತಮ್ಮ ಹೇಳಿಕೆಯಲ್ಲಿ ಲೀಲಾಧರ್ ಮತ್ತು ಮಹೂವಾರವರ ಪಾತ್ರವನ್ನು ನಿರ್ದಿಷ್ಟವಾಗಿ ಒಪ್ಪಿದ್ದಾರೆ. ಇತರ ಗ್ರಾಮಸ್ಥರು ಅವರಿಬ್ಬರನ್ನು ಗುರುತಿಸಿದ್ದರೂ, ಸುಶಿಕ್ಷಿತರಾದ ವಾಜಪೇಯಿ ಸಹೋದರರ ಹೇಳಿಕೆಯೇ ಪೊಲೀಸರಿಗೆ ಸಹಾಯ ನೀಡಿತ್ತು. ಇವರಿಬ್ಬರ ಹೇಳಿಕೆಯನ್ನು ಆಧರಿಸಿಯೇ ಲೀಲಾಧರರಿಗೆ ಮೂರು ವರ್ಷಗಳ ಕಾಲ ಕಠಿಣ ಜೈಲುವಾಸವನ್ನು ನ್ಯಾಯಾಲಯ ವಿಧಿಸಿತ್ತು.

70 ರ ದಶಕದಲ್ಲಿ ವಾಜಪೇಯಿ ದೇಶದ ರಾಜಕಾರಣದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವಾಗಲೇ ಅವರ ಅಸಲಿ ಬಂಡವಾಳವನ್ನು ಬಿಚ್ಚಿಡುವ ಈ ಚಾಟೇಶ್ವರ್ ಪ್ರಕರಣವೂ ಹೊರಬರಲಾರಂಭಿಸಿತ್ತು. ಆದರೆ ವಾಜಪೇಯಿಯವರು ಹೋರಾಟದ ಹುಲಿ, ದೇಶಭಕ್ತ, ತ್ಯಾಗಮಯಿ ಎಂದೆಲ್ಲಾ ದಂತಕತೆಗಳನ್ನು ಕಟ್ಟುತ್ತಿದ್ದ ಆರೆಸ್ಸೆಸ್ ಮತ್ತು ಸಂಘಪರಿವಾರ ಇದನ್ನು ಹತ್ತಿಕ್ಕುತ್ತಲೇ ಬಂದಿದೆ.

ಸುಳ್ಳಿನ ಬಗ್ಗೆ ಅರ್ಧ ಸತ್ಯವನ್ನು, ಸತ್ಯದ ಬಗ್ಗೆ ಅರ್ಧ ಸುಳ್ಳನ್ನೂ ಹೇಳುವುದು ವಾಜಪೇಯಿಗೂ, ಅವರ ಸಂಘಪರಿವಾರಕ್ಕೂ ಕರಗತವಾಗಿರುವುದರಿಂದ, ಆತ ಹೋರಾಟ ಮಾಡಲಿಲ್ಲವೆಂದರೂ ಅವರನ್ನು "ಸ್ವಾತಂತ್ರ್ಯ ಹೋರಾಟದ ಯೋಧ" ಎಂದು ಚೆಡ್ಡಿಗಳು ಬಣ್ಣಿಸುತ್ತಾರೆ; ತಮ್ಮ ಹೇಳಿಕೆಯಿಂದಾಗಿಯೇ ಲೀಲಾಧರ್ ಮತ್ತು ಇತರರು ಜೈಲು ಸೇರಿದ್ದರೂ ಯಾರ ವಿರುದ್ಧವೂ "ಸಾಕ್ಷಿ ನೀಡಲಿಲ್ಲ" ಎಂದು ವಾಜಪೇಯಿ ಹೇಳುತ್ತಾರೆ!!

ಈಗ ಇಂತಹ ವಾಜಪೇಯಿಗೆ ಭಾರತ ರತ್ನ ಪ್ರಶಸ್ತಿಯನ್ನು ದಯಪಾಲಿಸಿ ಕೃತಾರ್ಥರಾಗಲು ಆರೆಸ್ಸೆಸ್ ಹವಣಿಸುತ್ತಿದೆ. ಸ್ವಾತಂತ್ರ್ಯಕ್ಕೂ ಮುನ್ನ ದೇಶಕ್ಕಾಗಿ ಎಂದೂ ಹೋರಾಡದ, ಆನಂತರವೂ ಸಂವಿಧಾನದ ಆಶಯಗಳಿಗೆ ವಿರುದ್ಧವಿರುವ ಸಂಘಟನೆಗೆ ತನ್ನ ಸೇವೆಯನ್ನು ಅರ್ಪಿಸಿದ, ಸದಾ ಗೋಸುಂಬೆತನವನ್ನು ಪ್ರದರ್ಶಿಸಿದ ವಾಜಪೇಯಿ ಭಾರತ ರತ್ನ ಪ್ರಶಸ್ತಿಗೆ ನಿಜವಾಗಲೂ ಅರ್ಹರೇ?

ಸುನ್ನಾ ಮತ್ತು ಪ್ರವಾದಿಗಳ ಸಂಪ್ರದಾಯ



"ಇಸ್ಲಾಂ ಧರ್ಮವನ್ನು ಕೆಲ ಮೂಲಭೂತವಾದಿ ಮುಸ್ಲಿಮರು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನ ಮಾಡುತ್ತಿರುವ ಈಗಿನ ಸಂದರ್ಭದಲ್ಲಿ ಖ್ಯಾತ ಇಸ್ಲಾಮೀ ಪ್ರಗತಿಪರ ಚಿಂತಕ ಜಿಯಾವುದ್ದೀನ್ ಸರ್ದಾರ್ ಅವರ 'ಸ್ವರ್ಗ ಸಾಧನೆಯ ಉತ್ಕಟ ಬಯಕೆ - ಸಂದೇಹಿ ಮುಸ್ಲಿಮನ ಯಾತ್ರೆಗಳು' ಪುಸ್ತಕದಿಂದ ಆಯ್ದಿರುವ ಈ ಭಾಗ ಮುಖ್ಯ ಎನಿಸುತ್ತಿರುವುದರಿಂದ ಇದನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಒಮ್ಮೆ ಜಿಯಾವುದ್ದೀನ್ ಸರ್ದಾರ್ ಅವರು ಪಾಕಿಸ್ತಾನದ ಮದರಸಾದ ವಿದ್ಯಾರ್ಥಿಯೊಬ್ಬನ ಜೊತೆಗೆ ಚರ್ಚಿಸುತ್ತಿದ್ದರು. ಆಗ

"ನೀವು ಶಿಯಾನಾ?" ಎಂದು ವಿದ್ಯಾರ್ಥಿ ಕೇಳಿದ.

ನಾನು "ಅಲ್ಲ" ಎಂದೆ.

"ಶಿಯಾಗಳು ಮುಸ್ಲಿಮರಲ್ಲ, ಅವರು ನಿಜವಾದ ಇಸ್ಲಾಮೀ ಗಣರಾಜ್ಯಕ್ಕೆ ಸೇರುವುದಿಲ್ಲ" ಎಂದು ಆ ವಿದ್ಯಾರ್ಥಿ ಯಾವುದೇ ಹಿಂಜರಿಕೆ ಇಲ್ಲದೆ ಹೇಳಿದ ನಂತರ "ನೀವು ಒಳ್ಳೆಯ ಮುಸ್ಲಿಮರೇ?" ಎಂದು ಪ್ರಶ್ನಿಸಿದ.

"ನಾನೊಬ್ಬ ಮುಸ್ಲಿಮ್. ಆದ್ರೆ ಒಳ್ಳೆಯ ಮುಸ್ಲಿಮನೋ ಹೇಗೋ ಎಂದು ನನಗೆ ಗೊತ್ತಿಲ್ಲ" ಎಂದೆ.

"ನೀವು ಮುಸ್ಲಿಮರಾಗಿದ್ದರೆ ನಿಮಗೆ ಗಡ್ಡವೇಕಿಲ್ಲ?"

"ಯಾಕೆಂದರೆ ಮುಸ್ಲಿಮರಾಗಲು ಗಡ್ಡದ ಅವಶ್ಯಕತೆಯಿಲ್ಲ" ಎಂದೆ.

"ಇಲ್ಲ, ಅದು ಪ್ರವಾದಿಗಳ ಸುನ್ನಾ (ಸಂಪ್ರದಾಯದ ಮುಂದುವ ಯಾರು ಪ್ರವಾದಿಗಳ ಸುನ್ನಾವನ್ನು ಅನುಸರಿಸುವುದಿಲ್ಲವ್ರೋ ಅವರು ಮುಸ್ಲಿಮ

"ಹಾಗಾದರೆ ನೀವ್ಯಾಕೆ ಒಂಟೆಗಳ ಮೇಲೆ ಓಡಾಡುತ್ತಿಲ್ಲ?" ಎಂದೆ.

ನನ್ನ ಮಾತಿನಿಂದ ಆತ ಗಲಿಬಿಲಿಗೊಂಡ.

"ಏನು ನೀವು ಹೇಳುತ್ತಿರುವುದು?"

"ಒಂಟೆಯ ಮೇಲೆ ಓಡಾಡುವುದು ಕೂಡಾ ಸುನ್ನಾ. ಪ್ರವಾದಿಗಳು ತ ಬದುಕಿನ ಬಹಳಷ್ಟು ಸಮಯವನ್ನು ಒಂಟೆಯ ಬೆನ್ನ ಮೇಲೆ ಕುಳ ಕಳೆದಿದ್ದರು" ಎಂದೆ.

"ಆದರೆ ಇವತ್ತು ನಮ್ಮ ಹತ್ತಿರ ಕಾರು ಬಸ್ಸುಗಳಿವೆಯಲ್ಲಾ?"

"ಹಾಂ. ಅದೇ ನಾನು ಹೇಳುತ್ತಿದ್ದದ್ದು" ಎಂದು ನಾನು ಅವನಿಗೆ ಹೇ "ಆಗಿನ ಕಾಲದಲ್ಲಿ ಬ್ಲೇಡುಗಳು ಇದ್ದಿದ್ದರೆ ಪ್ರವಾದಿಗಳೂ ಅವ ಉಪಯೋಗಿಸುತ್ತಿದ್ದರು. ಅದರಲ್ಲಿ ಅನುಮಾನವೇ ಇಲ್ಲ. ನೀವು ಸುಮ ಹಚ್ಚಿಕೊಂಡಿದ್ದೀರಿ ಅಲ್ಲವೇ?" ಎಂದು ನಾನು ಕೇಳಿದೆ.

"ಹೌದು ಅದು ಸುನ್ನಾ."

"ಆದರೆ ಅದರಲ್ಲಿ ಸೀಸವು ಸೇರಿರುತ್ತದೆ. ಅದು ನಿಮ್ಮ ಕಣ್ಣುಗಳ ಹಾಳುಮಾಡಿ ನಿಮ್ಮ ದೇಹಕ್ಕೆ ವಿಷವನ್ನು ಸೇರಿಸಬಹುದು" ಎಂದೆ.

ವಿದ್ಯಾರ್ಥಿ ಸುಮ್ಮನೆ ನಿಂತಿದ್ದ.

"ಪ್ರವಾದಿಯವರ ಹಲವು ಅಭ್ಯಾಸಗಳು ಅವರ ಕಾಲದ ಅನಿವಾರ್ಯವಾಗಿದ್ದವು. ಅವುಗಳೆಲ್ಲಾ ಸುನ್ನಾದ ಅಂಶಗಳೆಂದು ನಾ ತಿಳಿಯುವುದಿಲ್ಲ. ನನ್ನ ಪ್ರಕಾರ ಸುನ್ನಾ ಎಂದರೆ ಅವರು ಪ್ರತಿಪಾದಿ ಮೌಲ್ಯಗಳ ಚೈತನ್ಯಕ್ಕೆ ಸಂಬಂಧಿಸಿದ್ದು. ಅವರ ಔದಾರ್ಯ, ಪ್ರೀತಿ ಮ ಸಹನೆ. ನಮಗೆ ಕಿರುಕುಳ ಕೊಟ್ಟವರನ್ನೂ, ಶೋಷಿಸಿದವರನ್ನೂ ಮನ್ನಿಸ ಅವರ ಕ್ಷಮಾಗುಣ, ಹಿರಿಯರು, ಮಕ್ಕಳು ಮತ್ತು ಪರಿತ್ಯಕ್ತರ ಬಗ್ಗೆ ಅ ತೋರಿಸುತ್ತಿದ್ದ ಗೌರವ ಮತ್ತು ಕಾಳಜಿ. ನ್ಯಾಯ, ಧರ್ಮ ಮ ಸಮಾನಾವಕಾಶಗಳಿಗಾಗಿ ಇದ್ದ ತುಡಿತ. ಶೋಧನೆ, ಜ್ಞಾನ ಮತ್ತು ವಿಮರ್ಶೆಗ ಅವರಿಗಿದ್ದ ಅರ್ಪಣಾ ಮನೋಭಾವ. ನಾವು ಅನುಸರಿಸಬೇಕಾದ್ದು ಪ್ರವಾದಿ ಹಾಕಿಕೊಟ್ಟ ಈ ಸಂಪ್ರದಾಯವನ್ನು."

ಏನಂತೀರಾ?

- ಮೊಹಮ್ಮದ್ ಇರ್ಷಾದ್, ಬೆಂಗಳೂ

...ನ್ನೂ ಮುಟ್ಟಿಸಿಕೊಳ್ಳದ ಭಾರತೀಯ ಮಾಧ್ಯಮಗಳು...

...992ರಲ್ಲಿ ಹಾಗೆ ಸುಮ್ಮನೆ ಇಣುಕಿ ನೋಡಿದ್ದ... ಅಲ್ಲೊಬ್ಬ ದಲಿತ ಸಿಗಲಿಲ್ಲ; ಇವತ್ತೂ ಅಲ್ಲಿ... ಅದು ಭಾರತೀಯ ಮಾಧ್ಯಮ ರಂಗ. ದಲಿತರನ್ನು ... ಮುಟ್ಟಿಸಿಕೊಳ್ಳಲು ಹೆಣಗುತ್ತಿರುವ ಬೃಹತ್ ...ಮು. ಇಂಡಿಯಾದ ಒಟ್ಟು ಜನಸಂಖ್ಯೆಯ ಶೇಕಡಾ ...ದರಷ್ಟಿರುವ ದಲಿತರ ಬದುಕನ್ನು ಸಣ್ಣ ...ಪಲಕ್ಕಾದರೂ ನೋಡುವುದಿರಲಿ, ಭಾರತೀಯ ...ಮ ತನ್ನ ಸುದ್ದಿಮನೆಗಳಿಂದಲೇ. ದಲಿತರನ್ನು ...ಟ್ಟಿದೆ.

...ಲಿತರನ್ನು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಿಂದ ...ಡಲು ಕಾರಣಗಳೇನು? ಇದಕ್ಕೆ ಮೂರು ...ಳಿವೆ. ಮೊದಲನೆಯದು, ಭಾರತೀಯ ಸಂವಿಧಾನದ ...ಧರ್ಮವಾದ ಸಮಾನತೆ ಮತ್ತು ಭ್ರಾತೃತ್ವವನ್ನು ...ೇಶದ ಎಲ್ಲ ರಂಗಗಳು ನಿರಾಕರಿಸಿರುವಂತೆ ...ಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮವೂ ...ಿಸಿದೆ. ಹೀಗಾಗಿಯೇ ಮಾಧ್ಯಮದ ಮಂದಿ ...ಮುದಲ್ಲಿ ಭ್ರಾತೃತ್ವ ಎಂದರೆ ದೂರ ಸರಿಯುತ್ತಾರೆ. ...ಡಯದು, ಸುದ್ದಿಮನೆಗಳಲ್ಲಿರುವ ಮಂದಿ ಸದಾ ...ಟಕತೆಗೆ ಮಣೆಹಾಕಿ ಹೆಚ್ಚು ಜನರನ್ನು ...ಸುವುದರತ್ತಲೇ ಗಮನಕೊಡುವುದರಿಂದ, ಮಾಧ್ಯಮದ ... ಜಗತ್ತಿಗೆ ದೇಶದ ಕಾಲುಭಾಗದಷ್ಟಿರುವ ದಲಿತರು ...ತ್ತೂ ಮಾರಾಟದ ಸರಕಾಗುವುದಿಲ್ಲ. ಸದಾ ...ಪನಿಕ ಸಮ್ಮತಿ ಉತ್ಪಾದಿಸುವುದರತ್ತಲ್ಲೇ ಹೆಚ್ಚು ...ತಿಸುವ ಈ ಮಾಧ್ಯಮ, ಸಮಾಜದ ಅಂಚಿನಲ್ಲಿದ್ದು ...ರ್ಲಕ್ಷ್ಯಕ್ಕೊಳಗಾಗಿರುವ ದಲಿತರ ತಾರತಮ್ಯದ ...ನ್ನು ಇದುವರೆವಿಗೂ ಗಂಭೀರವಾಗಿ ಪರಿಗಣಿಸಿಯೇ ...ಪೂರ್ವ ಮತ್ತು ಈಶಾನ್ಯ ಭಾಗದ ಅನೇಕ ರಾಜ್ಯಗಳಲ್ಲಿ ...ಪ್ರಮಾಣದಲ್ಲಿ ಜನಪರ ಹೋರಾಟಗಳು ನಡೆದರೂ ...ಯಾದ ಪತ್ರಿಕೆಗಳಿಗೆ ಅವು ಸುದ್ದಿಯೇ ಅನ್ನಿಸಿಲ್ಲ.

...ೂರನೆಯದು, ಬಹಳ ಹಿಂದೆ ಅಮೆರಿಕದ ಕಟ್ಟಾ ...ಮದ ಮಂದಿ ಸುದ್ದಿ ಅನ್ನಿಸುವುದೆಲ್ಲ ಪ್ರಿಂಟಾಗಬೇಕು ... ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಟ್ಯಾಗ್‌ಲೈನನ್ನು ...ನಂಬಿಕೊಂಡಿದ್ದರು. ಆದರೆ ದೇಶದ ಕಾಲುಭಾಗದಷ್ಟು ...ನ್ನ ಅವರ ಮೇಲೆ ಯಾವುದಾದರೂ ಹಿಂಸೆ, ಬರ್ಬರ ...ವ ಕೃತ್ಯಗಳು ಜರುಗಿದ ಸಂದರ್ಭಗಳಲ್ಲಿ ಮಾತ್ರ ... ನಂತರ ಅವರನ್ನು ಮಾಧ್ಯಮದ ಗಡಿಗಳಿಂದಲೇ ...ನೂಕುವ ಪತ್ರಿಕೆಗಳು ಹೆಚ್ಚುಕಾಲ ನೆಲೆನಿಲ್ಲಲಾರವು ...ಪರಮಸತ್ಯ ಇದೇ ಮಾಧ್ಯಮದ ಮಂದಿಗೆ ಬಹುಬೇಗ ...ಯಿತು.

...ರತೀಯ ಮಾಧ್ಯಮಗಳಲ್ಲಿ ದಲಿತರ ಗೈರುಹಾಜರಿ ... ಚರ್ಚೆಗಳು 1996ರಿಂದ ಹೆಚ್ಚು ಮುನ್ನೆಲೆಗೆ ...ವೆ. ಖುದ್ದು ಒಬ್ಬ ಆಫ್ರೋ-ಅಮೆರಿಕನ್ ಆಗಿರುವ ...ಗ್ಟನ್ ಪೋಸ್ಟ್ ಪತ್ರಿಕೆಯ ವರದಿಗಾರರಾದ ಕೆನ್ನೆತ್ ...ಪರ್ ಮೊದಲಿಗೆ ದೆಹಲಿಯ ಮಾಧ್ಯಮದಲ್ಲಿ ...ನ್ನು ಹುಡುಕುವ ಪ್ರಯತ್ನ ನಡೆಸಿದರು. ಅವರ ...ಕಾಟದಲ್ಲಿ ಅಂಥ ಲಾಭವೇನೂ ಆಗಲಿಲ್ಲ. ಕಡೆಗೆ ... ಬೇಸತ್ತು ಪಯನೀಯರ್ ಪತ್ರಿಕೆಗೆ ಬರೆದ ತನಿಖಾ ...ಸವನ್ನು ಬಿ.ಎನ್.ಉನಿಯಾಲ್ ಪ್ರಕಟಿಸಿದರು. ...ದ ಕೊನೆಗೆ ಕೂಪರ್ ನೊಂದು ಬರೆದಿದ್ದರು: ...ೂವತ್ತು ವರ್ಷಗಳ ಜರ್ನಲಿಸ್ಟ್ ಬದುಕಿನಲ್ಲಿ ಒಬ್ಬೇ ...ದಲಿತನನ್ನು ಇಂಡಿಯಾದ ಸುದ್ದಿಮನೆಗಳಲ್ಲಿ ನೋಡಲು ...ೇ ಆಗಲಿಲ್ಲ.

ಒಬ್ಬ ದಲಿತನೂ ಸಿಗಲಿಲ್ಲ...

...ನು 2000ದಲ್ಲಿ ಇಂಡಿಯಾದ ಪತ್ರಿಕಾ ಕ್ರಾಂತಿ ... ಪುಸ್ತಕ ಬರೆದಾದ ನಂತರವೂ ಇಲ್ಲಿ ಅಂಥ ದೊಡ್ಡ ...ಪತೆಗಳೇನೂ ಆಗಿಲ್ಲ. ಕೂಪರ್-ಉನಿಯಾಲ್ ... ವರದಿಯುಲ್ಲಿ ಹೇಳಿರುವಂತೆ ಭಾರತದ ...ನೂರಕ್ಕೂ ಹೆಚ್ಚಿನ ಪತ್ರಿಕೆಗಳಲ್ಲಿ ಪರಿಶಿಷ್ಟ ಜಾತಿ ... ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬೇ ಒಬ್ಬ ಪತ್ರಕರ್ತ ...ದ್ದಿಲ್ಲ. ಆ ವರದಿಗೆ 2006ರಲ್ಲಿ ಹತ್ತು ವರ್ಷಗಳು ...ದವು. ಕಳೆದ ವರ್ಷವಷ್ಟೇ ತಮಿಳು ಪತ್ರಕರ್ತ ...ಸುಬ್ರಹ್ಮಣ್ಯಮ್ ಇಂಗ್ಲಿಷ್ ದೈನಿಕವೊಂದರ ...ಸದಲ್ಲಿ ತಮಗಾದ ಹಸಿಹಸಿ ಅನುಭವಗಳನ್ನು ...ಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ...ಕೊಂಡಿದ್ದರು. ಬಾಲಸುಬ್ರಹ್ಮಣ್ಯಮ್ ದಲಿತ ಅನ್ನುವ ...ಕ್ಕೆ ಹಾಗೂ ಅವರು ಸಂದರ್ಶನಕ್ಕೆ ತಮ್ಮೊಂದಿಗೆ ...ಕೊಂಡು ಹೋಗಿದ್ದ ದಲಿತರ ಪರವಾದ ಲೇಖನಗಳು ... ಆ ಇಂಗ್ಲಿಷ್ ದೈನಿಕದ ... ...ಗಾಗಿ ಮುಚ್ಚುವಂತೆ ಮಾಡಿತ್ತು.

...ನೆತ್ ಕೂಪರ್ ಈ ಸದ್ಯ ಬೋಸ್ಟನ್‌ನಲ್ಲಿ ...ಸುತ್ತು ಆಫ್ರಿಕನ್-ಅಮೆರಿಕನ್ ಜನರ ಬದುಕನ್ನು ...ಬಿಂಬಿಸುವ ಸೆಂಟ್ ಲೂಯಿಸ್ ಅಮೆರಿಕನ್ ಎಂಬ ಯಶಸ್ವಿ ಪತ್ರಿಕೆಗೆ ಸಂಪಾದಕರಾಗಿದ್ದಾರೆ. ಇಂಡಿಯಾದ ದಲಿತರು, ಆಫ್ರಿಕಾ-ಅಮೆರಿಕಾ ದೇಶಗಳ ಕಪ್ಪು ಜನಾಂಗದವರು ಒಂದೇ ಬಗೆಯ ತಾರತಮ್ಯ ಮತ್ತು ಅವಮಾನಗಳನ್ನು ಸಾಮಾಜಿಕವಾಗಿ ಅನುಭವಿಸಿದ್ದಾರೆ ಎಂಬುದು ನಮಗೆಲ್ಲ ಗೊತ್ತಿದೆ. ಎಬೋನಿ, ಎಸ್ಸೆನ್ಸ್, ಸೆಂಟ್ ಲೂಯಿಸ್ ಅಮೆರಿಕನ್ ಮತ್ತು ಚಿಕಾಗೋ ಡಿಫೆಂಡರ್ ತರಹದ ಪತ್ರಿಕೆಗಳು ಅಲ್ಲಿನ ಶೋಷಿತರನ್ನು ಹತ್ತಿರಕ್ಕೆ ಬಿಟ್ಟುಕೊಂಡಂತೆ ಇಂಡಿಯಾದ ಪತ್ರಿಕೆಗಳಿಗೇಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆ ಕಣ್ಣೆದುರು ಬಂದು ನಿಲ್ಲುತ್ತದೆ.

ಇದಕ್ಕೆ ಉತ್ತರವೂ ಇದೆ. ಇಂಡಿಯಾದ ದಲಿತರು ಮುಟ್ಟದ ಜಗತ್ತೊಂದನ್ನು ಅಮೆರಿಕಾದ ಶೋಷಿತರು



1920ರಲ್ಲಿ ಮುಟ್ಟಿದರು. ಬಹಳ ಮುಖ್ಯವಾಗಿ ಈ ದಶಕದಲ್ಲಿ ಕಪ್ಪು ಜನಾಂಗದಿಂದ ಮಧ್ಯಮ ವರ್ಗವೊಂದು ರೂಪುಗೊಂಡು ಅನೇಕ ಅಂಗಡಿ, ವ್ಯಾಪಾರ-ವಹಿವಾಟುಗಳ ಮಾಲೀಕತ್ವವನ್ನು ಪಡೆದುಕೊಂಡಿತು. ಮಧ್ಯಮ ವರ್ಗದ ಈ ಪುಟ್ಟ ಕಪ್ಪು ಜನಾಂಗವೇ ಮುಂದೆ ಕಪ್ಪು ಅಮೆರಿಕವಾಗಿ ತನ್ನ ಹೊಸ ಹುಟ್ಟನ್ನು ಪಡೆದುಕೊಂಡಿತು. ಈ ವರ್ಗ ತನ್ನ ಆರ್ಥಿಕ ಯಶಸ್ಸಿಗೆ ಆಯ್ದುಕೊಂಡದ್ದು ಪತ್ರಿಕೆಗಳ ಜಾಹೀರಾತು. ಜಾಹೀರಾತು ಪಡೆಯುವ ಸಲುವಾಗಿಯಾದರೂ ಅಮೆರಿಕಾದ ಪತ್ರಿಕೆಗಳು ಈ ಕಪ್ಪು ಮಧ್ಯಮ ವರ್ಗದ ಎದುರು ಮಂಡಿಯೂರಿ ನಿಂತಿತು. ಇಡೀ ಅಮೆರಿಕಾ ಉಸಿರಾಡುತ್ತಿದ್ದ ಇಂಗ್ಲಿಷ್ ಭಾಷೆಯನ್ನು ಅಲ್ಲಿನ ಶೋಷಿತರು ಕಷ್ಟಪಟ್ಟು ತಮ್ಮದಾಗಿಸಿಕೊಂಡರು. ಆ ಭಾಷೆಯ ಸಂಪರ್ಕದಿಂದಾಗಿ ಚರ್ಚ್‌ನ ಒಳಗೆ ನಡೆಯುತ್ತಿದ್ದ ವಿದ್ಯಮಾನಗಳೆಲ್ಲ ಹೊರಗಿದ್ದ ಶೋಷಿತರಿಗೆ ತಲುಪಿತು. ಇಂಥ ಹೊತ್ತಲ್ಲೇ ಅಲ್ಲೊಬ್ಬ ಮಾರ್ಟಿನ್ ಲೂಥರ್ ಕಿಂಗ್ ಹುಟ್ಟಿಕೊಂಡದ್ದು. ತಮ್ಮ ಚರ್ಮಗಳು ಎಷ್ಟೇ ಭಿನ್ನ ದನಿ ಹೊರಡಿಸಿದರೂ ಕಪ್ಪು ಅಮೆರಿಕಾದ ಆಳದಲ್ಲಿ ಹೆಚ್ಚು ಬಿರುಕು ಕಾಣಿಸಿಕೊಳ್ಳಲಿಲ್ಲ. ಆಫ್ರಿಕಾ ಮತ್ತು ಅಮೆರಿಕಾದಲ್ಲಿ ಈಗ ಜನಾಂಗೀಯ ತಾರತಮ್ಯ ಅನ್ನುವುದು ಮೊದಲಿನಂತೆ ಗುಣಪಡಿಸಲಾಗದ ಗಾಯದಂತೇನೂ ಇಲ್ಲ.

ಮಾಧ್ಯಮದಲ್ಲಿ ದಲಿತರ ಪ್ರಾತಿನಿಧ್ಯದ ಪ್ರಶ್ನೆಗಳು ಬಂದಾಗಲೆಲ್ಲ ಇಂಡಿಯಾದ ಮಾಧ್ಯಮಗಳು ಎರಡು ಸಿದ್ಧ ಉತ್ತರಗಳನ್ನು ತಮ್ಮ ಬೆಂಬಲಕ್ಕೆ ಇಟ್ಟುಕೊಳ್ಳುತ್ತವೆ: ಒಳ್ಳೆಯ ಪತ್ರಕರ್ತ ಸುದ್ದಿಯ ವಸ್ತುನಿಷ್ಠತೆಯನ್ನು ನೋಡುತ್ತಾನೆಯೇ ಹೊರತು ಜಾತಿಯನ್ನಲ್ಲ ಮತ್ತು ಮೀಸಲಾತಿ ಎನ್ನುವುದು ಆಧುನಿಕ ಭಾರತಕ್ಕೆ ಮಾರಕ, ಜಾತಿಯನ್ನು ಪಕ್ಕಕ್ಕಿಟ್ಟು ಪ್ರತಿಭೆಯನ್ನಷ್ಟೆ ಪರಿಗಣಿಸಬೇಕು.

ಬ್ರಿಟಿಷ್ ಆಳ್ವಿಕೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಇಲ್ಲಿನ ಪುರಾತನ ಶ್ರೀಮಂತರು ದಿ ಸ್ಟೇಟ್ಸ್‌ಮ್ಯಾನ್ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರೆಂದೇನಾದರೂ ತಿಳಿದಿರುವಿರಾ? ಖಂಡಿತ ಇಲ್ಲ. ದಿ ಹಿಂದೂ, ಅಮೃತಾ ಬಜಾರ್ ಪತ್ರಿಕಾ, ಹಿಂದೂಸ್ತಾನ್ ಟೈಮ್ಸ್, ಯಂಗ್ ಇಂಡಿಯಾ ಮೊದಲಾದ ಪತ್ರಿಕೆಗಳು ಇಲ್ಲಿನ ಶೋಷಿತರನ್ನು ಅಪ್ಪಾಗಿ ಪ್ರತಿನಿಧಿಸಲಿಲ್ಲ ಎಂಬುದನ್ನು ಆ ಪತ್ರಿಕೆಗಳು ದಕ್ಕಿಸಿಕೊಂಡ ವ್ಯಾಪಾರಿ ಯಶಸ್ಸಿನಿಂದಲೇ ಅಂದಾಜಿಸಬಹುದು. ನಿಮ್ಮ ಕೈಯಲ್ಲೊಂದು ಪತ್ರಿಕೆ ಇದ್ದರೆ ನೀವು ರಾತ್ರೋರಾತ್ರಿ ಒಬ್ಬ ಹೀರೋನನ್ನು ತಯಾರಿಸಬಹುದು ಎಂಬ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಾತಿನಲ್ಲಿ ಹೆಚ್ಚು ಸತ್ಯವಿದೆ.

ಎರಡು ಸಲಹೆಗಳು...

ಹಾಗಿದ್ದರೆ ಇಂಡಿಯಾದ ಮಾಧ್ಯಮಗಳಲ್ಲಿ ದಲಿತರನ್ನು ಕಾಣುವುದು ಹೇಗೆ? ಎರಡು ಸಲಹೆಗಳಿವೆ. ಬಹುಶಃ ಇವು ಉತ್ತರವಾಗಲಾರವು; ಆದರೆ ಇವೆರಡು ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಬಹುದು. 1978ರಲ್ಲಿ ಸುದ್ದಿಮನೆಯೊಳಗಿನ ಭಿನ್ನತೆಯನ್ನು ಗಣತಿ ಮಾಡಲು ಅಮೆರಿಕನ್ ಸೊಸೈಟಿ ಆಫ್ ನ್ಯೂಸ್ ಎಡಿಟರ್ಸ್ (ASNE) ಎಂಬ ಸಂಸ್ಥೆಯೊಂದು ಸ್ಥಾಪನೆಯಾಯಿತು. ಅಮೆರಿಕಾದ ಒಟ್ಟು ಜನಸಂಖ್ಯೆಯಲ್ಲಿ ಕಪ್ಪು ವರ್ಣೀಯರು ಶೇಕಡಾ 30ರಷ್ಟಿದ್ದರೂ ಆ ವರ್ಷ ಶೇಕಡಾ 4ರಷ್ಟು ಕಪ್ಪು ವರ್ಣೀಯರು ಅಲ್ಲಿನ ಸುದ್ದಿಮನೆಗಳಲ್ಲಿ ಕೆಲಸ ಮಾಡುತ್ತಿದ್ದರು. 2000ದ ಹೊತ್ತಿಗೆ ಗುರಿ ಶೇಕಡಾ 20 ಮುಟ್ಟಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ಆ ಗುರಿ ಮುಟ್ಟಲಿಲ್ಲ. 2011ರಲ್ಲಿ ಅಮೆರಿಕಾದ ಅಲ್ಪಸಂಖ್ಯಾತರೆಂದು ಕರೆಸಿಕೊಳ್ಳುವ ಕಪ್ಪು ವರ್ಣೀಯರು ಶೇಕಡಾ 13ರಷ್ಟು ಹುದ್ದೆಗಳನ್ನು ಅಮೆರಿಕಾದ ಸುದ್ದಿಮನೆಗಳಲ್ಲಿ ಪಡೆದುಕೊಂಡಿದ್ದರು. ಈಗ ಅಮೆರಿಕಾದ ಒಟ್ಟು ಜನಸಂಖ್ಯೆಯಲ್ಲಿ ಅಲ್ಲಿನ ಶೋಷಿತರು ಶೇಕಡಾ 36ರಷ್ಟಿದ್ದಾರೆ. ಇದರಲ್ಲಿ ಆಫ್ರಿಕನ್-ಅಮೆರಿಕನ್, ಲ್ಯಾಟಿನೋಸ್, ನೇಟಿವ್ ಅಮೆರಿಕನ್ಸ್ ಮತ್ತು ಏಷ್ಯಾದವರು ಸೇರಿದ್ದಾರೆ. ಈಗ ASNE ತನ್ನ ಗುರಿಯನ್ನು 2020ಕ್ಕೆ ನಿಗದಿಪಡಿಸಿಕೊಂಡಿದೆ.

ಬಹುಶಃ ಈ ತರಹದ ಗುರಿ ನಿಗದಿಪಡಿಸುವ ವಿಚಾರಗಳು ಇಂಡಿಯಾದಲ್ಲಿ ಕಷ್ಟ. (ನೆನಪಿಡಿ, ಇಲ್ಲಿ ಗುರಿಯನ್ನು ಕುರಿತು ಮಾತನಾಡುತ್ತಿದ್ದೇನೆ, ಮೀಸಲಾತಿ ಅಥವಾ ಕೋಟಾ ಕುರಿತಾಗಲಿ ಅಲ್ಲ). ಇಂಡಿಯಾದಲ್ಲಿ ಜಾತಿ ಅನ್ನುವುದು ತುಂಬಾ ಸೂಕ್ಷ್ಮವಾದ ಸಂಗತಿ. ಈ ದೇಶಕ್ಕೆ ಈಗ ಒಂದು ಸಾಮಾಜಿಕ ಅಕೌಂಟೆಬಲಿಟಿ ನಡೆಸುವ ಸಂಸ್ಥೆಯೊಂದರ ಅಗತ್ಯವಿದೆ. ಇದಕ್ಕೆ ದೊಡ್ಡ ಸಂಸ್ಥೆಯ ಅಗತ್ಯವಿದೆ. ಇಂಡಿಯಾದ ಸುದ್ದಿಮನೆಗಳಲ್ಲಿನ ಭಿನ್ನತೆ ಅಂದರೆ ಇಲ್ಲಿರುವ ದಲಿತರು, ಮುಸ್ಲಿಮರು ಮತ್ತು ಮಹಿಳೆಯರ ಸಂಖ್ಯೆಗಳನ್ನು ಒಟ್ಟುಗೂಡಿಸಿ ಲೆಕ್ಕಹಾಕಬೇಕಿದೆ. ಅನೇಕ ಮಾಧ್ಯಮ ಸಂಸ್ಥೆಗಳು ಇದನ್ನು ಖಂಡಿತ ಒಪ್ಪಲಾರವು. ಬೇಕಿದ್ದರೆ ಜಾತಿವಾರು ಪತ್ರಕರ್ತರ ಮಾಹಿತಿ ನೀಡಿದ ಮತ್ತು ನೀಡದ ಮಾಧ್ಯಮ ಸಂಸ್ಥೆಗಳ ಕುರಿತು ಸಾಮಾಜಿಕ ಆಡಿಟಿಂಗ್ ನಡೆಯಲಿ.

ಪಿರಮಿಡ್ ಆಕಾರದಲ್ಲಿರುವ ಇಂಡಿಯಾದ ಸಮಾಜದೊಳಗೆ ನಿಧಾನವಾಗಿಯಾದರೂ ಮಧ್ಯಮ ವರ್ಗವೆಂಬುದು ಬೆಳೆಯುತ್ತಿದೆ. ಪಿರಮಿಡ್‌ನ ತಳದಲ್ಲಿರುವ ದಲಿತರಿಗೆ ಅವರ ಜಗತ್ತನ್ನು ಅವರದೇ ಕಣ್ಣಿನಿಂದ ಪ್ರಕಟಪಡಿಸಲು ಅಮೆರಿಕಾದ ಎಬೋನಿ, ಎಸ್ಸೆನ್ಸ್‌ನಂತಹ ಪತ್ರಿಕೆಗಳ ಅಗತ್ಯವಿದೆ. ಈ ಎರಡು ಪತ್ರಿಕೆಗಳು ಕಪ್ಪು ಅಮೆರಿಕಾದ ಯಶಸ್ಸಿನ ಮುಖವಾಣಿಯಾಗಿವೆ.

ನವಯಾನಗಳು ಬೇಕು...

ಭಾರತೀಯ ಮಾಧ್ಯಮಗಳು ದಲಿತರನ್ನು ಒಳಗೊಳ್ಳದ ಇದೇ ಸಂದರ್ಭದಲ್ಲಿ ದಲಿತಪರ ಕಾಳಜಿಯನ್ನು ಕೇಂದ್ರೀಕರಿಸಿ ನವಯಾನ ಪ್ರಕಾಶನ ಹೊರತರುತ್ತಿರುವ ಅನೇಕ ಪುಸ್ತಕಗಳ ಕುರಿತು ನಾವು ಗಂಭೀರವಾಗಿ ನೋಡಬೇಕಿದೆ. ಈ ತರಹದ ಪ್ರಕಾಶನ ಸಂಸ್ಥೆಗಳು ಮಧ್ಯಮ ವರ್ಗದ ದಲಿತರ ಆರ್ಥಿಕ ಬೆಂಬಲದಿಂದ ಟ್ರಸ್ಟ್‌ನಂತೆ ಬೆಳೆಯಬೇಕಾದ ಅನಿವಾರ್ಯವಿದೆ. ಆದರೂ ಇಂಥ ಸಂಸ್ಥೆ ಕಟ್ಟಲು ಬರೀ ದಲಿತರ ಹಣವೇ ಸಾಲದು. ತಳಸಮುದಾಯಗಳ ಕುರಿತು ನಿಜವಾದ ಪ್ರೀತಿ ಹೊಂದಿರುವ ಎಲ್ಲ ಜಾತಿ ಸಮುದಾಯಗಳಿಂದಲೂ ಹಣ ಸಂಗ್ರಹಿಸಿ, ಸಾಧ್ಯವಾದರೆ ಸರ್ಕಾರದಿಂದ ಹಣದ ಸೌಲಭ್ಯ ಸಿಗುವುದಾದರೆ ಅಲ್ಲಿಂದಲೂ ಪಡೆದು ಅದನ್ನು ಟ್ರಸ್ಟ್‌ನಲ್ಲಿ ಕಾರ್ಪಸ್ ರೂಪದಲ್ಲಿ ಸಂಗ್ರಹಿಸಿ ಇಡಬೇಕಿದೆ. ಹೀಗೆ ಕೂಡಿಟ್ಟ ಹಣದಿಂದ ಮಾತ್ರ ಪ್ರಕಾಶನದಂತಹ ದೊಡ್ಡ ಸಂಸ್ಥೆಗಳನ್ನು ಕಟ್ಟಲು ಸಾಧ್ಯ.

ಮುದ್ರಣ ಮಾಧ್ಯಮವಾಯಿತು. ಈ ಟಿ.ವಿ. ಮಾಧ್ಯಮಗಳ ಕತೆ ಏನು? 1967ರಲ್ಲಿ ನಾನು ಮೊದಲ ಸಲ ಭಾರತಕ್ಕೆ ಬಂದಿದ್ದೆ. ಆ ಸಂದರ್ಭದಲ್ಲಿ ಟಲಿವಿಷನ್ ಮಾಧ್ಯಮದ ಕುರಿತು ಪಶ್ಚಿಮ ಕೆನಡಾದ ಸಣ್ಣ ಪತ್ರಿಕೆಯೊಂದಕ್ಕೆ ಲೇಖನ ಬರೆದಿದ್ದೆ. ಅಷ್ಟೊತ್ತಿಗಾಗಲೇ ನಾನು ಕೆನಡಾ ಮತ್ತು ಅಮೆರಿಕಾದ ಅನೇಕ ಟಿ.ವಿ. ಕಾರ್ಯಕ್ರಮಗಳನ್ನು ನೋಡಿದ್ದೆ. ಆಗ ಕಪ್ಪು ಮುಖಗಳೇ ನನಗೆ ಟಿ.ವಿ.ಯಲ್ಲಿ ಕಾಣಲಿಲ್ಲ. 1970ರಲ್ಲಿ ನಾನು ಉತ್ತರ ಅಮೆರಿಕಾಗೆ ಹಿಂತಿರುಗಿದಾಗ ಫ್ಲಿಪ್ ವಿಲ್ಸನ್ ಎಂಬ ಆಫ್ರಿಕನ್-ಅಮೆರಿಕನ್ ಹಾಸ್ಯ ಕಲಾವಿದ ಟಿ.ವಿ. ಶೋಗಳಲ್ಲಿ ಬಹಳ ಜನಪ್ರಿಯನಾಗಿರುವುದನ್ನು ಕಂಡೆ. ಮುಂದೆ ಅಮೆರಿಕಾ ನೆಲದಲ್ಲೇ ಅನೇಕ ನಾಟಕೀಯ ಬೆಳವಣಿಗೆಗಳು ನಡೆದವು. ಕಪ್ಪು ಜನರನ್ನು ಟಿ.ವಿ.ಯಲ್ಲಿ ನೋಡುವುದಕ್ಕೆ ಸಾಧ್ಯವೇ ಇಲ್ಲ ಎಂದುಕೊಂಡಿದ್ದ ಅಮೆರಿಕಾ ದೇಶವೇ 38 ವರ್ಷಗಳ ನಂತರ ಕಪ್ಪು ಜನಾಂಗಕ್ಕೆ ಸೇರಿದ ಅಧ್ಯಕ್ಷನನ್ನು ಪಡೆಯಿತು.

ಇಂಡಿಯಾದ ಟಿ.ವಿ. ಚಾನಲ್‌ಗಳಲ್ಲಿ ದಲಿತರು ಯಾವುದಾದರೂ ಕಾರ್ಯಕ್ರಮದ ನಿರೂಪಕರಾಗಿ ಕ್ಯಾಮೆರಾದ ಮುಂದೆ ಕಾಣಿಸಿಕೊಂಡಿದ್ದಾರೆಯೇ? ನನ್ನ ಸಂಪರ್ಕದಲ್ಲಿದ್ದ ಅನೇಕರನ್ನು ವಿಚಾರಿಸಿದೆ. ಇಲ್ಲ ಎಂಬ ಉತ್ತರ ಬಂತು. ಮಾಧ್ಯಮಗಳು ದಲಿತರನ್ನು ಮುಟ್ಟಿಸಿಕೊಂಡ ದಿನ ಈ ದೇಶದಲ್ಲಿ ಬದಲಾವಣೆಯ ಗಾಳಿ ಬೀಸಿತೆಂದೇ ಅರ್ಥ.

ನನಗನ್ನಿಸುತ್ತಿದೆ ಆಫ್ರಿಕನ್-ಅಮೆರಿಕನ್ ಕಪ್ಪು ಜನ ತುಳಿದ ಕಷ್ಟದ ಹಾದಿಗಿಂತಲೂ ಇಂಡಿಯಾದಲ್ಲಿ ದಲಿತರ ಹಾದಿ ಕಡುಕಷ್ಟದಲ್ಲಿದೆ. ಇಲ್ಲಿ ಸಮಾನತೆ ಮತ್ತು ಭ್ರಾತೃತ್ವಗಳನ್ನು ಕಾಣುವುದು ಅಷ್ಟ ಸಲೀಸಲ್ಲ. ಇಲ್ಲಿ ಎಲ್ಲವೂ ಛಿದ್ರಗೊಂಡಿದೆ. ದಲಿತರಿಗೆ ಇಲ್ಲಿ ದಕ್ಕುವ ಸಂಪನ್ಮೂಲ ಕಮ್ಮಿಯಾದರೆ ತಾರತಮ್ಯ ಮುಗಿಲು ಮುಟ್ಟಿದೆ. ಸಂವಿಧಾನದ ಆಶಯಗಳು ಅಷ್ಟು ಸುಲಭವಾಗಿ ಜಾರಿಯಾಗಲಾರವೇನೋ. ಸಾಮಾಜಿಕ ನ್ಯಾಯದ ಮೇಲೆ ರಾಷ್ಟ್ರದ ಸ್ವ-ಹಿತಾಸಕ್ತಿಗಳು ನಿಂತರೆ ಮಾತ್ರ ಮಾಧ್ಯಮದಲ್ಲಿ ಸ್ವಲ್ಪ ಪ್ರಮಾಣದಲ್ಲಾದರೂ ದಲಿತರನ್ನು ನಾವೆಲ್ಲ ಕಾಣಬಹುದೇನೋ.

● ರಾಬಿನ್ ಜೆಫ್ರಿ
ಕನ್ನಡಕ್ಕೆ: ಕೆ.ಎಲ್.ಚಂದ್ರಶೇಖರ್ ಐಜೂರ್

(ರಾಬಿನ್ ಜೆಫ್ರಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪೂರ್‌ನ ದಕ್ಷಿಣ ಏಷ್ಯಾ ಅಧ್ಯಯನ ಸಂಸ್ಥೆ ಮತ್ತು ಏಷ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂದರ್ಶಕ ಸಂಶೋಧನಾ ಪ್ರಾಧ್ಯಾಪಕರಾಗಿದ್ದಾರೆ. ಈ ಲೇಖನ ಜೆಫ್ರಿಯವರು 31ನೇ ಮಾರ್ಚ್ 2012ರಂದು ನವದೆಹಲಿಯ ರಾಜೇಂದ್ರ ಮಾಥೂರ್ ನೆನಪಿನ ಕಾರ್ಯಕ್ರಮದಲ್ಲಿ ಮಂಡಿಸಿದ ಭಾಷಣದ ಬರಹರೂಪ)

ವಚನಗಳ ಶುದ್ಧೀಕರಣ: ಇನ್ನಷ್ಟು ವಿಚಾರಗಳ

ಡಾ. ರಂಜಾನ್ ದರ್ಗಾ ಅವರು ವಚನಗಳ ದೋಷಗಳ ನಿವಾರಣೆ ಕುರಿತು ಮಾಡಿದ ಚಿಂತನೆ ಅತ್ಯಂತ ಔಚಿತ್ಯಪೂರ್ಣವಾದುದು. ಲಿಂಗಾಯತ ಧರ್ಮ ಸಂಸ್ಕೃತಿಗಳ ಕುರಿತು ಏನೇ ಅಪಸ್ವರ-ಅಪಸವ್ಯಗಳು ಮೂಡಿದಾಗ ಬೇರೆ ಧರ್ಮೀಯ ವಿದ್ವಾಂಸರು ಅದಕ್ಕೆ ಪರಿಹಾರ ಕಂಡುಕೊಂಡಿರುವುದನ್ನು ಇತಿಹಾಸದುದ್ದಕ್ಕೂ ನಾವು ಗಮನಿಸುತ್ತ ಬಂದಿದ್ದೇವೆ. ಕಪಟರಾಳ ಕೃಷ್ಣರಾಯರು ಅನುಭವ ಮಂಟಪವೇ ಇರಲಿಲ್ಲವೆಂದು ವಾದಿಸಿದಾಗ, ಡಿ.ಎಲ್.ಎನ್. ಅವರು ಸಿದ್ಧರಾಮನು ವೀರಶೈವನೇ ಅಲ್ಲ ಎಂದು ಹೇಳಿದಾಗ ಅದಕ್ಕೆ ಯಾವೊಬ್ಬ ಲಿಂಗಾಯತ ವಿದ್ವಾಂಸನೂ ಪ್ರತಿಕ್ರಿಯೆ ನೀಡಲಿಲ್ಲ; ಅದಕ್ಕೆ ತಕ್ಕ ಉತ್ತರವನ್ನು ನೀಡಲಿಲ್ಲ. ಆದರೆ ಕ್ರೈಸ್ತ ಧರ್ಮದ ಧರ್ಮೋಪದೇಶಕರಾಗಿದ್ದ ರೆವರೆಂಡ್ ಉತ್ತಂಗಿ ಚನ್ನಪ್ಪನವರು 'ಅನುಭವ ಮಂಟಪದ ಐತಿಹಾಸಿಕತೆ' ಮತ್ತು 'ಸಿದ್ಧರಾಮನ ಸಾಹಿತ್ಯ ಸಂಗ್ರಹ' ಎಂಬ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಕಪಟರಾಳ ಕೃಷ್ಣರಾಯ ಮತ್ತು ಡಿ.ಎಲ್.ಎನ್. ಅವರುಗಳಿಗೆ ಸ್ಪಷ್ಟವಾದ ಉತ್ತರವನ್ನು ನೀಡಿದ್ದರು. ಆ ಉತ್ತರಗಳಿಂದ ಆ ಇಬ್ಬರೂ ಮಹಾವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿದ್ದಿಕೊಂಡಿದ್ದರು.

ಈಗ ಅಂತಹುದೇ ಮತ್ತೊಂದು ದುರಂತ ಎದುರಾಗಿದೆ. ಲಿಂಗಾಯತ ವಿದ್ವಾಂಸರು ಬಾಯಿ ಬಿಡದ ಪರಿಸ್ಥಿತಿಯಲ್ಲಿರುವಾಗ ರಂಜಾನ್ ದರ್ಗಾ ಅವರು ವಚನಗಳು ದೋಷಮುಕ್ತವಾಗಲಿ ಎಂಬ ಸದುದ್ದೇಶದಿಂದ ಲೇಖನವನ್ನು ಬರೆದಿದ್ದಾರೆ.

ನನ್ನ ಗಮನಕ್ಕೆ ಬಂದ ಕೆಲವು ವಚನದೋಷಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿರುವೆ. ಡಾ. ಎಸ್. ವಿದ್ಯಾಶಂಕರ ಅವರು ಸಂಪಾದಿಸಿದ ಜೇಡರ ದಾಸಿಮಯ್ಯನ ವಚನಗಳಲ್ಲಿ 740ನೇ ವಚನದ ಅರ್ಥವೇ ತಪ್ಪಾಗಿ ಹೋಗಿದೆ. ಆ ವಚನ ಹೀಗಿದೆ:



ಉರಿವ ತೃಣದ ಮೇಲೆ ಪುಣ್ಯವ ತಂದಿರಿಸಿದಡೆ
ಆ ತೃಣವನ್ನು ಆ ಕೆಂಡ ನುಂಗುವಂತೆ
ಗುರುಚರಣದ ಮೇಲೆ ತನುತೃಣವನಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ! ರಾಮನಾಥ.

ಇಲ್ಲಿ ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ ಎಂದಾಗಬೇಕು. ಆದರೆ ಪುಣ್ಯ ಎಂಬ ಶಬ್ದವನ್ನು ಸಂಪಾದಕರು ಯಾಕೆ ತಂದು ಹಾಕಿದ್ದಾರೋ ಇಡೀ ವಚನದ ಅರ್ಥವೇ ಅಪಾರ್ಥವಾಗುವಂತಿದೆ.

ಚನ್ನಬಸವಣ್ಣನ 211 ನೇ ವಚನ ಹೀಗಿದೆ:

ಅರಮನೆಯ ಕೂಳನಾದರೆಯೂ ತಂದು,
ಒಡಲ ಕುದಿಹಕ್ಕೆ ಲಿಂಗಾರ್ಪಿತವ ಮಾಡಿದರೆ
ಅದು ಲಿಂಗಾರ್ಪಿತವಹುದೆಳ ಅಲ್ಲ, ಅದು ಅನರ್ಪಿತ.

ಇಲ್ಲಿ 'ಅರ ಮನೆಯ ಕೂಳನಾದರೆಯೂ' ಎಂದಾಗಬೇಕು. ಇದೇ ರೀತಿ 938ನೇ ವಚನ 'ಅರಮನೆಯ ಕೂಳನಾದಡೆಯೂ' ಎಂಬ ವಚನವೂ ಕೂಡ 'ಅರ ಮನೆಯ' ಎಂದಾಗಬೇಕು.

ಅಂಬಿಗರ ಚೌಡಯ್ಯನವರ 271ನೇ ವಚನ ಹೀಗಿದೆ:

ಸರ್ವಾಂಗಲಿಂಗವಾದ ಶರಣನ ಕಾಯ
ಆವ ದೇಶದಲ್ಲಿ ಆಳಿದಡೇನು?
ಎಲ್ಲಿ ಆಳಿದಡೇನುರಿ ಉಳಿದಡೇನು?

ಈ ವಚನದಲ್ಲಿ ಆಳಿದಡೇನು ಎಂಬ ಶಬ್ದದ ಬದಲಾಗಿ 'ಅಳಿದಡೇನು' ಎಂಬ ಶಬ್ದವಿದ್ದರೆ ಅರ್ಥ ಸ್ಪಷ್ಟವಾಗುತ್ತದೆ.

ಡಾ.ಎಂ.ಎಂ.ಕಲಬುರ್ಗಿ ಅವರು ಸಂಪಾದಿಸಿದ ಬಸವಣ್ಣನವರ ವಚನಗಳಲ್ಲಿ ಅನೇಕ ತಪ್ಪುಗಳು ಉಳಿದಿವೆ. ನನ್ನ ಕಣ್ಣಿಗೆ ಬಿದ್ದ ಕೆಲವು ವಚನಗಳನ್ನು ಪಟ್ಟಿ ಮಾಡಿರುವೆ.

ಕ್ರ.	ವಚನ	ಅಶುದ್ಧ	ಶುದ್ಧ	ಆಕರ
1	1	ದೇವ....ಕನ್ನೆಯ	ದೇವರ ನಿಲುವು ಕನ್ನೆಯ	ಫ.ಗು.ಹ-1, ಕವಿವಿ-1
2	2	ಕಾಳಿಯ ಕಂಕಾಳ	ಕಾಳಿಂಗನ ಕಂಕಣ	ಕ.ವಿ.ವಿ.2 ಅ.ಟಿ.1.3.4
3.	7	ಭವಪಾಶವಾದ	ಭವಪಾಶಂಗಳಾದ	ಕ.ವಿ.ವಿ. ಅ.ಟಿ.12-73
4.	22	ಎಂದೊ (3)	ಎಂದೋ (3)	ಫ.ಗು.ಹ.ಪು.5
5.	31	ಜಲಗ(ಅಪೂರ್ಣ)	ಜಲಗರಲಿಂಗವನೆನೆಯ ಲೊಲ್ಲದ ಹಡಿಕೆಗೆ ಹರಿತ ಸೊಣಗನಂತೆ ಪೂರ್ಣ	ಕ.ವಿ.ವಿ. ಅ.ಟಿ.31, ಫ.ಗು.ಹ.ಪು.6-25 ವಚನ
6.	64	ತರುಮರನಿಲ್ಲದ	ತರುಮರನಿಲ್ಲವೆ	
7.	65	ಎನ್ನನೇತಕೊಲ್ಲೆ	ಎನ್ನತೇಕ್ಕೊಲ್ಲೆ	
8.	83	ರುಣ	ಗಣ	ಕ.ವಿ.ವಿ. 83
9	96	ಪಥ	ಸತ್ಪಥ	ಕವಿವಿ 96 ಎಲ್.ಬಿ. 97
10.	98	ಅಪೂರ್ಣ- ಉಪಮಾನಗಳು ಮಾತ್ರ ಅಂತ್ಯವಿಲ್ಲ	ಶರಣರ ಸನ್ನಿಧಿಯಲ್ಲಿ ಮಾನವನಿದ್ದಡೇನು ಶಿವಭಕ್ತನಾಗಬಲ್ಲನೆ?	ಕವಿವಿ 96 ಎಲ್.ಬಿ. 97 ಪೂರ್ಣ ಕ.ವಿ.ವಿ. 98 ಅ.ಟಿ.15-16 ಎಲ್.ಬಿ.99
11	157	ಕರ್ತುೞ	ಕರ್ತೃ	
12	161	ನರೆ	ನೆರೆ	
13	189	ಕೊನೆ	ಗೊನೆ	
14	202	ಲೊಟೆಯ	ಲೊಟ್ಟೆಯ	
15	283	ನಲ್ಲದಾನು	ನಲ್ಲವಲ್ಲನಾನು	ಕ.ವಿ.ವಿ. 282 ಅ.ಟಿ.1-2
16	399	ರೂಡೀಶ್ವರ	ರೂಢಿಗೀಶ್ವರ	ಎಲ್.ಬಿ. 400
17	405	ಮೆಯ ಬಂದ	ಮೈ ಮೈ ಯ್ಬಂದು	ಕ.ವಿ.ವಿ. 404
18.	406	ರೊಳರೆ	ರೊಳರೇ	
19.	401	ಕನಿಷ್ಠ	ಕನಿಷ್ಠ	ಕ.ವಿ.ವಿ. 400
20	411	ಬೇಗೆಸರಿಯ	ಬೇಗೆಯಸರಿಯ	
21.	417	ಹಾಲ	ಹಾಲು	
22	435	ತೋರಿ (2 ಸಲ)	ತೋರಿ (2	ಕ.ವಿ.ವಿ. 434
23	418	ಆಚಾರವರಿಯಿರಿ	ಆಚಾರವನರಿಯಿರಿ	ಕ.ವಿ.ವಿ. 417
24.	439	ಆವನೇವ-ಹೇಮ	ಆವನಾವ-ಹೇಪಿ	ಕ.ಪಿ.ಪಿ. 438
25	453	ಪುರಾತ	ಪುರಾತನ	ಕ.ಪಿ.ಪಿ. 452
26	450	ಸಂಗದಲ್ಲಿರಿಸಯ್ಯ	ಸಂಗದಲ್ಲಿರಿಸದಿರಯ್ಯಾ	ಕ.ಪಿ.ಪಿ. 449
27.	465	ಕಿಂಕರನು	ಕಿಂಇಲದಿಂದ	ಕ.ಪಿ.ಪಿ. 465 ಅ.ಟಿ.
28.	467	ವಂಗಯ್ಯಾ	ವಂಗೇಕಯ್ಯಾ	ಕ.ವಿ.ವಿ. 466 ಅ.ಟಿ. 1-2
29.	472	ಶರಣಯ್ಯಾ	ಶರಣರಯ್ಯಾ	ಕ.ವಿ.ವಿ. 471
30	474	ಪ್ರಸಾದವ	ಪ್ರಸಾದದ ನಿಲವ ಕೊನೆ- ನಿಮ್ಮ ಧರ್ಮ	ಕ.ವಿ.ವಿ. 473
31	483	ಧರ್ಮಿ	ಸದ್ಧರ್ಮಿ	ಸಂ.1 ಬ- 483,
32	490	ಎನ್ನುವ	ಅನ್ನುವ	ಕ.ವಿ.ವಿ. 489 ಅ.ಟಿ. 3-4
33	489	ಲಿಂಗಧ್ಯಾನವೆನ್ನಮನ	ಲಿಂಗವಂ ಧ್ಯಾನಿಸಿ ಮನ ಮುಟ್ಟಿ ಕೊ- ಅಂತಾಗಿಸೆನ್ನ ಮನವೆ	ಕ.ವಿ.ವಿ. 488
34	495	ತನ್ನ (3ನೇ ಸಾಲು	ತನ್ನಲ್ಲಿ	ಕ.ವಿ.ವಿ.494 ಅ.ಟಿ.2-3
35	496	ಚಿತ್ರವು (3 ಸಾಲು	ಭಾವವು	ಕವಿವಿ 494 ಅ.ಟಿ. 1
36	506	ಅನುಶ್ರತ	ಅನುಶ್ರುತ	ಸಂ.1-ಬ 506
37	545	ನರುಗ- ರೊ	ನರುಗ-ರೆ	ಸಂ.1-ಬ 545
38	552	ಮರೆಯಲಾಗದು (3 ಸಲ) ಲಹುದು	ಮರೆಯಲಾಗದೆ ಲಹುದೇ	ಫ.ಗು.ಹ. 26 ಪು.42 ಕ.ವಿ 551, ಎಲ್.ಬಿ. 553
39	558	ಯೋಗ	ಪೋಗ	ಎಲ್.ಬಿ. 559
40	575	ತಿಂಬ	ತಿಂದ	ಎಲ್.ಬಿ. 576
41	575	ಹೋತನು	ಹೋತನ	ಕ.ವಿ.ವಿ. 576
42	579	ಅರಳೆಯ	ಅರಳಿಯ ಮರನ	ಕ.ವಿ.ವಿ. 578 ಅ.ಟಿ. 1 ಎಲ್.ಬಿ. 580
43	582	ಬಂಧತ್ತೊ	ಒಂದುತ್ತೊ	ಕ.ವಿ.ವಿ. 581 ಅ.ಟಿ. 56, ಎಲ್.ಬಿ. 583
44	585	ದೂಳ	ಧೂಳ	ಎಲ್.ಬಿ. 586
45	586	ವಿಪ್ರರು	ಹೊನಲಲ್ಲಿ	ವಿಪ್ರರು ಹೋಮದ ಹೊನಲ ಎಲ್.ಬಿ. 587
46	587	ಗರ್ದಭಾ	ಗಾರ್ದಭಾಃ	ಎಲ್.ಬಿ. 588
47	591	ಕೊಲುವನೇ	ಕೊಲುವವನೇ	ಎಲ್.ಬಿ. 605, ಕ.ವಿ.ವಿ.
47	623	ನಿಮ್ಮ ಶರಣರ	ಅಯ್ಯಾ ನಿಮ್ಮ ಶರಣರ	603 ಅ.ಟಿ.1-2
48.	606	ವಾರಣಾಸಿ	ಕುಲಜನು	ಕ.ವಿ.ವಿ. 604 ಅ.ಟಿ. 2-3
49	616	ಗೊಂಡನು	ಗೊಂಡವ	
50	623	ಬಾಲಿ-ಕರ್ತುೞ	ವಾಲಿ-ಕರ್ತೃ	
51	633	ಸುಂಡಿಲು-ವೀರ ನುಳಿಯಲದೇನು	ಸೊಂಡಿಲು-ಯೆ ಕಲಿತನವೇನು	ಎಲ್.ಬಿ. 634
52	646	ನಯ್ಯಾ	ವಯ್ಯಾ	
53	688	ದುಪ್ಪೋ	ದಯ್ಯಾ	ಕ.ವಿ.ವಿ. 687 ಅ.ಟಿ. 7-8
54	695	ಕರ್ತುೞ	ಕರ್ತೃ	
55	700	ಅಂಕದೊಡನೆ	ಕಳನೊಳು	ಕ.ವಿ.ವಿ. 699 ಅ.ಟಿ. 1-2
56	751	ನೀಡುಂಡುಟ್ಟ	ನೀಡುಂಡುಟ್ಟು	
57	757	ಜಿವ್ವೆ	ಜಿಹ್ವೆ	
58	788	ಸಲಹುತ್ತಿಯಯ್ಯ	ಸಲಹುತಿಪ್ಪೆಯಯ್ಯ	ಕ.ವಿ.ವಿ. 787
59	793	ಉರೆ	ಉರ=ಎದೆ, ಉರಿ=ಬೆಂಕಿ	ಎಲ್.ಬಿ. 795 ಶಂಕರದೇವರು- ಉರಿ

ಫ.ಗು.ಹ=ಫ.ಗು.ಹಳಕಟ್ಟಿ, ಕ.ವಿ.ವಿ.=ಆರ್.ಸಿ. ಹಿರೇಮಠ, ಎಲ್.ಬಿ= ಎಲ್.ಬಸವರಾಜು ಈ ಮೂರು ಶುದ್ಧ ನಂಬಲರ್ಹ.

ಡಾ. ಕಲಬುರ್ಗಿ ಅವರು ಕೊಟ್ಟಿರುವ ವಚನಗಳ ಅಕಾರಾದಿ ತಪ್ಪುಗಳ ಸರಮಾಲೆಯನ್ನೇ ಹೊಂದಿದೆ. ಅಕಾ ನೋಡಿ ವಚನಗಳನ್ನು ಹುಡುಕ ಹೋಗುವವರಿಗೆ ನಿರಾಶೆಯಾಗುವುದು ಖಂಡಿತ. ವಚನಗಳ ಸಂಖ್ಯೆಗಳೇ ಅ ಬದಲಾಗಿವೆ.

ಅವುಗಳನ್ನು ಕೆಳಗೆ ಕಾಣಿಸಲಾಗಿದೆ.

ವಚನ ಅಕಾರಾದಿ	ತಪ್ಪಾದ ಸಂಖ್ಯೆ	ಸರಿಯಾದ ಸಂ
'ಅಯ್ಯಾ ನಿಮ್ಮ ಅನುಭಾವದಿಂದ'	519	50
ಅವರಿವರೆನ್ನದೆ ಚರಣಕ್ಕೆರಗಲು	257	25
ಉಪ್ಪರಗುಡಿ ನಂದಿವಾಹನ	521	52
ಉಮಾಧಿನಾಥರು ಕೋಟಿ	929	92
ಎನ್ನ ಭಕ್ತನೆಂದೆಂಬರು	630	30
ಏನನೋದಿ ಏನ ಕೇಳಿ	296	29
ಒಪ್ಪವ ನುಡಿವಿರಯ್ಯಾ ತುಪ್ಪವ	276	77
ಒಬ್ಬ ಕೆಂಚನೊಬ್ಬ ಕರಿಕನೊಬ	452	54
ಕಾಮವ ತೊರೆದಾತ ಹೇಮವ ಜರೆ	358	35
ಗುರುವಚನವಲ್ಲದೆ ಲಿಂಗವೆಂದೆನಿಸದು	62	7

ದೊಂದು ಹೊತ್ತಗೆ ಬೆಸಕನ	755	751
ಕೂರ್ಮನಾಗಮೇದಿನಿ	453	534
ಗೆ ಮುನಿವವರಿಗೆ ತಾ ಮುನಿಯ	249	248
ತ್ತಂಗೆ ಲಕ್ಷಣವೇಕಯ್ಯಾ	468	467
ತ್ತಂಗೇಕೆ ಲಕ್ಷಣ	469	468
ಮ ಭಕ್ತ ನಾನು ಪ್ರಸಾದಿ	359	593
ನಂಬೊ ನೆರೆ ನಂಬೊ	194	149
ನಾಗಿ ಲಿಂಗಜಂಗಮ	158	185
ತ್ತಂಗೆ ವಾಕ್ಪರುಷ	875	876
ಂಗೈ ಕಂಕಣಕ್ಕೆ	38	31
ತ್ತು ಉದಕದಲಾಗದು	809	807
ನ್ನಿನ ಜನ್ಮದಲ್ಲಿ ಗುರುಲಿಂಗ	133	833
ಗೆ ಕಾಹ ಹೇಳುವರಲ್ಲದೆ	820	811
ಷ್ಟು ಬಲ್ಲಿದನೆಂಬೆನೆ	51	551
ಚಿಂತೆ ಶಿವಜ್ಞಾನವಿಲ್ಲದ	564	156
ಭಕ್ತರೇ ಅಧಿಕರು ನೋಡಯ್ಯಾ	391	394
ಬದಾನವ ತಂದು ನೀಡುವೆನಲ್ಲದೆ	789	783

ಷ್ಟು ತಪ್ಪುಗಳಲ್ಲದೆ ಮುಖ್ಯವಾಗಿ- ಮನಕ್ಕೆ ಮನವೊಂದಾಗಿ 691 ಮತ್ತು ಮನೆಯೊಳಗೆ ಮನೆಯೊಡೆಯನಿದ್ದಾನೊ 97 ಈ ಎರಡು ವಚನದ ಪ್ರಾರಂಭದ ಸಾಲುಗಳೇ ಇಲ್ಲ.

ಸಂಪುಟದಲ್ಲಿರುವ 267ನೇ ವಚನ ಡಾ. ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಆರ್.ಸಿ.ಹಿರೇಮಠ ಇವರ ಸಂಪುಟದಲ್ಲಿಯೂ ಇಲ್ಲ. ವಚನದ ಅರ್ಥವೂ ಅಸ್ಪಷ್ಟವಾಗಿದೆ. ಹೀಗಾಗಿ ಹೆಚ್ಚಿನ ವಚನಗಳಲ್ಲಿ ಇದನ್ನು ಕಾಗಿತ್ತು. ಆದರೆ ಸಂಪಾದಕರಿಗೆ ಹಿಂದಿನ ಪೂರ್ವಸೂರಿಗಳಿಗಿಂತ ಹೆಚ್ಚಿನ ವಚನಗಳನ್ನು ನಾನು ಸಂಪಾದಿಸಿದೆ ತೋರಿಸಬೇಕೆಂಬ ತೆವಲಿನಿಂದ ಈ ವಚನವೊಂದನ್ನು ಸೇರಿಸಿದ್ದಾರೆ ಎಂದು ಎನಿಸುತ್ತದೆ. ಪ್ರಧಾನ ಸಂಪಾದಕರ ಸಂಪುಟದಲ್ಲಿಯೇ ಇಷ್ಟು ತಪ್ಪುಗಳು ಹೇರಳವಾಗಿರುವ ಉಳಿದ ಸಂಪಾದಕ ಬೇಜವಾಬ್ದಾರಿ ಹೇಳತೀರದು. ಹಿರೇಮಠ, ವಿದ್ಯಾಶಂಕರ, ವೀರಣ್ಣ ರಾಜೂರ ಅವರ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಷ್ಕರಿಸಿ ಸಬೇಕಾದ ಅನಿವಾರ್ಯತೆ ಇದೆ. ಡಾ.ಆರ್.ಸಿ.ಹಿರೇಮಠ ಅವರು ಕೊಟ್ಟಂತೆ ಪಾಠಾಂತಾರಗಳನ್ನು ಕೊಟ್ಟಿದ್ದರೆ ರ್ಣಯವನ್ನಾದರೂ ಮಾಡಬಹುದಾಗಿತ್ತು, ಆದರೆ ಜನಪ್ರಿಯ ಆವೃತ್ತಿಯ ನೆಪದಲ್ಲಿ ಅದನ್ನು ಕೈಬಿಡಲಾಗಿದ್ದು ಲಿಯು.

ಟ್ಟೋ ವಚನಗಳ ಅಂಕಿತ ಪಲ್ಲಟವಾಗಿವೆ. ಬಸವಣ್ಣನವರ ಜನಪ್ರಿಯ ವಚನಗಳಲ್ಲಿ ಒಂದಾದ

ಮನ ಬಳಲಿಸಿ ಗಳಿಸಿ ತಂದು

ಕೃತ್ಯ ಕಾಯಕ ಮಾಡುವ

ಕ್ತರ ಪಾದವ ತೋರಯ್ಯ

ಡಲ ಸಂಗಮ ದೇವ ಎಂಬ ವಚನವೇ ಕಣ್ಮರೆಯಾಗಿದೆ. ಈ ವಚನ ಫ.ಗು.ಹಳಕಟ್ಟಿಯವರ ವಚನಶಾಸ್ತ್ರ ಸಾರ ದಲ್ಲಿ ಪ್ರಕಟವಾಗಿದೆ.

.ಎಸ್.ಆರ್.ಗುಂಜಾಳ ಅವರು ವಚನ ಸಂಪಾದಕರಿಗೊಂದು ಕಿವಿ ಮಾತು, ವಚನಗಳ ಅನುವಾದಕರಿಗೆ ತು ಎಂಬ ಎರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಹಾಗೆಯೇ ಡಾ.ರಂಜಾನ್ ದರ್ಗಾ ಅವರು ಬರೆದ ಲಂಕೇಶ ಲ್ಲಿ ಪ್ರಕಟವಾದ ಲೇಖನಗಳು ನಮಗೆ ಮಾರ್ಗದರ್ಶಿಯಾಗಿವೆ. ಈ ಹಿನ್ನೆಲೆಯಲ್ಲಿ ಒಂದು ವಚನ ಶುದ್ಧೀಕರಣ ಸ್ಥಾಪನೆಯಾಗಬೇಕು. ವಚನಗಳ ಶುದ್ಧಿಕರಣದ ಜೊತೆಗೆ ಪ್ರಕ್ಷಿಪ್ತ ವಚನಗಳನ್ನು ಬೇರೆಯಾಗಿ ಪ್ರಕಟಿಸುವ ಮಾಡಬೇಕು. ಕೆಲವು ವಚನಗಳು ವಚನಕಾರರ ವ್ಯಕ್ತಿತ್ವಕ್ಕೆ, ಶರಣ ಸಿದ್ಧಾಂತಕ್ಕೆ ಮುಜುಗರವನ್ನುಂಟುಮಾಡುತ್ತವೆ. ವಚನಗಳನ್ನು ಕೈಬಿಟ್ಟು ಶಾಸ್ತ್ರಶುದ್ಧವಾದ ವಚನಗಳ ಸಂಪಾದನೆ ಜರುಗಬೇಕಾದ ಅನಿವಾರ್ಯತೆ ಇದೆ.

■ ಪ್ರಕಾಶ ಗಿರಿಮಲ್ಲನವರ,

ವಚನ ಅಧ್ಯಯನ ಕೇಂದ್ರ, ಶಿವಬಸವನಗರ, ಬೆಳಗಾವಿ

ಹಳ್ಳಿ ಹುಡುಗನ ಸಾಧನೆ

ಇವಳು ನನ್ನ ತಂಗಿ ಸರೋಜ (ಈಗ ಸಂಧ್ಯಾ ಅಂತಲೂ ಕರೀತಾರೆ). ಪಕ್ಕದಲ್ಲಿರುವವನು ತಂಗಿಯ ಮಗ ನ. ಸರೋಜ ಹೊಸನಗರ ತಾಲ್ಲೂಕು ಹುಂಚ ಸಮೀಪದ ಆನೆಗದ್ದೆ ಎಂಬ ಪುಟ್ಟ ಹಳ್ಳಿಯ ಸರ್ಕಾರಿ ಲ್ಲಿ ಬಿಸಿ ಊಟದ ತಯಾರಿಕೆಯ ಕೆಲಸ ನಿರ್ವಹಿಸುತ್ತಿದ್ದಾಳೆ.

ಭಾವ ಸತೀಶ್ ಹೆಗಡೆ ಯಕ್ಷಗಾನ ಕಲಾವಿದರು. ಅವರು ಮಳೆಗಾಲ ಮುಗಿಯುತ್ತಿದ್ದಂತೆ ಯಕ್ಷಗಾನಕ್ಕಾಗಿ ಳಿದರೆ ಮತ್ತೆ ಘಟ್ಟ ಹತ್ತಿಬಂದು ಕಾಯಮ್ಮಾಗಿ ಮನೆಯಲ್ಲಿ ನೆಲೆಯೂರುವುದು ಮಳೆ ಬಿದ್ದ ಮೇಲೆಯೆ. ಷ್ಟು ಗದ್ದೆ, ತೋಟವೆನ್ನಲಾಗದಷ್ಟು ಅಡಿಕೆ ಮರಗಳಿರುವ ಇವರಿಗೆ ಬಿಸಿಯೂಟ ತಯಾರಿಕೆ, ಯಕ್ಷಗಾನ ಹವ್ಯಾಸದ ಕೆಲಸಗಳಲ್ಲ, ಇವರ ಮನೆಗೆ ಕರೆಂಟು ಬಂದಿದ್ದೂ ಮೊನ್ನೆ ಮೊನ್ನೆ.



ಸುದರ್ಶನನನ್ನು ಗಾಜನೂರಿನ ಮೊರಾರ್ಜಿ ದೇಸಾಯಿ ಶಾಲೆಗೆ ಸೇರಿಸಿದ್ದೂ ಕುಟುಂಬದ ಮೇಲಿನ ಹೊರೆಯನ್ನು ಕೊಂಚ ಕಡಿಮೆ ಮಾಡಿಕೊಳ್ಳಲಿಕ್ಕೆಯೇ.

ಈಗ ಸುದರ್ಶನ ಅಮ್ಮ ಅಪ್ಪರ ಮುಖದಲ್ಲಿ ಖುಷಿಯ ನಗೆ ತುಳುಕಿಸಿದ್ದಾನೆ.

ಇತ್ತೀಚೆಗೆ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆತ ಗಳಿಸಿದ್ದು ಬರೋಬ್ಬರಿ 575 ಅಂಕ ಕನ್ನಡದಲ್ಲಿ 125 ಕ್ಕೆ 121, ಇಂಗ್ಲಿಷ್‌ನಲ್ಲಿ ನೂರಕ್ಕೆ 95, ಹಿಂದಿಯಲ್ಲಿ 95, ಸಮಾಜದಲ್ಲಿ 94, 92. ವಿಜ್ಞಾನದಲ್ಲಿ ಬರೋ 78 ಬಂದಿದೆ. ಸಂತೋಷದ ಸಂಗತಿಯೆಂದರೆ ಈತ ಕನ್ನಡ ಮಾಧ್ಯಮದಲ್ಲಿ ಈ ಸಾಧನೆ ಮಾಡಿದ್ದಾನೆ.


ಬೆರಡು ತಿಂಗಳುಗಳ ಹಿಂದೆ ಕಿರಿಯ ಮಿತ್ರ ಅಲ್ತಾಫ್ ಇವರ ಮನೆಗೆ ಹೋದಾಗ ಆತನ ಕ್ಯಾಮರಾಕ್ಕೆ ... ಮುಕ್ಕಾ ಮಗ ದಸಾತ. ಅಷ್ಟ ದಕ್ಷಿಣ ಕನ್ನಡದ ಯಾವುದೋ ರಂಗಸ್ಥಳದಲಿ ಗೆಜ್ಜೆ ಕಟ್ಟುತ್ತಿದ್ದರು!

■ ಸಜ್ಞಾಶಂಕರ್ ಹರಳಿಮಠ

ಗಣೇಶನಿಗೆ ಚುನಾವಣೆ ಬಿಸಿ

ಗಣೇಶ ಗೊತ್ತಲ್ಲಾ..... ಯಾವ ಗಣೇಶ ಅಂದಿರಾ..... ಈ ಸೀಸನ್ನಿನಲ್ಲಿ ಚಲಾವಣೆಯಲ್ಲಿರೋನು ಅವನೊಬ್ಬನೇ, ಅದೇ ವಿಘ್ನೇಶ್ವರ ಸನ್ ಆಫ್ ಪಾರ್ವತಿ. ಅವನಿಗೂ ಚುನಾವಣೆ ರುಚಿ ಅಂಟಿತಾ ಎಂದೇನೂ ಚಿಂತಿಸಬೇಕಿಲ್ಲ, ಇದು ಬೇರೆ ರೀತಿಯ ಕತೆ.

ಪ್ರತಿವರ್ಷದಂತೆ ಈ ವರ್ಷವೂ ಅವನು ಗಣೇಶ ಚತುರ್ಥಿಯ ದಿವಸ ಬರ್ತಾನೆ. ಕಾಯಿ ಕಡುಬು ತಿಂದು ಹೋಗ್ತಾನೆ ಅನ್ನಬೇಡಿ. ಅವನಿಗೆ ಅಪಾರ ಗೌರವ ಸಿಗುತ್ತಿದ್ದುದು ಮಹಾರಾಷ್ಟ್ರದಲ್ಲಿ, ಅವರೇ ತಾನೆ ಮನೆಯೊಳಗೆ ಇದ್ದ ಗಣಪತೀನ ಬೀದಿಗೆ ತಂದೋರು. ಅವನ ಉತ್ಸವವನ್ನ ಅವರು ಪ್ರತಿವರ್ಷ ಅದ್ದೂರಿಯಾಗಿ ನೆರವೇರಿಸುತ್ತಿದ್ದರು. ಅದಕ್ಕೆ ಅಂತಾನೆ ಮುಂಬಯಿಯಲ್ಲಿ ಸಾರ್ವಜನಿಕ್ ಗಣೇಶೋತ್ಸವ್ ಸಮಿತಿ ಅಂತ ಒಂದು ಸಮಿತೀನೆ ಇದೆ. ಸಾವಿರಾರು ಭಕ್ತರು ಈ ಸಮಿತಿಯ ಸದಸ್ಯರಾಗಿದ್ದಾರೆ. ಧಾಂಧೂಂ ಅಂತ ವೈಭವೋಪೇತವಾಗಿ ಗಣೇಶೋತ್ಸವ ಮಾಡುತ್ತಿದ್ದರಲ್ಲ, ಕೋಟ್ಯಂತರ ರೂಪಾಯಿ ಸಮಾಚಾರ ಅಲ್ಲವಾ, ಸಮಿತಿಯ ಸದಸ್ಯರೇ ಇದೆಲ್ಲವನ್ನೂ ಭರಿಸುತ್ತಿದ್ದರಾ ಎಂದು ಹಣದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ, ಇಂತಹ ಸಮಿತಿಗಳು ಮಾಡುವ ಯಾವ ಆರಾಧನೋತ್ಸವದಲ್ಲೂ ಎದ್ದು ಓಡಾಡುವ ಯಾರೂ ತಮ್ಮ ಜೇಬಿಗೆ ಕೈಹಾಕುವ



ಮಂದಿ ಅಲ್ಲ, ಅವರಿವರ ಜೇಬಿನ ಮೇಲೇ ಅವರ ಕಣ್ಣು ಇರುತ್ತದೆ. ಪ್ರಾಯೋಜಕರನ್ನು ಹುಡುಕುತ್ತಾರೆ. ಇದಕ್ಕೆ ಕಾಯಂ ಪ್ರಾಯೋಜಕರು ಎಂದರೆ ರಾಜಕಾರಣಿಗಳು. ಮತದಾರ ಮಹಾಪ್ರಭು ಬಂದು ಕೇಳಿದಾಗ ಸಾಧ್ಯವಿಲ್ಲ ಎನ್ನುವ ಹಾಗಿಲ್ಲ, ಸಾವಿರಾರು ಓಟಿನ ಸಮಾಚಾರ. ಬಹುಪಾಲು ಖರ್ಚನ್ನು ವಹಿಸಿಕೊಂಡು ವೋಟ್ ಬ್ಯಾಂಕ್ ಭದ್ರಪಡಿಸಿಕೊಳ್ಳುತ್ತಾರೆ.

ಇದು ಲಾಗಾಯ್ತಿನಿಂದ ಬಂದಿದ್ದ ಪದ್ಧತಿ. ಈ ವರ್ಷ ನೋಡಿ. ಗಣೇಶ ಈ ತಿಂಗಳ 29ನೇ ತಾರೀಖು ಬರ್ತಾನೆ. ಅವನನ್ನು ಧಾಂಧೂಂ ಆಗಿ ಸೆಪ್ಟೆಂಬರ್ ಎಂಟರವರೆವಿಗೆ ಮೆರೆಸಬೇಕೆಂಬುದು ಭಕ್ತರ ಅಪೇಕ್ಷೆ. ಹಣ ಬಿಚ್ಚೊ ಮಹಾಪ್ರಭುವನ್ನು ಕೇಳಿದರೆ ಅದ್ದೂರಿಗಿದ್ದೂರಿ ಏನೂ ಬ್ಯಾಡ ಹೆಂಗೋ ಹಬ್ಬ ಅಂತ ಒಂದು ಮಾಡಿ ಮುಗಿಸ್ಬಿಡಿ ಅಂತಾರಂತೆ! ಅಲ್ಲಾ ಚುನಾವಣೆ ಬಂದು ಹೊಸಲಿನ ಮೇಲೆ ನಿಂತಿದೆ. ಇಂತಹ ಸಮಯದಲ್ಲಿ ಅದೂ ಭಕ್ತರೇ ಮತ ಬ್ಯಾಂಕಾಗಿರುವಾಗ ಕೇಳಿದ್ದಕ್ಕಿಂತಲೂ ಹೆಚ್ಚೇ ಹಣ ನೀಡಿ ಅವರ ಮನಸ್ಸಂತೋಷಪಡಿಸಬೇಕು. ಇಲ್ಲಿ ನೋಡಿದರೆ ಈ ಆಸಾಮಿ ಹಿಂಗೆ ತಾರಮ್ಮಯ್ಯ ಆಡುತ್ತಿದ್ದಾನಲ್ಲ ಯಾರೂ ಗತಿ ಇಲ್ಲದ ದೇವರ ಬರಮಾಡಿಕೊಳ್ಳುವ ಹಾಗೆ ಗಣೇಶನನ್ನು ಬರ ಮಾಡಿಕೊಳ್ಳುವುದೇ ಎಂದೆಲ್ಲ ಭಕ್ತರು ಕೋಪ ಗೊಂಡಿದ್ದಾರಂತೆ. ರಾಜಕಾರಣಿಗಳ ಕಷ್ಟಾನೂ ಸ್ವಲ್ಪ ಅರ್ಥಮಾಡಿಕೊಳ್ಳಿ. ಕಾಂಗ್ರೆಸ್ಸಿನ ಅಧ್ವಾನದ ಆಡಳಿತದಿಂದ ರಾಜ್ಯದ ಜನತೆ ಬೇಸತ್ತಿದೆ. ಮೋದಿ ಅಲೆ ಇದೆ. ಚುನಾವಣೇಲಿ ಹೇಗೋ ತೂರಿಕೋಬಹುದು. ಹಬ್ಬದ ಸಮಯದಲ್ಲಿ ನೀತಿಸಂಹಿತೆ ಜಾರಿಗೆ ಬರುವ ಸಂಭವ ಇದೆಯಂತೆ. ಭಾರೀ ಹಣ ನೀಡಿದರೆ ಆಯೋಗ ಅದನ್ನು ಚುನಾವಣೆ ಖರ್ಚಿನ ಲೆಕ್ಕಕ್ಕೆ ಜಮಾ ಮಾಡಿದರೂ ಮಾಡಿ ಸಿಕ್ಕಿರೋ ಅವಕಾಶನೂ ಕಿತ್ತುಕೊಂಡೀತು ಎಂಬ ಆತಂಕದಿಂದ ಹೀಗೆ ಮಾಡುವುದು ಅನಿವಾರ್ಯವೇ ಆಗಿದೆಯಂತೆ. ಅಯ್ಯೋ ಪಾಪ.....

ಧರ್ಮವೇ ಎಲ್ಲ ವಿಜ್ಞಾನವೇ ಇಲ್ಲ

ಮಾನಮರ್ಯಾದೆಯಿಂದ ಬದುಕಬೇಕಾದರೆ ದೊಡ್ಡವರ ಹಿತವಚನಗಳನ್ನು ಪಾಲಿಸಬೇಕು. ದೊಡ್ಡವರು ಅಂದರೆ ಯಾರು ಎಂಬ ಪ್ರಶ್ನೆ ಬರಬಹುದು. ಎಲ್ಲರಿಗೂ ತಿಳಿದಿರುವಂತೆ ಹಿರಿಯರು. ಅವರಿಗಿಂತಲೂ ದೊಡ್ಡವರು ಎಂದರೆ ಕಲಿತವರು. ಅವರಲ್ಲೂ ಹಂತಗಳಿವೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಎಂದರೆ ಹಿತವಚನ ಹೇಳುವ ಪ್ರಥಮ. ಬುದ್ಧಿಮತ್ತೆ, ಅನುಭವ ಇರುವವರು ಅಂತಹವರಲ್ಲಿ ಒಬ್ಬರು ಎ.ಆರ್. ದಾವೆ ಅವರು.

ಇತ್ತೀಚೆಗೆ ನೈತಿಕತೆ ಅನ್ನೋದು ಪಾತಾಳ ಸೇರಿದೆ ಅನ್ನೋದು ಸರ್ವರಿಗೂ ತಿಳಿದ ಸಂಗತಿ. ಅದನ್ನು ಪಾತಾಳ ದಿಂದ ಭೂಮಿಗೆ ಎತ್ತಿ ತರಬೇಕು ಅನ್ನುವುದರಲ್ಲಿ ದಾವೆ ಅವರಿಗೆ ಬಹಳ ಆಸಕ್ತಿ ಇರುವಂತಿದೆ. ಈ ನೈತಿಕತೆ ಅನ್ನೋದು ಎಲ್ಲಿದೆ ಎಂದು ಕೇಳಿದರೆ ಒಬ್ಬೊಬ್ಬರೂ ಒಂದೊಂದು ಉತ್ತರ ಹೇಳಬಹುದು. ಹೆಂಗಸರು ತೊಡುವ ಬಟ್ಟೆಯಲ್ಲಿ ಅಡಗಿ ಕೂತಿದೆ ಎನ್ನಲೂಬಹುದು. ದಾವೆ ಅವರು ಇದರ ಕುರಿತು ಸಂಶೋಧನೆ ನಡೆಸಿರುವಂತಿದೆ. ಅದು ಭಗವದ್ಗೀತೆ ಮತ್ತು ಮಹಾಭಾರತದಲ್ಲಿದೆ ಎಂಬುದನ್ನು ಸಂಶೋಧಿಸಿರು ವಂತಿದೆ ಎಂದೇ ಅವರು ಮಕ್ಕಳಿಗೆ ಮೊದಲ ತರಗತಿ ಯಿಂದಲೇ ಪುರಾಣ ಪುಣ್ಯಕತೆಗಳನ್ನು ಬೋಧಿಸಬೇಕು. ಆಗ ಮಕ್ಕಳಿಗೆ ಬದುಕಿನ ಸಾರ್ಥಕತೆಯ ಅರಿವು ಆಗುತ್ತದೆ. ಬದುಕುವ ಕಲೆಯನ್ನ ಅರಿತು ನಡೆಯುತ್ತಾರೆ. ಪುರಾತನ ಸಂಪ್ರದಾಯ ಗಳಿಗೆ ಹಾಗೂ ಗ್ರಂಥಗಳಿಗೆ ಮರಳುವುದು ಇಂದಿನ ಅವಶ್ಯಕವಾಗಿದೆ ಎಂಬ ಅರ್ಥದ ಹಿತವಚನ ನೀಡಿದ್ದಾರೆ.

ದಾವೆ ಅವರ ಹಿತವಚನಗಳು ಎಲ್ಲರಿಗೂ ಹಿತವಾಗಿರುವಂತೆ ಇಲ್ಲ, ಮಾರ್ಕಂಡೇಯ ಖಟ್ಜು ಅವರು ಇದನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಭಗವದ್ಗೀತೆ ಹುಟ್ಟಿದ್ದೇ ಬೌದ್ಧ ಧರ್ಮ ವಿರೋಧಿಸಲು. ಅದು ಸಂಭಾಷಣೆಯ ರೂಪದಲ್ಲಿದೆ. ಅರ್ಜುನನ ಪೆದ್ದುಪೆದ್ದು ಬಾಲಿಶ ಪ್ರಶ್ನೆಗಳಿಗೆ ಕೃಷ್ಣ ಚಾಲಾಕಿ ಉತ್ತರ ನೀಡುತ್ತಾನೆ. ಅದೇ ಭಗವದ್ಗೀತೆ ಎನ್ನುತ್ತಾರೆ ಹಲವರು. ಖಟ್ಜು ಅವರ ಆಕ್ಷೇಪ ಅದಕ್ಕಲ್ಲ, ಭಾರತ ಬಹುಧರ್ಮೀಯರ ಬೀಡು. ದಾವೆ ಹೇಳಿರುವಂತೆ ಶಿಕ್ಷಣದಲ್ಲಿ ಭಗವದ್ಗೀತೆ ಅಳವಡಿಸಲು ಸಾಧ್ಯವೇ ಇಲ್ಲ, ಹಿಂದೂಗಳಿಗೆ ಭಗವದ್ಗೀತೆ ಪವಿತ್ರ ಆದರೆ ಕ್ರೈಸ್ತರಿಗೆ ಬೈಬಲ್, ಮುಸಲ್ಮಾನರಿಗೆ ಕುರಾನ್, ಸಿಖ್ಖರಿಗೆ ಗುರುಗ್ರಂಥ ಸಾಹೇಬ್, ಪಾರ್ಸಿಗಳಿಗೆ ಚೆಂದ್ ಅವಸ್ತ ಪವಿತ್ರ. ಅವುಗಳನ್ನೂ ಬೋಧಿಸಿ ಎಂದು ಹಕ್ಕು ಸ್ಥಾಪಿಸಬಹುದು. ಆಗ ಏನು ಮಾಡುವುದು? ಇದು ಸಾಧ್ಯವೇ ಇಲ್ಲ ಎಂಬುದು ಖಟ್ಜು ವಾದ.

ಖಟ್ಜು ಅವರೆ ಯಾಕೆ ಸಾಧ್ಯ ಇಲ್ಲಾರೀ? ಬೇರೆಲ್ಲ ವಿಷಯಗಳನ್ನೂ ನಿಷೇಧಿಸಿ ಧರ್ಮಗ್ರಂಥಗಳನ್ನ ಮಾತ್ರ ಅಳವಡಿಸಬಹುದಲ್ಲವಾ....

ಫೇಸ್‌ಬುಕ್‌ನಲ್ಲಿ ಫೇಸ್ ಚೆಂದಿ

ಮಹಿಳಾಕುಲದ ಬಗ್ಗೆ ವಿಶೇಷ ಕಾಳಜಿ ವಹಿಸುವವರು ಭಾರತೀಯರು ಮಾತ್ರ ಎಂದುಕೊಂಡಿದ್ದೆ. ಹಾಗೇನೂ ಇಲ್ಲ, ಬೇರೆಯವರೂ ಇದ್ದಾರೆ ಅನ್ನೋದು ಇತ್ತೀಚೆಗೆ ಅರಿವಿಗೆ ಬಂದಿತು. ಆಫ್ಘಾನಿಸ್ತಾನದವರೇನೂ ನಮಗಿಂತ ಯಾವುದೇ ರೀತಿಯಲ್ಲೂ ಕಡಿಮೆ ಇಲ್ಲ. ಉದಾಹರಣೆಗೆ ನೋಡಿ. ಈ ನಗು ಇದೆಯಲ್ಲ ಅದು ಹೆಂಗಸಿನ ಮುಖದ ಮೇಲೆ ಇದ್ದರೆ ಬಹಳ ಅಪಾಯ. ಅದು ಬೇರೆಬೇರೆ ಅರ್ಥಗಳಿಗೆ ಎಡೆಮಾಡಿಕೊಡುತ್ತದೆ. ಅನೈತಿಕತೆಗೆ ರಹದಾರಿ ಇದ್ದ ಹಾಗೆ ನಗು ಅನ್ನೋದು. ಇದು ಅಫ್ಘಾನಿಸ್ತಾನದ ಉಪಪ್ರಧಾನಿ ಚೆನ್ನಾಗಿ ಬಲ್ಲರು. ಅದಕ್ಕೇ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ನಗಬಾರದು ಎಂದು ಅಪ್ಪಣೆ ಕೊಡಿಸಿದ್ದಾರೆ. ಅಧಿಕಾರದಲ್ಲಿರೋರು ನಮ್ಮ ನೈತಿಕತೆ ಕುರಿತು ಏನೆಲ್ಲ ಕಾಳಜಿ ವಹಿಸುತ್ತಾರಪ್ಪಾ ಅಂತ ಅವರನ್ನ ತಾರೀಫು ಮಾಡುವುದನ್ನು ಕಂಡಿದೀನಿ. ಈ ಮಹಿಳೆಯರಿಗೆ ಕೊಬ್ಬು ನೋಡಿ. ಹಾಗೆ ಮಾಡಲಿಲ್ಲ, ಗಹಗಹಿಸಿ ನಗುವ ವಿವಿಧ ಭಂಗಿಯ ಮಹಿಳೆಯರ ಫೋಟೋಗಳನ್ನು ಫೇಸ್‌ಬುಕ್ಕಲಿ ಹಾಕವಂತೆ. ಅಂಟು ಪುರ್ಳೆಗೆ ಬೆಂಕಿ ಬಿದ್ದಂಗೆ ಇದೇನಾಗದೆ ಎಲ್ಲಾ ಕಡೆ ಹರಡಿ ಹೋಗಿದೆಯಂತೆ. ಮುಂದಿನ ಹಂತವಾಗಿ ಮಾನ್ಯ ಉಪಪ್ರಧಾನಿಯವರು ಹೋದ ಬಂದ ಕಡೆ ಎಲ್ಲ ಗಹಗಹಿಸಿ ನಗುವಿನ ಸ್ವಾಗತವೇ ಸಿಗಬಹುದೋ ಏನೋ. ... ಮಕ್ಳ್ ಮಾನ ಉಳಿಸೋಕೆ ಅಂತ ಹೋದೆ ... ಮಾಡೋದು ಆ ತಿರುಬೋಕೀನ್ನ...

■ ಎಚ್ಚೆಲ್ಕೆ

ಸಾಹಿತ್ಯ ಸಮ್ಮೇಳನದ ಬ್ರಾಹ್ಮಣೀಕರಣ

ಇತ್ತೀಚೆಗೆ ಬಂಟ್ವಾಳ ತಾಲೂಕಿನ ಪೊಳಲಿ ರಾಜರಾಜೇಶ್ವರಿ ದೇವಸ್ಥಾನದ ಪ್ರಾಂಗಣದಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನವು ಈ ಹಿಂದಿನಂತೆಯೇ ನನ್ನಲ್ಲಿ ಮತ್ತು ನನ್ನ ಸಮಾನ ಮನಸ್ಕರಲ್ಲಿ ಕೆಲವು ಪ್ರಶ್ನೆಗಳನ್ನು ಹುಟ್ಟಿಸಿದೆ. ಅವುಗಳನ್ನು ವಿಮರ್ಶಿಸುವುದಕ್ಕಿಂತ ಮುಂಚಿತವಾಗಿ ಈ ಸಾಹಿತ್ಯ ಸಮ್ಮೇಳನದ ಒಂದೆರಡು ಧನಾತ್ಮಕ ಅಂಶಗಳನ್ನೂ ಇಲ್ಲಿ ಉಲ್ಲೇಖಿಸಬೇಕಿದೆ. ಈ ಬಾರಿಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗಾಗಿ ಡಾ. ಕಿನ್ನಿಕಂಬಳ ಪದ್ಮನಾಭ ರಾವ್‌ರನ್ನು ಆಯ್ಕೆ ಮಾಡಿದ್ದಕ್ಕಾಗಿ ಜಿಲ್ಲಾ ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳನ್ನು ಪ್ರಶಂಸಿಸಲೇಬೇಕು. ಸಾಹಿತ್ಯ ಎಂದರೆ ಬರೇ ಕತೆ, ಕವನಗಳಷ್ಟೇ ಅಲ್ಲ, ಸಾಮಾನ್ಯವಾಗಿ ಭಾಷಾ ವಿಜ್ಞಾನವನ್ನು ಸಾಹಿತ್ಯದ ಒಂದು ಪ್ರಮುಖ ಪ್ರಕಾರವೆಂದು ಗುರುತಿಸಲಾಗುವುದೇ ಇಲ್ಲ. ಯಾವುದೇ ಸಾಹಿತ್ಯ ಕುರಿತ ಚರ್ಚೆಯ ಸಂದರ್ಭದಲ್ಲಿ ಭಾಷಾ ತಜ್ಞರು ಸಾಹಿತ್ಯಕ ವಲಯದಿಂದ ಹೊರಗಿನವರಾಗಿಯೇ ಉಳಿಯುವುದು ಹೆಚ್ಚು. ಮೊನ್ನೆ ಮೊನ್ನೆ ಪಂಪ ಪ್ರಶಸ್ತಿ ಪಡೆಯುವವರೆಗೆ ಹಿರಿಯ ಭಾಷಾ ವಿಜ್ಞಾನಿ ಡಿ.ಎನ್.ಶಂಕರ ಭಟ್ಟರ ಬಗ್ಗೆ ಬರೇ ಸಾಹಿತ್ಯಾಭಿಮಾನಿಗಳಿಗಷ್ಟೇ ಅಲ್ಲದೇ ಅನೇಕ ಸಾಹಿತಿಗಳಿಗೂ ತಿಳಿದಿರಲಿಲ್ಲ. ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಬೆಟ್ಟದಷ್ಟು ಸಾಧನೆಗೈದ ದಂಪತಿಗಳಾದ ಡಾ. ಉಳಿಯಾರು ಪದ್ಮನಾಭ ಉಪಾಧ್ಯಾಯ ಮತ್ತವರ ದಿವಂಗತ ಪತ್ನಿ ಸುಶೀಲಾ ಉಪಾಧ್ಯಾಯರ ಸಾಧನೆಗಳ ಬಗ್ಗೆ ಇಂದಿಗೂ ಹೆಚ್ಚಿನವರಿಗೆ ತಿಳಿದಿಲ್ಲ. ಈ ದಿಸೆಯಲ್ಲಿ ಕನ್ನಡ ಕಂಪ್ಯೂಟರ್ ತಂತ್ರಾಂಶದ ಪಿತಾಮಹನೆಂದೇ ಕರೆದರೂ ಉತ್ಪ್ರೇಕ್ಷೆಯಾಗದ ನಾಡೋಜ ಕೆ.ಪಿ.ರಾವ್ ಅವರಿಗೆ ಅಧ್ಯಕ್ಷತೆಯ ಗೌರವ ನೀಡಿದ್ದು ಒಂದು ಉತ್ತಮ ಬೆಳವಣಿಗೆ. ಹಾಗೆ ನೋಡಹೋದರೆ ಕೆ.ಪಿ.ರಾವ್ ಅವರ ಸಾಧನೆ ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸುವಷ್ಟು ಮೇರು ಎಂದರೆ ಅತಿಶಯೋಕ್ತಿಯೇನಲ್ಲ.

ಮೊನ್ನೆ ತನ್ನ ಬದುಕಿನ ಪಯಣ ಮುಗಿಸಿ ಹೊರಡುವವರೆಗೂ ಕರಾವಳಿಯ ಹೊಸತಲೆಮಾರಿನ ಜನತೆಯ ಪಾಲಿಗೆ ಅಪರಿಚಿತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ, ಪ್ರಖರ ಸಮಾಜವಾದಿ ಹೋರಾಟಗಾರ, ಪತ್ರಕರ್ತ ಡಾ. ಅಮ್ಮೆಂಬಳ ಬಾಳಪ್ಪರ ಹೆಸರನ್ನು ವಸ್ತು ಪ್ರದರ್ಶನ ವೇದಿಕೆಗೆ ಹಾಕಿದ್ದು ಪ್ರಶಂಸನೀಯ. ನಾನು ಗಮನಿಸಿದಂತೆ ಇತ್ತೀಚಿನ ಕೆಲವು ವರ್ಷಗಳಲ್ಲಿ ದ.ಕ.ಜಿಲ್ಲೆಯ ಕನ್ನಡ ಸಾಹಿತ್ಯ ಸಮ್ಮೇಳನಗಳ ಪ್ರಾಂಗಣಕ್ಕೋ, ಮುಖ್ಯ ವೇದಿಕೆಗೋ ಒಂದೇ ಜಾತಿಯ ಸಾಧಕರ ಹೆಸರನ್ನಿಡಲಾಗುತ್ತಿದೆ. (ಕನ್ನಡದ ಕೋಗಿಲೆ ಬಿ.ಎಂ. ಇದ್ದಿನಬ್ಬರು ಮೃತರಾದ ವರ್ಷ ಅವರ ಹೆಸರನ್ನಿಟ್ಟ ಒಂದು ನಿದರ್ಶನದ ಹೊರತಾಗಿ) ಅಮ್ಮೆಂಬಳ ಬಾಳಪ್ಪರ ಹೆಸರನ್ನು ಒಂದು ಉಪವೇದಿಕೆಗೆ ಹಾಕಿಬಿಡುವಷ್ಟು ಸಣ್ಣ ಸಾಧಕರಲ್ಲ ಬಾಳಪ್ಪ. ಈ ಬಾರಿ ಅಮ್ಮೆಂಬಳ ಬಾಳಪ್ಪರ ತವರು ತಾಲೂಕಿನಲ್ಲೇ ಸಮ್ಮೇಳನ ನಡೆದಿದ್ದರಿಂದ ಈ ಬಾರಿಯ ಸಮ್ಮೇಳನದ ಪ್ರಾಂಗಣಕ್ಕೋ, ಮುಖ್ಯ ವೇದಿಕೆಗೋ ಬಾಳಪ್ಪರ ಹೆಸರನ್ನು ಹಾಕಬೇಕಿತ್ತು. ಸಾಹಿತ್ಯ ಈ ನೆಲದ ಜನರ ಬದುಕಿನ ಬವಣೆಗೆ ಧ್ವನಿಯಾಗಬೇಕು. ಅದು ಯಾವತ್ತೂ ವಿದ್ವತ್ತಿನ ತೌಡುಗುಟ್ಟುವಿಕೆಯಾಗಬಾರದು. ಬಾಳಪ್ಪರು ಈ ನೆಲದ ದಮನಿತರ ಮತ್ತು ದುಡಿವ ವರ್ಗದ ಏಳಿಗೆಗಾಗಿ ಸುದೀರ್ಘ ಕಾಲ ಹೋರಾಡಿದವರು. ಭೂರಹಿತ ರೈತರಿಗೆ ಭೂಮಿ ಕೊಡಿಸಲು ಹೋರಾಡಿ ಭೂಮಾಲೀಕರಿಂದ ಏಟು ತಿಂದವರು. ತಮ್ಮ ಪತ್ರಿಕೆಯಲ್ಲಿ ನಿರಂತರವಾಗಿ ಕಾರ್ಮಿಕರ, ಭೂರಹಿತ ರೈತರ ಪರವಾಗಿ ಬರೆದು ಪಟ್ಟಭದ್ರರ ದ್ವೇಷಕ್ಕೆ ಗುರಿಯಾದವರು. ಬಾಳಪ್ಪರ ಬದುಕು ಮತ್ತು ಹೋರಾಟವೇ ಒಂದು ಶ್ರೇಷ್ಠ ಸಾಹಿತ್ಯ. ಹೀಗಿರುವಾಗ ಅಮ್ಮೆಂಬಳ ಬಾಳಪ್ಪರು ಸಾಹಿತಿಯೋ, ಅಲ್ಲವೋ ಎಂಬ ಪ್ರಶ್ನೆಯೇ ಇಲ್ಲಿ ಅಪ್ರಸ್ತುತ.

ಈ ಬಾರಿಯ ಸಾಹಿತ್ಯ ಸಮ್ಮೇಳನದ ಸನ್ಮಾನ ಕಾರ್ಯಕ್ರಮದಲ್ಲೂ ಶ್ರೇಷ್ಠ ಮತ್ತು ಕನಿಷ್ಠ ಎಂಬ ವರ್ಗೀಕರಣ ನಡೆದಿರುವುದೂ ಖಂಡನೀಯ. ವಿದ್ವತ್ ಸನ್ಮಾನ ಎಂಬ ಶ್ರೇಷ್ಠ (?) ರ ಸನ್ಮಾನದಲ್ಲಿ ಬಹುಪಾಲು ಒಂದೇ ಜಾತಿಯವರಿಗೆ ಮೀಸಲು ಅಂದರೆ 7ರಲ್ಲಿ 6 ಬ್ರಾಹ್ಮಣ ಸಾಧಕರಿಗೆ ಮತ್ತು ಒಬ್ಬ ಅಬ್ರಾಹ್ಮಣ ಸಾಧಕರಿಗೆ. ಈ ಸನ್ಮಾನವನ್ನು ಮಾಡಿದವರೆಲ್ಲರೂ ಬ್ರಾಹ್ಮಣರೇ...!

ಒಂದು ವಿದ್ವತ್ ಸನ್ಮಾನವೆಂದಾದರೆ ಸಾಮಾನ್ಯ ಸನ್ಮಾನಿತರಿಗೆ ವಿದ್ವತ್ತಿಲ್ಲವೆಂದಾಯಿತಲ್ಲವೇ? ಅಂದರೆ ಇವರು ಶ್ರೇಷ್ಠ ಸಾಧಕರು ಮತ್ತು ಇತರರು ಕನಿಷ್ಠ ಸಾಧಕರೆಂದು ಅರ್ಥವೇ? "ಕ್ಷೌರಿಕನ ವೃತ್ತಿ ಸಾಹಿತ್ಯಕ್ಕಿಂತ ಕೀಳಲ್ಲ" ಎಂಬ ಬೀಚಿಯವರ ಮಾತು ಇಲ್ಲಿ ಹೆಚ್ಚು ಪ್ರಸ್ತುತ ಎಂದೆನಿಸುತ್ತದೆ. ಬರೇ ಗ್ರಂಥ ಭಂಡಾರಗಳನ್ನು ತಲೆಯೊಳಗೆ ತುಂಬಿಸಿಕೊಂಡವನದ್ದು ಮಾತ್ರ ವಿದ್ವತ್ತಲ್ಲ. ಬಿರುಗಾಳಿಗೆ ದೋಣಿ ಮಗುಚಿ ಬೀಳುವಾಗ ಪ್ರಕಾಂಡ ಪಂಡಿತ ಪ್ರಯಾಣಿಕನ ವಿದ್ವತ್ತು ನಿರುಪಯುಕ್ತವಾಗಿ ನಿರಕ್ಷರಕುಕ್ಷಿ ಅಂಬಿಗನ ವಿದ್ವತ್ತು (ಈಜು) ಉಪಯೋಗಕ್ಕೆ ಬಂದ ಕತೆಯನ್ನು ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳು ನೆನಪಿಸಿಕೊಳ್ಳುವುದೊಳಿತು. ಈ ಕನಿಷ್ಠ ಸನ್ಮಾನದಲ್ಲೂ ಒಂದೇ ಜಾತಿಯವರಿಗೆ ಸಿಂಹಪಾಲು, 20 ಮಂದಿ ಸನ್ಮಾನಿತರಲ್ಲಿ 7 ಮಂದಿ (35%) ಒಂದೇ ಜಾತಿಗೆ ಸೇರಿದವರು.

ಇನ್ನು ಸಾಹಿತ್ಯ ಸಮ್ಮೇಳನದ ವಿವಿಧ ಗೋಷ್ಠಿ ಪ್ರದರ್ಶನಗಳ ಪ್ರಾಂಗಣಗಳ ಹೆಸರುಗಳನ್ನು ಅವಲೋಕಿಸಿದರೆ ಅಲ್ಲೂ ಒಂದೇ ಜಾತಿಯವರಿಗೆ ಮಣೆ. ಒಟ್ಟು 9 ಹೆಸರುಗಳಲ್ಲಿ 5 ಹೆಸರುಗಳು ಸ್ವಘೋಷಿತ ಮೇಲುಜಾತಿಯವರಿಗೆ ಮೀಸಲು. ಇವನ್ನೆಲ್ಲಾ ನೋಡುವಾಗ ಕನ್ನಡ ಸಾಹಿತ್ಯ ಸಮ್ಮೇಳನ ಎನ್ನುವುದಕ್ಕಿಂತ ಇದನ್ನು ಬ್ರಾಹ್ಮಣ ಸಾಹಿತ್ಯ ಸಮ್ಮೇಳನವೆಂದು ಕರೆದಿದ್ದರೆ ಹೆಚ್ಚು ಸೂಕ್ತವೆನಿಸುತ್ತಿತ್ತು ಎಂಬುದು ನನ್ನ ಅಂಬೋಣ.

ಸಮ್ಮೇಳನದಲ್ಲಿ ಸನ್ಮಾನಿತರಾದ 27 ಮಂದಿಯಲ್ಲಿ ಕೇವಲ ಇಬ್ಬರು ಮಾತ್ರ ಮಹಿಳೆಯರು. ಮಹಿಳೆಯರು ಕೀಳು ದರ್ಜೆಯವರು ಎಂಬ ಮನುವಿನ ವಾದವನ್ನು ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳು ಈ ಮೂಲಕ ಪುಷ್ಟೀಕರಿಸಿದ್ದಾರೆಯೇ?

ಇನ್ನೊಂದು ಮುಖ್ಯ ವಿಚಾರ, ಇತ್ತೀಚೆಗೆ ಸಾಹಿತ್ಯ ಸಮ್ಮೇಳನಗಳನ್ನು ದೇವಸ್ಥಾನಗಳಲ್ಲಿ ಆಯೋಜಿಸುವ ಕೆಟ್ಟ ಪರಿಪಾಠ ಪ್ರಾರಂಭವಾಗಿದೆ. ಕಳೆದ ವರ್ಷ ದ.ಕ. ಜಿಲ್ಲೆಯ ಬೆಳ್ತಂಗಡಿ, ಸುಳ್ಯ ಮತ್ತು ಬಂಟ್ವಾಳ ತಾಲೂಕು ಸಮ್ಮೇಳನಗಳನ್ನು ದೇವಸ್ಥಾನಗಳಲ್ಲಿ ನಡೆಸಲಾಗಿತ್ತು. ಕಳೆದ ಬಾರಿಯ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಮಂಗಳೂರು ತಾಲೂಕಿನ ಕುಳಾಯಿಯ ದೇವಸ್ಥಾನವೊಂದರಲ್ಲಿ ನಡೆಸಲಾಗಿತ್ತು. ಸಾಹಿತ್ಯ ಸಮ್ಮೇಳನಗಳನ್ನು ದೇವಸ್ಥಾನಗಳಲ್ಲಿ



ನಡೆಸುವ ಔಚಿತ್ಯವನ್ನು ಪ್ರಶ್ನಿಸಿ ಕಳೆದ ವರ್ಷ ಹಿ
ಶಿಕ್ಷಣ ತಜ್ಞರಾದ ಕೃಷ್ಣಶಾಸ್ತ್ರಿ ಬಾಳಿಲರವರು ಸ
ಪರಿಷತ್‌ನ ಅಧ್ಯಕ್ಷರಾದ ಕಲ್ಕೂರ ಮತ್ತವರ ಬಳಗ
ವಿರುದ್ಧ ಪತ್ರ ಸಮರ ಸಾರಿದ್ದರು. ಆಗ ಶಾಸ್ತ್ರಿಯ
ನಿರಂತರ ಪತ್ರ ಮತ್ತು ಲೇಖನಗಳನ್ನು ಬರೆದು ಸ
ಪರಿಷತ್‌ನ ಕ್ರಮವನ್ನು ಖಂಡಿಸಿದ್ದಕ್ಕೆ ಕಲ್ಕೂರರು "
ಮಸೀದಿ, ದರ್ಗಾಗಳಲ್ಲಿ ಅವಕಾಶ ಕೊಟ್ಟರೆ ಅಲ್ಲೂ ಸ
ಸಮ್ಮೇಳನ ಮಾಡಲು ಸಿದ್ಧ" ಎಂಬ ಪತ್ರಿಕಾ ಹೇಳಿಕೆ
ಕೊಟ್ಟಿದ್ದರು. ಆಗ ಕಲ್ಕೂರರು ದೇವಸ್ಥಾನಗಳಲ್ಲಿ ಸ
ಸಮ್ಮೇಳನಗಳನ್ನು ಆಯೋಜಿಸಿದರೆ "ಊಟೋಪಚ
ಖರ್ಚು ಉಳಿಯುತ್ತದೆ" ಎಂಬ ಸಮರ್ಥನೆಯ
ಕೊಟ್ಟಿದ್ದರು. ನಮ್ಮ ಪ್ರಶ್ನೆ ಕೇವಲ ದೇವಸ
ಸೀಮಿತವಾದುದಲ್ಲ, ಅದು ದರ್ಗಾ, ಮಸ
ಚರ್ಚುಗಳಲ್ಲಾದರೂ ನಾವು ವಿರೋಧಿಸುತ್ತೇವೆ. ಯಾ
ಧಾರ್ಮಿಕ ಕೇಂದ್ರಗಳಲ್ಲಿ ಸಾಹಿತ್ಯ ಸಮ್ಮೇಳನವನ್ನು ನಡೆ
ಸಾಹಿತ್ಯದ ನೈಜ ಆಶಯಕ್ಕೆ ಪೆಟ್ಟು ಬೀಳುತ್ತದೆ. ಧಾ
ಪಾಳೆಗಾರರ, ಪುರೋಹಿತಶಾಹಿಗಳ ವಿರುದ್ಧ ಧ್ವನಿಯೆ
ಸಾಧ್ಯವಾಗದು.

ಕಲ್ಕೂರರು ಧಾರ್ಮಿಕ ಪಾಳೆಗಾ
ಪುರೋಹಿತಶಾಹಿಗಳ ಅಡಿಯಾಳಾಗಿರಬಹು
ಅಂದಮಾತ್ರಕ್ಕೆ ಕನ್ನಡ ಸಾಹಿತ್ಯವನ್ನು ಅ
ಅಡಿಯಾಳಾಗಿಸುವ ಹಕ್ಕನ್ನು ಕಲ್ಕೂರರಿಗೆ ಕೊಟ್ಟವರು
ಕನ್ನಡ ಸಾಹಿತ್ಯ ಪರಿಷತ್ ಏನು ಪ್ರದೀಪ್‌ಕುಮ
ಕಲ್ಕೂರರ ಖಾಸಗಿ ಕಂಪೆನಿಯೇ? ಒಂದು ವೇಳೆ ಮ
ದರ್ಗಾಗಳಲ್ಲಿ ಸಾಹಿತ್ಯ ಸಮ್ಮೇಳನ ಮಾಡಿದರೆ ವ
ಬ್ಯಾರಿಗಳು ತಯಾರಿಸಿದ ಆಹಾರವನ್ನು ಸೇವಿಸಲು ಇ
ಸಿದ್ಧರಿದ್ದಾರೆಯೇ? ಬರೀ ಊಟದ ಖರ್ಚು ಉಳಿಸಲ
ಸಾಹಿತ್ಯ ಸಮ್ಮೇಳನಗಳನ್ನು ಧಾರ್ಮಿಕ ಪಾಳೆಗಾ
ಪುರೋಹಿತಶಾಹಿಗಳ ಕೈಗೊಪ್ಪಿಸುವುದಕ್ಕಿಂತ ದ
ಅವಮಾನ ಕನ್ನಡಕ್ಕೆ ಇನ್ನೊಂದಿಲ್ಲ. ಅಂತಹ ದಾ
ಕನ್ನಡ ಸಾಹಿತ್ಯಕ್ಕೆ ಖಂಡಿತ ಬಂದಿಲ್ಲ.

ಸಾಹಿತ್ಯಾಭಿಮಾನಿಗಳು ಇವರು ಕೊಡುವ ಊ
ಜೊಲ್ಲು ಸುರಿಸಿ ಬರುವವರಲ್ಲ. ಅಷ್ಟಕ್ಕೂ ಸಾ
ಸಮ್ಮೇಳನದಲ್ಲಿ ಊಟ ಕೊಡಲೇಬೇಕು ಎ
ನಿಯಮವೇನಿಲ್ಲ. ಕಲ್ಕೂರರಿಗೆ ಅಂತಹ ದಾರಿದ್ರ್ಯ
ಪರಿಷತ್‌ನ ಅಧ್ಯಕ್ಷ ಸ್ಥಾನ ತ್ಯಜಿಸಲಿ.

ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಧಾ
ಪಾಳೆಗಾರರ, ಪುರೋಹಿತಶಾಹಿಗಳ ವಿರುದ್ಧ ಸ
ಯುದ್ಧಗಳೇ (ದಲಿತ, ಬಂಡಾಯ) ನಡೆದಿವೆ. ರಾ
ಕುವೆಂಪುರವರ "ಗುಡಿ, ಚರ್ಚು, ಮಸೀದಿಗಳ ಬ
ಹೊರಬನ್ನಿ" ಎಂಬ ಆಶಯಕ್ಕೆ ಬದ್ಧವಾಗಿರಬೇಕು ಸಾ
ಸಮ್ಮೇಳನಗಳು.


■ ಇಸ್ಮತ್ ಫಜೀ

ಎಲ್ಲಿದೆ ನಮಗೆ ಸ್ವಾತಂತ್ರ್ಯ?

ಕುಳ್ಳಿಗ ಮಟ್ಟ ಹಾಗೇ ಕಿತ್ತು ತಿಂದು
ಕಾಳುಕಡ್ಡಿಗಳನ್ನೂ ಬಿಡದೆ ಗೂಡಿಗೆ ಸಾಗಿಸಿ
ಮಕ್ಕಳು ಮೊಮ್ಮಕ್ಕಳಿಗೆ ಕೂಡಿಟ್ಟು ಕೂತ
ಗಿಡುಗನ ಕೇಳಿತು ಗುಬ್ಬಿ
ಎಲ್ಲಿದೆ ನನಗೆ ಸ್ವಾತಂತ್ರ್ಯ?

ತೆಂಗು ಅಡಿಕೆ ಕಬ್ಬು
ದಾಳಿಂಬೆ ದ್ರಾಕ್ಷಿ ಹೊಗೆಸೊಪ್ಪುಗಳ
ನೋಡಿ ನಲುಗಿ ಕೇಳುತಿವೆ
ರಾಗಿ ಸಜ್ಜೆ ನವಣೆ
ಎಲ್ಲಿದೆ ನಮಗೆ ಸ್ವಾತಂತ್ರ್ಯ?

ಗುಡಿ ಚರ್ಚು ಮಸೀದಿಗಳ
ಕಾಣಿಕೆ ಹುಂಡಿಯೊಳಗಿದ್ದ
ಕಾಂಚಾಣವ ಕೇಳಿತು
ಬಿಕಾರಿ ತಟ್ಟೆಯೊಳಗಣ ಚಿಲ್ಲರೆ
ಎಲ್ಲಿದೆ ನನಗೆ ಸ್ವಾತಂತ್ರ್ಯ?



ಒಣ ಹುಲ್ಲೆ ಹೊಟ್ಟೆ ತುಂಬಿಸಿ
ದೇಹ ತೇಯ್ದು ಮನೆ ಕೂಲಿ ಮಾಡಿ
ಮುಟ್ಟಾದೊಡೆ ಚಾಪೆ ತಂಬಿಗೆ ಹಿಡಿದು
ಹೊರ ಕೂತು ಉಸುರುತಿಹವು ಜೀವಗಳು
ಎಲ್ಲಿದೆ ನಮಗೆ ಸ್ವಾತಂತ್ರ್ಯ?

ಖಾಕಿ ಪಡೆಯ ಲಾಟಿ ಬೂಟಿನೇಟಿಗೆ
ಸೊಕ್ಕು ತುಂಬಿದ ಗುಂಡಿನೇಟಿಗೆ
ಭೂ ಮಕ್ಕಳ ಹಸಿರು ಪತಾಕೆ
ನೆಲಕೆ ಜಾರುತ ಹಾರುತ ಕೇಳಿದೆ
ಎಲ್ಲಿದೆ ನಮಗೆ ಸ್ವಾತಂತ್ರ್ಯ?

ಗಾಜಿನ ಕಾರ್ಪೋರೇಟು ಬಿಲ್ಡಿಂಗಿನ
ಕಂಗೊಳಿಸುವ ಅಪಾರ್ಟುಮೆಂಟಿನ
ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳ ಬಾಗಿಲುಗಳಿಗೆ
ಕೂಗಿ ಕೂಗಿ ಹೇಳಿತು ಸ್ಲಮ್ಮು
ಎಲ್ಲಿದೆ ನಮಗೆ ಸ್ವಾತಂತ್ರ್ಯ?

ರೀಬಾಕ್ ಬಾಟ ಲೂನಾರ್ಸ್ ವಿಕೆಸಿಗಳ
ಎದುರು; ಅಂಬೇಡ್ಕರರ ಪಟ ಹೊತ್ತು
ಮಲಗಿದ್ದ ಪುಟ್ಟ ಪೆಟ್ಟಿಗೆಯಂಗಡಿ
ಮೇಲೆದ್ದು ಕೇಳಿತು
ನಮಗೆಲ್ಲಿದೆ ಆ ಸ್ವಾತಂತ್ರ್ಯ?

ಪಿಜ್ಜಾ ಹಟ್ ಕೆಎಫ್‌ಸಿ ಮ್ಯಾಕ್ ಡೊನಾಲ್ಡುಗಳಲಿ
ಸ್ವಾತಿ ಸುಖ ಸಾಗರಗಳಲಿ
ಆರೆ ತಿಂದು ಬರೆ ಎಸೆದವರ
ಕೇಳಿದೆ ಹಸಿ ಹಸಿವು
ಎಲ್ಲಿದೆ ನಮಗೆ ಸ್ವಾತಂತ್ರ್ಯ?

ಪ್ರೀತಿಸಿದವರ ತೊರೆದು
ಜಾತಿ ಕುಣಿಕೆಗೆ ಕುತ್ತಿಗೆಯೊಡ್ಡಿ
ಸಂಪ್ರದಾಯವೆಂದು ಉತ್ತರಿಸಿ
ಮೊದಲ ರಾತ್ರಿ ಮುತ್ತಿಡುವಾಗ ಕೇಳಿದೆ ಹೃದ
ಎಲ್ಲಿದೆ ನನಗೆ ಸ್ವಾತಂತ್ರ್ಯ?

ಎಷ್ಟು ಸಲ ಕೇಳಲಿ
ಶತಶತಮಾನಗಳ ಪ್ರಶ್ನೆ ಇದು
ಉತ್ತರಿಸುವವರೇ ಇಲ್ಲ
ಪ್ರಶ್ನಿಸುವ ತಲೆ ಹೆಚ್ಚುತಿವೆ
ಉತ್ತರದ ಜುಟ್ಟಿಡಿಯದೆ ಬಿಡುವುದಿಲ್ಲ
ಕಸಗಳೆಂದು ಕಡೆಗಣಿಸದಿರಿ
ನಾಳೆ ರಸವಾಗಿ ಬೆಳೆ ತೆಗೆವೆವು
ಸ್ವಾತಂತ್ರ್ಯ ಪಡೆದೇ ಪಡೆವೆವು.

■ ವಿಕಾಸ ಆರ್ ಮೌರ್ಯ
ಬೆಂಗಳೂ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವಿಷ್ಣು ಬಂಡವಾಳಶಾಹಿ, ಶಿವ ಸಮಾಜವಾದಿ

ರಾಜ ಪ್ರತ್ಯಕ್ಷ ದೈವತಾ ಎಂದು ಸ್ಥಳೀಯ ನಾಯಕರನ್ನು ಹೊಗಳಿ, ತಮ್ಮ ಅರಸನನ್ನು ಅಥವಾ ಆಳುವವನನ್ನು ...ಕ್ಕೆ ಏರಿಸಿ ಮುಂದೊಂದು ದಿನ ಅನೇಕ ಕಾಲಘಟ್ಟಗಳ ...ಯು ಅವನೊಬ್ಬ ವಿಷ್ಣುವಿನ ಅವತಾರದ ದೇವರಾಗಿ ...ಂತರಗೊಳ್ಳುವುದು ಹರಿಯ ಅವತಾರಗಳಾದರೆ, ...ವರ್ಗವಲ್ಲದ ಶ್ರಮಿಕರ, ಜಂಗಮಜೋಗಿಗಳ, ...ರಿಗಳ, ಸಿದ್ಧ-ಸಾಧಕರನ್ನು ಆರಾಧಿಸುತ್ತಾ ಕಾಲಕ್ರಮೇಣ ...ತ್ವವನ್ನು ಆರೋಪಿಸುತ್ತಾ ಶಿವನ ಅವತಾರಕ್ಕೆ ...ಂತರಗೊಳಿಸುತ್ತಿದ್ದರು.

ಹರಿ ಮತ್ತು ಹರರ ನಡುವಿನ ಪ್ರಮುಖ ವ್ಯತ್ಯಾಸ ...ರೆ, ಹರಿಯು ಆಳುವ ವರ್ಗದ ಉತ್ಪಾದನೆಯಾಗಿದ್ದು, ...ಹಿತ ಮತ್ತು ರಾಜರ ಪರವಾಗಿರುವವನು ಆಗಿರುತ್ತಿದ್ದ ...ಕೋಟೆಯ ಚೆಲುವನಾರಾಯಣಸ್ವಾಮಿ, ವರದರಾಜ ...ು, ಚೆನ್ನಕೇಶವರಾಯ ಇತರರೆಲ್ಲರೂ ಸ್ಥಳೀಯ ...ಕರಾಗಿದ್ದವರು. ಮಲೆ ಮಹದೇಶ್ವರ ಸ್ವಾಮಿ, ರೇವಣ ...ಸ್ವಾಮಿ ಇತರ ಸಿದ್ಧ ಸಾಧಕರೆಲ್ಲಾ ಶಿವಗಣಕ್ಕೆ ...ಲ್ಪಟ್ಟವರಾಗಿ ಕಾಲಕ್ರಮೇಣ ಶಿವನೇ ತಾವಾಗಿರುವ ...ಂತರದವರು.

ವಿಷ್ಣುವಿನ ಅವತಾರದ ರಾಜರು

ಬ್ರಾಹ್ಮಣ ಪುರೋಹಿತ ವರ್ಗದ ಕೈವಶದಲ್ಲಿದ್ದ ...ಕರು ಅಥವಾ ಅರಸರು ದೈವತ್ವದ ಆಸೆಯಿಂದಲೋ ...ವಾ ದೈವಭೀತಿಯಿಂದಲೋ ಪುರೋಹಿತರ ...ನುವರ್ತಿಗಳಾಗಿರುತ್ತಿದ್ದರು. ಹಾಗೆಯೇ ತಮ್ಮ ...ವನ್ನು ಭದ್ರಪಡಿಸಿಕೊಳ್ಳಲು ಈ ಬ್ರಾಹ್ಮಣರೂ ಕೂಡ ...ನ್ನು ಓಲೈಸಿಕೊಂಡೇ ಇರುತ್ತಿದ್ದರು. ಸ್ಥಳೀಯ ...ಕರಾದವರೆಲ್ಲಾ ತೀರ ಬುದ್ಧಿವಂತರೋ ಅಥವಾ ...ಗಳೋ ಏನೋ ಆಗಿರುತ್ತಿರಲಿಲ್ಲ, ಕೆಲವೊಮ್ಮೆ ಶುದ್ಧ ...ರೂ, ಶುಂಠಿಗಳೂ ಆಗಿದ್ದು ಅವರಲ್ಲಿ ಪರಾಕ್ರಮ, ...ರ್ಯ ಮತ್ತು ನಾಯಕತ್ವದ ಗುಣಗಳಿರುತ್ತಿದ್ದವು. ...ಂದ್ರಿಯವಾದಂತಹ, ಅತಿಮಾನುಷವಾದ ಶಕ್ತಿಯ ...ಾದಂತಹ, ಗ್ರಹಗತಿಗೆ ಸಂಬಂಧಪಟ್ಟಂತಹ ...ಗಳನ್ನು ಕುರಿತು ಬ್ರಾಹ್ಮಣರು ಹೇಳುತ್ತಿದ್ದಾಗ, ತಮ್ಮ ...ನ್ನೂ ಮೀರಿದ ಶಕ್ತಿಯನ್ನು ಓಲೈಸಿಕೊಳ್ಳಲು ಮತ್ತು ... ಒಳ್ಳೆಯ ಪ್ರಭಾವಕ್ಕೆ ಒಳಗಾಗಲು ಅಥವಾ ಕೆಟ್ಟ ...ವದಿಂದ ತಪ್ಪಿಸಿಕೊಳ್ಳಲು ಅನಿವಾರ್ಯವಾಗಿ ಈ ...ೋಹಿತವರ್ಗವನ್ನು ಮೊರೆಹೋಗುತ್ತಿದ್ದರು. ಒಟ್ಟಾರೆ ...ಂದ್ರಿಯವಾದ ವಿಷಯಗಳ ಭಯದಿಂದ ಮತ್ತು ...ಮಾನುಷವಾದ ಶಕ್ತಿಗಳ ಆಸೆಯಿಂದ ಆಳುವವರ್ಗಗಳನ್ನು ಅಧೀನದಲ್ಲಿಟ್ಟುಕೊಳ್ಳಲು ಪುರೋಹಿತವರ್ಗವು ...ತ ಸಮರ್ಥವಾಗಿತ್ತು, ಇಂದೂ ಇದಕ್ಕೆ ಹೊರತೇನಿಲ್ಲ.

ಶಿವನವತಾರದ ಯೋಗಿಗಳು

...ದರೆ, ಶಿವನ ಅವತಾರವೆಂದು ಹೇಳುವಂತಹ ...ಗಳು, ಸಿದ್ಧರು, ಜೋಗಿಗಳು, ಘೋರಿಗಳು, ...ರಿಗಳು, ಜಂಗಮರು; ಈ ಎಲ್ಲಾ ಶೈವಾಗಮದ ...ಲಕ್ಕೆ ತಳುಕುಹಾಕಿಕೊಳ್ಳುವವರು ಸಾಮಾನ್ಯವಾಗಿ ...ವವರ್ಗ, ಶಿಷ್ಟಸಮಾಜದ ವರ್ಗಗಳಿಂದ ...ರತಾದವರಾಗಿರುತ್ತಿದ್ದರು. ಒಂದು ರೀತಿಯಲ್ಲಿ ಪಾಗಲ್ ...ಯವರೇ ಆಗಿರುತ್ತಿದ್ದರು. ಲೋಕದ ಶಿಷ್ಟ ಸಮಾಜದ ...ಯಿಂದ ಹುಚ್ಚರಂತೆ ಕಾಣುತ್ತಿದ್ದ ಇವರಲ್ಲಿ ಬೇರೆಯೇ ...ಯ ಶಕ್ತಿಯಿರುತ್ತದೆ, ಇವರು ಸಾಧಕರು ಎಂಬ ...ನ್ಯತೆಯಿದ್ದರೂ ಅವರಿಗೆ ಪುರೋಹಿತರ ನೆಚ್ಚಿಕೆಯೇನೂ ...ರಲಿಲ್ಲ, ಪುರೋಹಿತರಂತಹ ಸುಳ್ಳು ಕಂತೆಪುರಾಣಗಳನ್ನು ...ವ ಮಂದಿ ಇಂಥವರ ಆಗ್ರಹಕ್ಕೆ ಗುರಿಯಾಗಿರುತ್ತಿದ್ದರು. ...ತೆಗೆ ಇವರು ಪುರೋಹಿತರು ಹುಟ್ಟು ಹಾಕುತ್ತಿದ್ದಂತಹ ...ಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದರು. ಹಾಗಾಗಿ ...ರುಗಳನ್ನು, ನಾಯಕರನ್ನು ಓಲೈಸುತ್ತಿದ್ದ ವರ್ಗವು ಇವರ ...ಗೆ ಅಷ್ಟಾಗಿ ಸುಳಿಯುತ್ತಿರಲಿಲ್ಲ. ಇವರನ್ನು ...ಸರಿಯುತ್ತಿದ್ದವರು ಶ್ರಮಿಕರು, ಸಾಮಾನ್ಯವರ್ಗದವರು, ...ಕರು ಮತ್ತು ಬಡವರು.

...ಗಿ ಅಥವಾ ಜೋಗಿಗಳೆಂದರೆ ಅವರು ಯಾವ ...ಂದವರಾಗಿದ್ದರೂ ಅಲ್ಲೇನೂ ಸಮಸ್ಯೆಯಿರುತ್ತಿರಲಿಲ್ಲ, ...ರು ಧಾರ್ಮಿಕವಾಗಿ ಅಥವಾ ಸಾಮಾಜಿಕವಾದ ಸಿದ್ಧ ...ದರಿಗಳನ್ನು ಒಡೆಯುವವರಾಗಿರುತ್ತಿದ್ದರು. ಅವರೆಷ್ಟರ ...ಗೆ ನಿರ್ಭೀತರಾಗಿರುತ್ತಿದ್ದರೆಂದರೆ, ಒರ್ವ ಸೂಫಿ ಸಂತ ... ಧರ್ಮವನ್ನು ನಿರಾಕರಿಸುತ್ತಿದ್ದಾನೆ ಎಂಬ ದೂರು ...ಲಿ ಅರಸನ ಬಳಿಗೆ ಹೋಯಿತು. ಮುಸ್ಲಿಂ ...ಲಭೂತವಾದಿಗಳು ಅವನನ್ನು ರಾಜನ ಬಳಿಗೆ ...ೊಯ್ದಿದ್ದರು. ಆ ಸಂತ ಲಾ ಇಲಾಹ ಇಲ್ಲಲ್ಲಾಹ್ ...ಷ್ಟೇ ಹೇಳಿ ನಿಲ್ಲಿಸುತ್ತಾನೆ. ಮುಂದೆ ಹೇಳು ಎಂದರೆ, ...ಹೋಯ್ತು ಎನ್ನುತ್ತಾನೆ. ದೇವರೊಬ್ಬನೇ, ಅಲ್ಲಾಹನ ...ೆ ಬೇರೆ ದೇವರಿಲ್ಲ ಎಂದು ಒಪ್ಪುವ ಆ ಸಂತ

ಮಹಮದರ ಬಗ್ಗೆ ಇರುವ ವಾಕ್ಯವನ್ನು ಒಪ್ಪಲಾರದೇ ಹೋಗಿದ್ದು ಅದನ್ನು ಹೇಳದೆಯೇ ತನ್ನ ಧರ್ಮವು ಕಟ್ಟಿರುವ ಚೌಕಟ್ಟನ್ನು ಒಡೆಯಲು ನೋಡುತ್ತಾನೆ. ಅದರಿಂದೀಚೆಗೆ ಇರುವ ವಿಕಾಸದ ಹರವನ್ನು ದೃಷ್ಟಿಸುತ್ತಾನೆ. ಇಂತಹ ಯೋಗಿಗಳು, ಸಂತರು ಎಂದೂ ಆಳುವವರ್ಗದ, ಧಾರ್ಮಿಕ ಕಟ್ಟಳೆಯ ಅಧೀನಕ್ಕೆ ಬಂದವರೇ ಅಲ್ಲ. ಧರ್ಮದ ಪದ್ಧತಿಗಳನ್ನು ಒಪ್ಪಿದ್ದರೂ, ವ್ಯಕ್ತಿಗತವಾದ ಚೈತನ್ಯದ, ದೇವರೆಂದು ಒಪ್ಪುವ ಮಹಾಸ್ತಿತ್ವದ ವಿಷಯಕ್ಕೆ ಅಧೀನವಾಗುವ, ಅದನ್ನು ಒಪ್ಪುವ ಮತ್ತು ಅಪ್ಪುವಂತಹ ವಿಷಯಗಳಿಗೆ ಮಾತ್ರ ಮಾನ್ಯತೆ ಕೊಡುತ್ತಿದ್ದರೇ ಹೊರತು, ಧಾರ್ಮಿಕ ಕಂದಾಚಾರಕ್ಕೆ ಒಳಗಾಗುವಂತಹ ಕಟ್ಟುಪಾಡುಗಳನ್ನು, ಚೌಕಟ್ಟುಗಳನ್ನು ತೀರಾ ಸಹಜವಾಗಿ



ಮೀರುತ್ತಿದ್ದರು. ಎಲ್ಲಿ ವಿವೇಕವಿರುವುದಿಲ್ಲವೋ, ವಿಚಾರವಿರುವುದಿಲ್ಲವೋ, ಭಕ್ತಿ ಮತ್ತು ಪ್ರೀತಿ ಸಹಜವಾಗಿರುತ್ತಿರಲಿಲ್ಲವೋ ಅವನ್ನು ನಿರಾಕರಿಸುತ್ತಿದ್ದರು. ಸಹಜ ಮನುಷ್ಯರೇ ಇವರಾಗಿರುತ್ತಿದ್ದರು. ಆದ್ದರಿಂದಲೇ ಇವರಿಗೂ ಮತ್ತು ಪುರೋಹಿತ ವರ್ಗ ಹಾಗೂ ಆಳುವವರ್ಗದವರಿಗೂ ದೂರ. ಆಸೆ ಮತ್ತು ಭಯಗಳಿಂದ ಅತೀತರಾದ ಇವರಿಗೆ ಆಳುವವರ್ಗಗಳಿಂದ ಆಗಬೇಕಾದ್ದು ಏನೂ ಇರಲಿಲ್ಲ.

ಉತ್ತರ ಭಾರತದ ಇಂತಹ ಸಂತನೊಬ್ಬನ ದೃಷ್ಟಾಂತವು ಉಲ್ಲೇಖಿಸಲು ಇಲ್ಲಿ ಒಳ್ಳೆಯ ಉದಾಹರಣೆ ಎನಿಸುತ್ತದೆ. ಅಲ್ಲಿನ ರಾಜನಿಗೆ ತಿಳಿಯಿತು ಆತನೊಬ್ಬ ಮಹಾನ್ ಸಂತನೆಂದು. ಕೂಡಲೇ ಆತನನ್ನು ನೋಡಲು ಆತನಿದ್ದಲ್ಲಿಗೇ ಈ ರಾಜ ಹೋದ. ಅಲ್ಲಿ ನದಿ ದಂಡೆಯ ಮೇಲೆ ಮಲಗಿದ್ದ ಸಂತ ಬೆಳಗಿನ ಎಳೆಯ ಬಿಸಿಲಿನಲ್ಲಿ ಸೂರ್ಯಸ್ನಾನ ಮಾಡುತ್ತಿದ್ದ. ಈ ರಾಜ ಆ ಸಂತನ ಬಳಿಗೆ ಹೋದವನು ಆ ಸಂತನಿಗೆ ನಮಿಸಿ ಕೇಳಿದ "ನಾನು ಏನು ಮಾಡಲಿ ನಿಮಗೆ? ನನ್ನಿಂದ ಯಾವ ಸೇವೆ ನಿಮಗಾಗಬೇಕು?" ಎಂದು. ಅದಕ್ಕೆ ಸಂತ, "ಸ್ವಲ್ಪ ಪಕ್ಕಕ್ಕೆ ಹೋಗು" ಎಂದನಂತೆ. ಸೂರ್ಯನ ಬೆಳಕಿಗೆ ಅಡ್ಡವಾಗಿ ನಿಂತಿದ್ದ ರಾಜನಿಂದ ಆ ಸಂತ ಬಯಸಿದ್ದು ಇಷ್ಟೇ, ಆ ಕಡೆಗೆ ಹೋಗಿ ಬೀಳುವ ಬೆಳಕನ್ನು ಬೀಳಬಿಡು ಎಂದು. ಹೀಗೆ ಸಿದ್ಧರು, ಸಾಧಕರು, ಸಂತರು ನಿಗರ್ವಿಗಳಾಗಿ ಆಸೆ ಮತ್ತು ಭಯಗಳಿಲ್ಲದೇ ಇದ್ದವರಾಗಿದ್ದು ಆಳುವವರ್ಗದಿಂದ ಮತ್ತು ಪುರೋಹಿತರಿಂದ ಸದಾ ಮುಕ್ತರಾಗಿರುತ್ತಿದ್ದರು. ನಂತರ ಆಳುವವರ್ಗವೂ ಮತ್ತು ಪುರೋಹಿತವರ್ಗವೂ ಇವರ ಹಿರಿಮೆ ಗರಿಮೆಗಳನ್ನು ಕಂಡುಕೊಂಡು ನಂತರ ಶರಣಾಗಿ ಬರುತ್ತಿದ್ದರು ಎಂಬುದು ಬೇರೆ ಮಾತು.

ಒಟ್ಟಾರೆ ಹರಿಯು ಆಳುವ ಮತ್ತು ಶಿಷ್ಟವರ್ಗವನ್ನು ಪ್ರತಿನಿಧಿಸಿದರೆ, ಹರನು ಶ್ರಮಿಕ, ನೇರ ನುಡಿ ಮತ್ತು ಬದುಕಿನ ವಿರಕ್ತರ ವರ್ಗವನ್ನು ಪ್ರತಿನಿಧಿಸುತ್ತಿದ್ದ.

ಜನಪರ ಶಿವ

ಶೈವಪಂಥದ ಅನುಯಾಯಿಗಳಾದ ಸಾಧಕರ ಜೀವನ ಪದ್ಧತಿಗಳಿಂದ, ಅರೇಬಿಯಾ ಮತ್ತು ಪರ್ಶಿಯಾಗಳಿಂದ ಬಂದಂತಹ ಸೂಫಿ ಸಂತರುಗಳ ಪ್ರಭಾವಗಳಿಂದ, ಶರಣರ ಬದುಕು, ವಚನ ಮತ್ತು ಮುಕ್ತ ಸಂಸ್ಕೃತಿಗಳ ಆಚರಣೆಗಳಿಂದ ಶಿವನ ಸಿದ್ಧಾಂತಗಳು ಮತ್ತಷ್ಟು ಜನಪ್ರಿಯವಾದವು. ಜನಸಾಮಾನ್ಯರ ನಡೆನುಡಿಗಳಲ್ಲಿ ಹಾಸುಹೊಕ್ಕಿದವು. ಸಾಮಾನ್ಯ ಧಾರ್ಮಿಕ ನಂಬುಗೆಗಳಿಗೆ ಹೊರತಾದ ವಿಶಿಷ್ಟವಾದ ಪರಿಕಲ್ಪನೆಗಳು ಹುಟ್ಟುಕೊಂಡವಲ್ಲದೇ, ದೇಸಿ ದೃಷ್ಟಿಯಲ್ಲಿನ ಸಿದ್ಧಾಂತಗಳು ಕಥೆಗಳಾಗಿ, ಕಾವ್ಯಗಳಾಗಿ ಹೊರಬಂದವು. ವೈದಿಕತೆಯ ಶ್ರೇಷ್ಠತೆಯನ್ನು ನಿರಾಕರಿಸುವ ಇದೊಂದು ಪರ್ಯಾಯ ಸಂಸ್ಕೃತಿಯೇ ಆಗಿದ್ದು, ಸಾಂಪ್ರದಾಯಕವಾಗಿ ವೈದಿಕ ಮತ್ತು ಪುರಾಣದ ಹಿನ್ನೆಲೆಯಿಂದ ಬಂದಂತಹ ರಾಮ ಮತ್ತು ಕೃಷ್ಣರ ಪ್ರತಿಮೆಗಳನ್ನು ನಿರಾಕರಿಸಿದ್ದರು.

ಆಳುವ ವರ್ಗದವರಲ್ಲದ, ಪುರೋಹಿತರಲ್ಲದ, ಪುರೋಹಿತ ದೇವರುಗಳಲ್ಲದ ಸ್ಥಳೀಯ ಸಂಸ್ಕೃತಿಯ ಜೋಗಿ, ಜಂಗಮರು ಆರಾಧನೆಗೆ ಒಳಗಾದರು. ಅವರುಗಳಿಗೆ ಶಿವಪದವಿಗಳನ್ನು ನೀಡಲಾಯಿತು. ಸಾಮಾನ್ಯವಾಗಿ ಗಮನಿಸಿದರೆ, ವಿಷ್ಣುಪದವಿಗಳು ಪುರೋಹಿತರ ಅಥವಾ ಆಳುವವರ್ಗದ ಪದವಿಪ್ರದಾನವಾದರೆ, ಶಿವಪದವಿಯು ಪ್ರಜಾಪ್ರಭುತ್ವದ್ದಾಗಿರುತ್ತದೆ. ಜನಪದರು ನೀಡಿರುವಂತಹ ಪದವಿಯಾಗಿರುತ್ತದೆ. ಜನಪರವಾದ ಸಂಸ್ಕೃತಿಯು ಮೆಚ್ಚಿರುವವರಾಗಿರುತ್ತಾರೆ.

ಶಿವ ಮತ್ತು ವಿಷ್ಣುವಿನ ಸಂಘರ್ಷದ ಕಾರಣಗಳನ್ನು ನೋಡಿದರೆ ಹಾಗೂ ಶೈವ ಮತ್ತು ವೈಷ್ಣವರ ಸಂಘರ್ಷದ ಮೂಲಗಳನ್ನು ನೋಡುತ್ತಾಹೋದರೆ ಆಳುವವರ್ಗದ ಮತ್ತು ಶ್ರಮಿಕವರ್ಗದ ಮೂಲಗಳು ಕಾಣುತ್ತವೆ. ವಿಷ್ಣು ಬಂಡವಾಳಶಾಹಿಯಾದರೆ, ಶಿವ ಸಮಾಜವಾದಿ. ನಂತರ ಶೈವ ಸಿದ್ಧಾಂತದ ಖ್ಯಾತಿಯಿಂದಾಗಿ ಆಳುವ ಅರಸರೂ ಶಿವಾರಾಧಕರಾದರು ಎಂಬುದು ಎರಡನೆಯ ವಿಚಾರ.

ಶೈವ ಮತ್ತು ವೈಷ್ಣವಾನುಯಾಯಿಗಳಲ್ಲಿ ನಂತರ ತಲೆದೋರಿದ ಸಂಘರ್ಷದ ಕುರಿತಾಗಿ ಡಿ.ಡಿ.ಕೋಸಾಂಬಿಯವರು ಹೀಗೆ ಬರೆಯುತ್ತಾರೆ: "ಶಂಕರ ಹಾಗೂ ರಾಮಾನುಜರ ಮೇಲ್‌ಸ್ತರದ ಆಧ್ಯಾತ್ಮಿಕತೆಯಲ್ಲಿ ಈ ಪ್ರಶ್ನೆಗೆ ಖಂಡಿತವಾಗಿ ಉತ್ತರ ದೊರಕುವುದಿಲ. ಏಕೆಂದರೆ ಅಲ್ಲಿ ಇಂತಹ ಪ್ರಶ್ನೆಗಳು ಉದ್ಭವಿಸುವುದೇ ಇಲ್ಲ. ನಿಜ ಹೇಳಬೇಕೆಂದರೆ, ಈ ಎರಡು ಪಂಥಗಳ ನಡುವೆ ಅಂತಹ ಯಾವ ಸಂಘರ್ಷವೂ ಇಲ್ಲ, ನಿಜವಾಗಿ ಸಂಘರ್ಷವಿದ್ದದ್ದು ಆಯಾ ಪಂಥಗಳ ಅನುಯಾಯಿಗಳ ನಡುವೆ ಮಾತ್ರ. ಹಾಗಾಗಿಯೇ, ಶಂಕರ ಮತ್ತು ರಾಮಾನುಜರ ಅನುಯಾಯಿಗಳು ದಿನನಿತ್ಯದ ಲೌಕಿಕ ಬದುಕಿನಲ್ಲಿ ಪರಸ್ಪರ ತೀವ್ರವಾಗಿ ಹೊಡೆದಾಡಿದರು. ಆದರೆ ಇವರ ಸಂಘರ್ಷಕ್ಕೆ ಎರಡೂ ದರ್ಶನ ಪದ್ಧತಿಗಳ ಮತಧರ್ಮ ಸೂಕ್ಷ್ಮಗಳಲ್ಲಿ ಇರುವ ಭಿನ್ನಾಭಿಪ್ರಾಯಗಳು ಖಂಡಿತಾ ಕಾರಣವಲ್ಲ. ಎರಡೂ ದರ್ಶನಗಳ ಮತಧರ್ಮದ ಸೂಕ್ಷ್ಮವಾದ ಭೇದಗಳು ತಲೆ ಸಿಡಿಯುವಷ್ಟು ಕ್ಲಿಷ್ಟವಾಗಿದೆ ಎನ್ನುವುದು ನಿಜ. ಹಾಗಿದ್ದಾಗ್ಯೂ ಪರಸ್ಪರ ತಲೆ ಒಡೆಯುವ ಮಟ್ಟಕ್ಕೆ ಹೋಗುವಂತಹದ್ದೇನೂ ಈ ಇಬ್ಬರು ಆಚಾರ್ಯರು ಪ್ರತಿಪಾದಿಸಿದ ದರ್ಶನಗಳಲ್ಲಿ ಇದ್ದಂತೆ ಕಾಣುವುದಿಲ್ಲ."

ವೈದಿಕರ ಶಂಕರ

ವೈದಿಕರು ಶೈವಾಗಮದವರಾದರೂ ಅವರು ಮೂಲ ವೈದಿಕ ಶ್ರೇಷ್ಠತೆಯ ಗೀಳನ್ನು ಬಿಡದೇ ಇರುವುದು ಶಂಕರನ ಮೂಲಕ ಕಾಣುತ್ತದೆ. ಶಿವನನ್ನು ಆತುಕೊಂಡ ವೈದಿಕರು ಆರಾಧಿಸಿದ್ದು ಬುಡಕಟ್ಟಿನ ರುದ್ರನಲ್ಲ, ಬದಲಾಗಿ ಗಿರಿಜೆಯ ಕೈ ಹಿಡಿದು ಶಿಷ್ಟನಾಗಿ ರೂಪುಗೊಂಡ ಶಂಕರನನ್ನು. ಪೂರ್ವಾಶ್ರಮದ ಶಿವನ ಹಾದು ಶಂಕರನಾಗಿ ಬದಲಾದ ಶಿವನನ್ನು ದ್ವಿಜನನ್ನಾಗಿಸಿದರು ವೈದಿಕರು.

ಕರ್ನಾಟಕದಲ್ಲಿ ಗಮನಿಸಿದಂತೆ ರಾಮಾನುಜರು ತಮ್ಮ ಉಳಿವಿಗಾಗಿ ಅರಸರನ್ನು ಓಲೈಸಿಕೊಂಡು ನಡೆಯಲಾರಂಭಿಸಿದ್ದರು. ಕರ್ನಾಟಕದ ರಾಜಮನೆತನದ ವ್ಯಂಗ್ಯವೆಂಬಂತೆ ಜೈನಧರ್ಮದ ಅನುಯಾಯಿಯಾಗಿದ್ದ ಬಿಟ್ಟಿದೇವ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನಾಗಿದ್ದು ಎಲ್ಲವೂ ಧಾರ್ಮಿಕ ರಾಜಕಾರಣ. ವೈಷ್ಣವಧರ್ಮ ಒಬ್ಬ ರಾಜನು ಸ್ವೀಕರಿಸಿ ಅವನು ವ್ಯಕ್ತಿಗತವಾಗಿ ಅನುಸರಿಸಿದ ಎಂದು ಮನ್ನಿಸಿಬಿಡುವಷ್ಟು ಸರಳವಾಗಿ ಮುಂದಿನದು ಇರಲಿಲ್ಲ. ಹನ್ನೆರಡನೆಯ ಶತಮಾನದಲ್ಲಿ ಪೆಟ್ಟುತಿಂದ ಜೈನಧರ್ಮವು ಮತ್ತೆ ಮತ್ತೆ ಅಂತಹ ಪೆಟ್ಟುಗಳನ್ನು ತಿಂದಿರುವುದರ ಉಲ್ಲೇಖಗಳು ಹಲವು ಶಾಸನಗಳಲ್ಲಿ ದಾಖಲಾಗಿವೆ. ಆಳುವ ವರ್ಗದವರ ದೌರ್ಬಲ್ಯವು ಶ್ರಮಿಕವರ್ಗದವರ ಬಲಗೆಡಿಸುವಲ್ಲಿ ಪ್ರಧಾನಪಾತ್ರ ವಹಿಸುವುದರಿಂದ ಅಸ್ತಿತ್ವಕ್ಕಾಗಿ ಹೋರಾಟಗಳು ನಡೆಯಬೇಕಾಗುತ್ತದೆ.

ಒಟ್ಟಾರೆ ಆಳುವವರ್ಗದವರ ಪಿತ್ತವೇರುವಂತೆ ಧಾರ್ಮಿಕತೆಯೂ ತಳುಕು ಹಾಕಿಕೊಂಡರೆ, ದುಡಿಯುತ್ತಾ, ಬೆವರು ಬಸಿಯುತ್ತಾ, ಅಂದಂದಿನ ಆಹಾರವನ್ನು ಗಳಿಸಿಕೊಂಡು ಸೇವಿಸುತ್ತಾ ಇದ್ದಂತಹ ಶ್ರಮಿಕವರ್ಗದವರು ಭಂಗಬವಣೆ ಪಡುತ್ತಿದ್ದರು. ದುಡಿದು, ತನ್ನ ಬದುಕನ್ನು ನಿರ್ವಹಿಸುವಂತಹ ಕೆಲಸಕ್ಕೆ ಬಾರದ ದೈವ-ಧರ್ಮದ ಪ್ರಹಾರಗಳಿಗೆ ಸಿಕ್ಕು ಜನಸಾಮಾನ್ಯರು ಸಾಯುತ್ತಿದ್ದರು.

ಶ್ರಮಿಕವರ್ಗದಿಂದಲೇ ಬಂದಿದ್ದಂತಹ ಯೇಸುವೂ ಕೂಡ ತನ್ನ ಪ್ರಾರ್ಥನೆಯಲ್ಲಿ ಅಂದಂದಿನ ಆಹಾರಕ್ಕಾಗಿ ಪ್ರಾರ್ಥಿಸಿದ್ದ. ತನ್ನ ಬೋಧನೆಗಳಲ್ಲಿ ಶೇಖರಿಸಿ ಇಡುವಂತಹ ವಿದ್ಯಮಾನವನ್ನು ಪ್ರೋತ್ಸಾಹಿಸಲಿಲ್ಲ.

ಇಷ್ಟೆಲ್ಲಾ ಪೀಠಿಕೆ ಮುಂದಿನ ಹರಿ ಹರ ಸಂಘರ್ಷದ ಪೂರ್ವಭಾವಿಯಾಗಿ. ■

ಅರಣ್ಯಗಳನ್ನೇ ನಾಶ ಮಾಡಲು ಮೋದಿ ಸಜ್ಜು

ಪ್ರಗತಿಪರರು ಚುನಾವಣಾಪೂರ್ವದಲ್ಲಿ ನುಡಿದಿದ್ದ ಭವಿಷ್ಯವಾಣಿ ನಿಜವಾಗುತ್ತಿದೆ. ಭಾರತವನ್ನು ಹಿಂದೂ ರಾಷ್ಟ್ರವಾಗಿಸಲು ಪಣ ತೊಟ್ಟಿರುವ ಪ್ರತಿಗಾಮಿ ಸಂಘಪರಿವಾರದ ಗುಪ್ತ ಕಾರ್ಯಸೂಚಿಯ ಅಂಶಗಳು ಒಂದೊಂದಾಗಿ ಹೊರಬರಲಾರಂಭಿಸಿವೆ. ಮರದೊಳಗಿನ ಹುಳುಗಳಂತೆ.

ಹಳೆ ಸರಕಾರಿ ಕಡತಗಳ ನಾಶ, ವಿವೇಕಾನಂದ ಫೌಂಡೇಷನ್ ಎಂಬ ಸಂಘಪರಿವಾರಿ ಚಿಂತನಾಕೂಟದ ಸದಸ್ಯರನ್ನು ಕೇಂದ್ರ ಸರ್ಕಾರದ ಪ್ರಮುಖ ಹುದ್ದೆಗಳಿಗೆ ನೇಮಿಸಿರುವುದು, ಐಸಿಎಚ್‌ಆರ್‌ನಂತಹ ಸಂಶೋಧನಾ ಸಂಸ್ಥೆಗಳಿಗೆ ಸಂಘಪರಿವಾರದ ಚೇಲಾಗಳ ನೇಮಕ, ಅಮಿತ್ ಶಾ ಪರ ವಾದಿಸಿದ ಲಲಿತ್ ಉದಯ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಂಡಿರುವುದು, ಸುಪ್ರೀಂಕೋರ್ಟಿನ ಹಾಲಿ ನ್ಯಾಯಾಧೀಶ ಎ.ಆರ್.ದವೆ, ತಾನು ಸವಾಧಿಕಾರಿ ಆಗಿದ್ದಿದ್ದರೆ ಒಂದನೆ ತರಗತಿಯಿಂದಲೇ ಗೀತೆ, ಮಹಾಭಾರತಗಳ ಅಧ್ಯಯನವನ್ನು ಆರಂಭಿಸುತ್ತಿದ್ದೆನೆಂದು ಹೇಳಿರುವುದು, ಶಿಕ್ಷಣಕ್ಷೇತ್ರದ ಸಂಪೂರ್ಣ ಕೇಸರೀಕರಣಕ್ಕೆ ಭರದ ಸಿದ್ಧತೆ, ನಕಲಿ ಎನ್‌ಕೌಂಟರ್ ಪ್ರಕರಣಗಳಲ್ಲಿ ಆರೋಪಿಗಳಾಗಿರುವ ಪೊಲೀಸ್ ಅಧಿಕಾರಿಗಳ ಮರುನೇಮಕ, ಗೋವಾ ಮಂತ್ರಿ ದೀಪಕ್ ದವಾಳಿಕರ್, ಅಶೋಕ್ ಸಿಂಘಾಲ್, ಸಿ.ಟಿ.ರವಿ, ತೊಗಾಡಿಯಾ, ಶಿವಸೇನಾ ಸಂಸದ ಇತ್ಯಾದಿಗಳ ಭೀಕರ ನಡೆನುಡಿಗಳು, ಮಾಯಾ ಕೊಡ್ನಾನಿ, ಬಾಬು ಬಜರಂಗಿಗಳಿಗೆ ಜಾಮೀನು, ಪರಿಸರವಾದಿ ಸರಕಾರೇತರ ಸಂಸ್ಥೆಗಳ ವಿರುದ್ಧ ಗುಪ್ತಚರ ಇಲಾಖೆಯ ವರದಿ ಎಂಬ ಬ್ರಹ್ಮಾಸ್ತ್ರ ಪ್ರಯೋಗ, ಭೂಸ್ವಾಧೀನ ಕಾಯ್ದೆಗೆ ತರಲುದ್ದೇಶಿಸಿರುವ ತಿದ್ದುಪಡಿ ಮುಂತಾದ ವಿದ್ಯಮಾನಗಳೆಲ್ಲ ಕಾಕತಾಳೀಯವಲ್ಲ, ಎಲ್ಲವೂ ಒಂದು ಪೂರ್ವಯೋಜಿತ ಅಜೆಂಡಾದ ಭಾಗವಾಗಿವೆ.

ಕಾರ್ಪೊರೇಟುಗಳ ಋಣಭಾರವನ್ನು ತೀರಿಸಲು




ಹೊರಟಿರುವ ನರೇಂದ್ರ ಮೋದಿ ನೇತೃತ್ವದ ನೂತನ ಕೇಂದ್ರ ಸರ್ಕಾರ ಇದೀಗ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ರೆಕ್ಕೆಗಳನ್ನು ಕತ್ತರಿಸಿ ಹಾಕಿದೆ. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ ಮಂಡಳಿಯಲ್ಲಿ 15 ಸದಸ್ಯರು ಇರಲೇಬೇಕು. ಆದರೆ ಎನ್‌ಡಿಎ ಸರ್ಕಾರ ಕೇವಲ ಮೂವರು ಸರ್ಕಾರಿ ಅಧಿಕಾರಿಗಳನ್ನು ನೇಮಿಸಿದೆ. ಒಟ್ಟು 12 ಸದಸ್ಯರಿರುವ ಸ್ಥಾಯಿ ಸಮಿತಿಯಲ್ಲಿ 8 ಮಂದಿ ಸರಕಾರೇತರ ಪರಿಸರವಾದಿಗಳು ಮತ್ತು ವನ್ಯಜೀವಿ ತಜ್ಞರ ಉಪಸ್ಥಿತಿ ಕಡ್ಡಾಯವೆಂದಿದ್ದರೂ ಕೇವಲ ಒಬ್ಬನನ್ನು ನೇಮಿಸಲಾಗಿದೆ.

ಸದ್ಯದಲ್ಲೇ ಸಚಿವ ಜಾವಡೇಕರ್ ನೇತೃತ್ವದಲ್ಲಿ ನಡೆಯಲಿರುವ ಸಮಿತಿಯ ಸಭೆಯಲ್ಲಿ ಯಾರೆಲ್ಲ ಭಾಗಹಿಸಲಿದ್ದಾರೆ? ಹಿರಿಯ ಅರಣ್ಯಾಧಿಕಾರಿಗಳು, ಗುಜರಾತ್ ಸರ್ಕಾರದ GEER Foundation ಎಂಬ ಸಂಸ್ಥೆಯಿಂದ ಒಬ್ಬ ಅರಣ್ಯಾಧಿಕಾರಿ, ಗುಜರಾತಿನ ಒಬ್ಬ ನಿವೃತ್ತ ಅರಣ್ಯಾಧಿಕಾರಿ, ಕೇವಲ ಒಬ್ಬ ಸರಕಾರೇತರ ಪರಿಸರವಾದಿ ಮತ್ತು ವನ್ಯಜೀವಿ ತಜ್ಞ, ಮತ್ತು ಯಾವ ರಾಜ್ಯಗಳು ಯೋಜನೆಗಳ ಪ್ರಸ್ತಾಪಗಳನ್ನು ಕಳುಹಿಸಿವೆಯೋ ಆ ರಾಜ್ಯಗಳ ಹಿರಿಯ ವನ್ಯಜೀವಿ ಅಧಿಕಾರಿಗಳು.

ಸಭೆಯ ಅಜೆಂಡಾವನ್ನು ರಹಸ್ಯವಾಗಿ ಇರಿಸಲಾಗಿದ್ದು ಕೇವಲ ಸ್ಥಾಯಿ ಸಮಿತಿಯ ಸದಸ್ಯರಿಗಷ್ಟೆ ಹಂಚಲಾಗಿದೆ. ಈ ಹಿಂದೆ ಸಾರ್ವಜನಿಕರಿಗೆ ಮುಂಚಿತವಾಗಿ ತಿಳಿಸಿ ಅವರ ಸಲಹೆಗಳನ್ನು ಆಹ್ವಾನಿಸುವ ಒಂದು ಪಾರದರ್ಶಕ ಪದ್ಧತಿ ಇತ್ತು.

ಎರಡು ದಿನಗಳ ಸಭೆಯಲ್ಲಿ ತೈಲಾನ್ವೇಷಣೆ, ಹೆದ್ದಾರಿಗಳು, ಉಷ್ಣ ವಿದ್ಯುತ್ ಸ್ಥಾವರಗಳು, ಗಣಿಗಾರಿಕೆ ಮತ್ತು ರಕ್ಷಣಾ ಕ್ಷೇತ್ರದ ಕೆಲವು ಯೋಜನೆಗಳೂ ಸೇರಿದಂತೆ ಸುಮಾರು 140 ಪ್ರಸ್ತಾಪಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ. ಇವುಗಳ ಪೈಕಿ ಕೆಲವೊಂದು ಯೋಜನೆಗಳು ಒಂದೋ ವನ್ಯಜೀವಿ ಅಭಯಾರಣ್ಯಗಳ




ಮಧ್ಯದಲ್ಲಿವೆ ಇಲ್ಲಾ ತೀರ ಸಮೀಪದಲ್ಲಿವೆ. ಮೂ
ಪ್ರಕಾರ ಈ ಅಭಯಾರಣ್ಯಗಳ ವಿಸ್ತೀರ್ಣವನ್ನು ಕ
ಮಾಡುವ ಪ್ರಸ್ತಾಪಗಳಿವೆ.

ಈ ಬೆಳವಣಿಗೆಗಳನ್ನೆಲ್ಲ ಗಮನಿಸಿದಾಗ ಪರಿ
ವನ್ಯಜೀವಿಗಳಿಗೆ ಆಗಬಹುದಾದ ಹಾನಿಯ ಕು
ಸಮರ್ಪಕ ಅಧ್ಯಯನ ಕೈಗೊಳ್ಳದೇ ಯೋಜನೆಗಳಿಗೆ ಹ
ನಿಶಾನೆ ತೋರುವ ಎಲ್ಲಾ ಸಾಧ್ಯತೆಗಳು ಗೋಚರಿಸು
ಪರಿಣಾಮವಾಗಿ ಸುಮಾರು 80 ರಾಷ್ಟ್ರೀಯ ಉದ್ಯಾನ
ಹುಲಿ ಸಂರಕ್ಷಣಾ ವಲಯಗಳು ಮತ್ತು ವನ್ಯ
ಅಭಯಾರಣ್ಯಗಳ ಮೇಲೆ ಅಪಾಯದ
ತೂಗಲಾರಂಭಿಸಿದೆ.

(ಆಧಾರ: ಬಿಸ್‌ನೆಸ್ ಸ್ಟಾಂಡರ್ಡ್)

ಪರಮೇಶ್ವರರದ್ದು ದಿಢೀರ್ ದಲಿತ ಪ್ರಜ್ಞೆ

ಒಬ್ಬ ದಲಿತ ಹಿಂದೂತ್ವದ ಸಭೆಗಳಲ್ಲಿ ಧೈರ್ಯದಿಂದ ಭಾಗವಹಿಸಿದರೂ ಆತನಿಗೇ ಸಂಬಂಧಿಸಿದ ದಲಿತ ಸಮಾರಂಭಗಳಲ್ಲಿ ಭಾಗವಹಿಸಲು ಹಿಂಜರಿಯುತ್ತಾನೆ. ದಲಿತಪರ ಸಭೆ ಮೆರವಣಿಗೆಗಳಲ್ಲಿ ಆವತ್ತಿನ ಕೂಲಿ ಬಿಟ್ಟು ಭಾಗವಹಿಸುವ ಬಡವರನ್ನು ಕಾಣಬಹುದೇ ವಿನಹ ದಲಿತ ಹಿನ್ನೆಲೆಯಿಂದಾಗಿಯೇ ಲಾಭ ಪಡೆದಂತಹ 'ಫಲಾನುಭವಿ'ಗಳನ್ನು ನೀವು ಕಾಣಲಾರಿರಿ. (ಭಾಗವಹಿಸಿ ಮುನ್ನಡೆಸಬೇಕಾದವರು ಜಾರಿಕೊಳ್ಳಲು ನೋಡುವ ಈ ಬೆಳವಣಿಗೆಯೇ ದಲಿತ ಚಳವಳಿಯ ಹಿನ್ನಡೆಗೆ ಮೂಲಕಾರಣಗಳಲ್ಲೊಂದು.) ಸಾಮಾಜಿಕ ಕೀಳರಿಮೆಯೋ, ಒಣಪ್ರತಿಷ್ಠೆಯೋ ಅಥವಾ ಇನ್ನೂ ಅನೇಕಾನೇಕ ಕಾರಣಗಳು ಇದಕ್ಕಿದ್ದಿರಬಹುದಾದರೂ ಈ ತನಕ ದಲಿತರನ್ನು ದೂರವಿಟ್ಟು ಬೆಳೆದಂತವರು ತಮ್ಮ ಸ್ವಾರ್ಥಸಾಧನೆಯ ವಿಚಾರ ಬಂದಾಗ ದಿಢೀರ್ ದಲಿತ ಪ್ರಜ್ಞೆಯನ್ನು ಆಹ್ವಾನಿಸಿಕೊಂಡು ಚೀರಾಡುವುದನ್ನು ನೋಡಿದಾಗ ನಗುಬರುತ್ತದೆ; ಜೊತೆಗೆ ವಾಕರಿಕೆಯೂ ಕೂಡ.



ಇತ್ತೀಚೆಗೆ ಪೊಲೀಸ್ ಅಧಿಕಾರಿಯೊಬ್ಬ ಹೆಣ್ಣಿನ ಚಿತ್ರ ಕ್ಲಿಕ್ಕಿಸಿದ್ದು ಭಾರೀ ದೊಡ್ಡ ಸುದ್ದಿಯಾಗಿತ್ತು, ಪರ ರಾಜ್ಯದಿಂದ ದೊಡ್ಡ ಹಿನ್ನೆಲೆಯಿಂದ ಬಂದಿರುವ ಈ ದೊಡ್ಡ ಮನುಷ್ಯ ಮಾಧ್ಯಮಗಳ ಮುಂದೆ ಕಣ್ಣೀರಿಡುತಾ ತಾನು ದಲಿತನೆಂಬ ಕಾರಣಕ್ಕೆ ತನ್ನನ್ನು ಸಿಕ್ಕಿಸಲಾಗುತ್ತಿದೆಯೆಂದು ಆರೋಪಿಸಿದ್ದರು.



ಇವರ "ಕರುಣಾಜನಕ" ಕಥೆ ಕೇಳಿ ರಾಜ್ಯಾದ್ಯಂತ ಪ್ರತಿಭಟನೆಗಳೂ ನಡೆದಿದ್ದವು. ಆದರೀಗ ಫೊರೆನ್ಸಿಕ್ ವರದಿಯಿಂದ ತಿಳಿದುಬಂದಿರುವುದೇನೆಂದರೆ ಸುಭಗನಂತೆ ಮಾತಾಡಿದ್ದ ಈ ವೀರ ಕಾಫಿ ಶಾಪ್‌ನಲ್ಲಿ ಮಹಿಳೆಯ ಫೋಟೋ ಕ್ಲಿಕ್ಕಿಸಿದ್ದು ಹೌದಂತೆ. ತಾನು ಪೆಂಗನಾಗುವುದು ಹತ್ತಿರವೆನಿಸಿದಾಗ ವಿಷಯಕ್ಕೆ ಹೊಸ ತಿರುವುಕೊಡಲು ಈ ವೀರನ ದಲಿತ ಪ್ರಜ್ಞೆ ದಿಢೀರ್ ಜಾಗೃತವಾಗಿತ್ತು,

ಅದೇರೀತಿ ದಲಿತರನ್ನು ದೂರವಿಟ್ಟೇ ಬೆಳೆದ ಪರಮೇಶ್ವರ್ ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಟ್ಟ ಕಾರಣಕ್ಕೆ ತಮ್ಮ ದಲಿತ ಪ್ರಜ್ಞೆಯನ್ನೀಗ ತೋರ್ಪಡಿಸ ಹೊರಟಿದ್ದಾರೆ. ಮೊನ್ನೆಯ ಚುನಾವಣೆಯ ಮೊದಲು ಶೋಮ್ಯಾನ್ ಶಿವರಾಮ್ ಆಯೋಜಿಸಿದ್ದ ಛಲವಾದಿ ಸಮ್ಮೇಳನದಲ್ಲಿ ದಲಿತರ ಬಗ್ಗೆ ಇನ್ನಿಲ್ಲದ ಕಾಳಜಿ ತೋರುವಂತೆ ಖರ್ಗೆ ಮೊದಲಾದವರಿಗಾದ ಅನ್ಯಾಯವನ್ನು ಉಲ್ಲೇಖಿಸಿ ಇದೇ ಪರಮೇಶ್ವರ್ ಮಾತಾಡಿದ್ದರು. ಈಗಲೂ ಆ ಚಾಳಿಯನ್ನು ಮುಂದುವರೆಸಿ ವಿನಾಕಾರಣ ಸಿದ್ದರಾಮಯ್ಯನವರೆದುರು ಮಗ್ಗುಲಮುಳ್ಳಂತೆ ವರ್ತಿಸುತ್ತಿದ್ದಾರೆ.

ದಲಿತರ ಬಗ್ಗೆ ಕಾಳಜಿಯಾಗಲೀ, ಖರ್ಗೆಯವರ ಬಗ್ಗೆ ನಿಜ ಅನುಕಂಪವಾಗಲೀ ಈ ಮನುಷ್ಯನಿಗಿದ್ದಂತಿಲ್ಲ, ಅವರಿಗೆ ಇರುವುದು ಗಟ್ಟಿ ಕುರ್ಚಿಯೆಂಬ ಸ್ವಾರ್ಥ ಕನಸೊಂದೇ. ಅದಕ್ಕೆ ಸುಮ್ಮನೆ ದಲಿತನೆಂಬ ಬಿಲ್ಡಪ್! ಇದು ತಮಾಷೆಯಾಗಿ ಕಾಣಿಸುವುದಿಲ್ಲವೇ?

- ರವಿ ಪುತ್ತೂರ, ದಕ

ಪರಶುರಾಮ ಮಾತ್ರ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಸಹಿಸುತ್ತಿದ್ದನೆ?

ವೈದಿಕರ ಕಟ್ಟುಕಥೆಯಿಂದಾಗಿ ನಮ್ಮ ಕರಾವಳಿಯ ಶೂದ್ರರ ಕಣ್ಣಿನಲ್ಲಿ ಕವಿದಿದ್ದ ಪರಶುರಾಮ ಸೃಷ್ಟಿ ಎಂಬ ಪೊರೆ ತಮ್ಮ ಪತ್ರಿಕೆಯಿಂದಾಗಿ ಕೊನೆಗೂ ಕಳಚಿತು. ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಯೋಗೇಶ್ ಮಾಸ್ಟರ್, ಶಶಿ ಪುತ್ತೂರ್, ಪ್ರವೀಣ್ ಶೆಟ್ಟಿ, ಅವಿನಾಶ್ ಎಮ್.ಎಸ್ ಮತ್ತು ಎಸ್.ಎಸ್.ಗೇರುಕಟ್ಟೆ ಇವರೆಲ್ಲರ ಲೇಖನಗಳಿಂದಾಗಿ ಈಗ ನಮ್ಮ ಕರಾವಳಿಯ ಜನರು ಮಾತುಮಾತಿಗೆ ತಮ್ಮದು ಪರಶುರಾಮನ ಸೃಷ್ಟಿ ಎಂದು ಬಡಬಡಿಸುವುದನ್ನು ಕಡಿಮೆ ಮಾಡಿದ್ದಾರೆ.

ಕ್ಷತ್ರಿಯರನ್ನು ಭಯಂಕರವಾಗಿ ದ್ವೇಷಿಸುತ್ತಿದ್ದ ಬ್ರಾಹ್ಮಣ ಪರಶುರಾಮನು ತಾನೇ ಸೃಷ್ಟಿಸಿದ ಭೂಮಿಯಲ್ಲಿ ಅರ್ಧಕ್ಕೂ ಮಿಕ್ಕಿ ಕ್ಷತ್ರಿಯ ಜಾತಿಗಳಾದ ಬಂಟ-ಬಿಲ್ಲವ-ಮೊಗವೀರ- ರಾಮಕ್ಷತ್ರಿಯ ಮುಂತಾದ ಜಾತಿಗಳನ್ನು ತಂದು ನೆಲೆಗೊಳಿಸಲು ಎಂದಾದರೂ ಸಾಧ್ಯವೇ? ಜತೆಗೆ ಸಂಶಯ ಬುದ್ಧಿಯ ತಂದೆಯ ಅಪ್ಪಣೆಯಂತೆ ತನ್ನ ನಿರಪರಾಧಿ ತಾಯಿಯನ್ನೇ ಕಡಿದು ಕೊಂದ ಅಪ್ಪಟ ಪಿತೃ ಪ್ರಧಾನ ಸಂಸ್ಕೃತಿಯ ಅನುಯಾಯಿ ಪರಶುರಾಮನು ತನ್ನ ನಾಡಿನ ಮುಕ್ಕಾಲು ಪಾಲು ಮೂಲ ನಿವಾಸಿಗಳು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಅನುಸರಿಸುವುದನ್ನು ಎಂದಾದರೂ ಸಹಿಸಿಕೊಳ್ಳುವುದು ಸಾಧ್ಯವಿತ್ತೇ? ಎಂಬ ಪ್ರಶ್ನೆಗಳನ್ನು ಈಗ ಇಲ್ಲಿಯ ಜನರು ಕೇಳಲು ಶುರು ಮಾಡಿದ್ದಾರೆ.

ತುಳುನಾಡಿನವರಲ್ಲಿ ಈ ರೀತಿ ಜಾಗೃತಿ ಮೂಡಿಸಿದ್ದಕ್ಕಾಗಿ ತಮ್ಮ ಘನ ಪತ್ರಿಕೆಗೆ ಧನ್ಯವಾದಗಳು!

- ಅಭಿಷೇಕ್ ಪಡಿವಾಳ್ ಜೈನ್, ಸುಳ್ಯ

ಶರಣರಿಗೆ ಬಸವ ಧರ್ಮೀಯರಿಗೆ ನಿತ್ಯ ಪವಿತ್ರ ದಿನಗಳು


ಎಲ್ಲ ಧರ್ಮಗಳಲ್ಲಿ ಪವಿತ್ರ ದಿನಗಳು, ಮಾಸಗಳು ಅಂತ ಇದೆ. ಜೈನರಿಗೆ ಚತುರ್ಮಾಸ ಪಾಲನೆ, ಮುಸ್ಲಿಮರಿಗೆ ರಂಜಾನ್ ತಿಂಗಳು, ಹಿಂದೂಗಳಿಗೆ ಶ್ರಾವಣ, ಕ್ರೈಸ್ತರಿಗೆ ಕ್ರಿಸ್‌ಮಸ್ ಹಬ್ಬ ಡಿಸೆಂಬರ್ ತಿಂಗಳು... ಹೀಗೆ ಎಲ್ಲ ಧರ್ಮೀಯರಿಗೆ ಅವರವರ ಪವಿತ್ರ ದಿನಗಳುಂಟು. ಆದರೆ ಶರಣರಿಗೆ ಬಸವಾದಿ ಭಕ್ತರಿಗೆ ಪವಿತ್ರವೆಂಬ ಬೇರೆ ದಿನಗಳಿಲ್ಲ. ಅವರಿಗೆ ಪ್ರತಿ ದಿನವೂ ಶುಭವೆ ಹಾಗು ಪವಿತ್ರವೇ. ಅಷ್ಟಮಿ ನವಮಿ ಎಂಬ ಕಲ್ಪಿತವು ಏಕೆ ಎಂಬುದು ಶರಣರ ಪ್ರಶ್ನೆ.

ಶರಣರು ಸ್ಥಾವರವನ್ನು ವಿರೋಧಿಸಿದ್ದಾರೆ. ಅವರಿಗೆ ಅವರ ಅಂತರಂಗದ ಆತ್ಮದ ಕುರುಹು ಇಷ್ಟಲಿಂಗ. ಅದನ್ನು ಹೊರತುಪಡಿಸಿ ಮತ್ತೊಂದಕ್ಕೆ ಎರಗುವುದು ಹಾದರ, ಬೌದ್ಧಿಕ ದಿವಾಳಿತನ. ಸ್ವಾಮಿಗಳು ಅನುಭಾವಿ ಅನಿಸಿಕೊಂಡವರು ಸಮಾಜವನ್ನು ತಪ್ಪು ದಾರಿಗೆ ನೂಕುತ್ತಿದ್ದಾರೆ. ಇಂತಹ ಸರ್ವ ಶ್ರೇಷ್ಠ ಧರ್ಮವನ್ನು ನಮ್ಮ ಸ್ವಾಮಿಗಳು ಮತ್ತು ಸಂಶೋಧಕರು ಹಾಳಗೆಡುವುತ್ತಿದ್ದಾರೆ, ಬಸವಣ್ಣನನ್ನು ಬಂಡವಾಳ ಮಾಡಿಕೊಂಡಿದ್ದಾರೆ. ಇದು ಅವರಿಗೆ ಉದ್ಯಮ.

ಬಸವ ಭಕ್ತರು ಇನ್ನು ಮುಂದಾದರೂ ಎಚ್ಚರವಾಗಿ ಪ್ರತಿಭಟಿಸದಿದ್ದರೆ ಬಸವ ಧರ್ಮಕ್ಕೆ ಅಪಾಯ ತಪ್ಪಿದ್ದಲ್ಲ.

- ಡಾ. ಶಶಿಕಾಂತ ಪಟ್ಟಣ, ಪೂನ


ಪತ್ರಿಕೆಯಲ್ಲಿ ವಿ.ಆರ್. ಭಟ್ಟನ ವಿಕೃತ ಚಪಲದ



ಅತ್ಯಾಚಾರಿ ಪ್ರತಿಕ್ರಿಯೆಯನ್ನು ಸರಿಯಾಗಿ ಖಂಡಿಸಿ
ಬಷೀರ್‌ನಂತಹ ಸಜ್ಜನ ಸಂಪಾದಕ-ಲೇಖಕರನ್ನು ತೆಗ
ಅಸಹ್ಯಕರ ರೀತಿ ಭಟ್ಟನ ಮಾನ-ಮಾನವೀಯ
ಅವನತಿಗೆ ಸಾಕ್ಷಿಯಾಗಿದೆ. ಇಂತಹ ಅತ್ಯಾಚಾರಿ ಬ
ಚೆನ್ನಿಗರಾಯರಿಗೆಲ್ಲ ಸ್ತ್ರೀಕುಲದ ಧಿಕ್ಕಾರವಿರಲಿ.

- ಜ್ಯೋತಿ ಗುರುಪ್ರಸಾದ್, ಕಾ

ಪತ್ರಿಕೆಯ ಆಗಸ್ಟ್ 20, 2014ರ ಸಂಚಿಕೆಯಲ್ಲಿ
ರಾಜ್ ಕುಟುಂಬದ ನಿಶ್ಚಿತಾರ್ಥದ ಕಾರ್ಯಕ್ರಮದ
ಸವಿಸ್ತಾರವಾಗಿ ವರದಿ ಮಾಡಿದ್ದೀರಿ. ಅದರ ಜ
ಅಮ್ಮ ಲೀಲಾವತಿಯವರನ್ನು ಆ ಕಾರ್ಯಕ್ರಮಕ್ಕೆ ಕ



ಹೃದಯವಂತಿಕೆ ತೋರಿಸಿದ್ದನ್ನೂ ವರದಿ
ದಾಖಲಿಸಿರುವುದು ಒಳ್ಳೆಯ ವಿಷಯ. ಮು
ದಿನಗಳಲ್ಲೂ ಲೀಲಾವತಿಯವರನ್ನು ರಾಜ್ ಕುಟ
ಗೌರವದಿಂದ ಕಾಣುವಂತಾಗಲಿ.

- ಬಿ.ಬಿ. ರಾಜ್, ಹಂಪಾಪಟ್ಟಣ, ಎಚ್.ಬಿ

ಆಗಸ್ಟ್ 13, 2014 ಸಂಚಿಕೆಯಲ್ಲಿ ಯೋ
ಮಾಸ್ಟರ್ ಅವರ 'ರುದ್ರ: ಬೇಟೆಗಾರ ಮತ್ತು ಅ
ಒಡೆಯ' (ಪುರಾಣದ ಹೂರಣ ಅಂಕಣ) ಪುರ
ಇನ್ನೊಂದು ಲೇಖನವನ್ನು ತಿಳಿಸುತ್ತದೆ. ಧನ್ಯವಾದ

- ನಿಲೇಶ್, ಆಲಮಟ್ಟಿ ಡ್ಯಾಮ್, ಬಿಜ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com ಗೆ
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.
ಪ್ರತಿಕ್ರಿಯೆಗಳನ್ನು 9980331427 ನಂಬರ್
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ

ರಾಬಿನ್ ವಿಲಿಯಮ್ಸ್ ಎಂಬ ಹಾಸ್ಯ ನಟನ ದುರಂತ ಸಾವು

...ತೀತ ವಿಶಿಷ್ಟ ಹಾಗೂ ಅಪರೂಪದ ಕಲಾವಿದನಾಗಿ ...ಕೊಂಡ ವ್ಯಕ್ತಿ, ಕುಡಿತ, ಸಿಗರೇಟ್, ಕೊಕೇನ್‌ಗಳ ...ಕ್ಕೆ ಒಳಗಾಗಿದ್ದ ಈತ ಹೃದಯ ಸಂಬಂಧಿ ಕಾಯಿಲೆ ...ದ ಅದೆಷ್ಟೋ ಸಲ ಆಸ್ಪತ್ರೆಗೆ ದಾಖಲಾಗಿದ್ದ ಮೊದಲಿನ ...ಚುರುಕುತನ ಕ್ಷೀಣಿಸಿತ್ತು. ಸಾಕಷ್ಟು ಡಿಪ್ರೆಶನ್‌ನಿಂದ ...ಯುತ್ತಿದ್ದ ಈ ರಾಬಿನ್ ವಿಲಿಯಮ್ಸ್ ಮೊನ್ನೆ (ಆಗಸ್ಟ್ ...) ತನ್ನ ಅರವತ್ಮೂರನೇ ವಯಸ್ಸಿನಲ್ಲಿ ಆತ್ಮಹತ್ಯೆ ...ಡಿಕೊಂಡ.


...ಜಗತ್ತಿನ ಕೆಲವೇ ಕೆಲವು ಮುಖ್ಯಕಲಾವಿದರಲ್ಲಿ ಈತನೂ ... ಶಾಲಾದಿನಗಳಲ್ಲಿ ಸಣ್ಣಪುಟ್ಟ ನಾಟಕಗಳಲ್ಲಿ ಪಾತ್ರ ...ಯುತ್ತಾ ಎಲ್ಲರನ್ನೂ ತನ್ನೆಡೆಗೆ ಸೆಳೆಯುತ್ತಿದ್ದ ವಿಲಿಯಮ್ಸ್ ...ಹರೆಯದ ದಿನಗಳಲ್ಲಿ ಕಿರುತೆರೆಗೆ ಬಂದ; ಈತನಿಗೆ ...ಂಕರ ಹಾಸ್ಯ ಪ್ರಜ್ಞೆ ಇತ್ತು. ಈತನ ಸಮಕಾಲೀನ ...ಗಿಲ್ಲದ ವಿಶೇಷ ಆಂಗಿಕಚಲನೆ, ಮಾತಿನ ಚುರುಕುತನ, ...ಂಗ್ ಇವನಿಗಿತ್ತು. ಆ ಜಮಾನದ ಇತರ ಅನೇಕ ...ು ತಾಂತ್ರಿಕತೆ, ಮಾಂತ್ರಿಕತೆಯ ಕಡೆ ಗಮನ ಕೊಟ್ಟು ...ಳಗಿನ ನಟನಾ ಸಾಮರ್ಥ್ಯವನ್ನು ಶಾಸ್ತ್ರೀಯವಾಗಿ ...ಹಾಕಲು ಯತ್ನಿಸುತ್ತಿದ್ದಾಗ ವಿಲಿಯಮ್ಸ್ ಬೇರೆಯದೇ ...ಯಲ್ಲಿ ತನ್ನನ್ನು ತೆರೆದುಕೊಂಡ.

...ಹ್ಯಾಪಿ ಡೇಸ್' ಎಂಬ ಟಿವಿ ಸೀರೀಸ್‌ನಲ್ಲಿ ಧ್ವನಿಯ ...ತೆ, ಬಾಡಿ ಲಾಂಗ್ವೇಜ್ ಮೂಲಕ ಗಮನ ಸೆಳೆದು ...ದೆ, ತನ್ನ ತತ್ ಕ್ಷಣದ, ಅಚಾನಕ್ಕಾದ ಹಾಸ್ಯ ಪ್ರಜ್ಞೆಯ ...ಲಕ ಆ ಸೀರೀಸ್‌ನ ನಿರ್ಮಾಪಕನನ್ನು ಬೆಚ್ಚಿಬೀಳಿಸಿದ್ದ. ...ಲಕ್ಕೆ ಆತ ನಟಿಸಿದ ಟಿವಿ ಸೀರೀಸ್‌ಗಳು ವಿಲಿಯಮ್ಸ್‌ನ ...ಷೆ, ಡೈಲಾಗ್ಸ್, ವಿಚಿತ್ರ ಅಭಿನಯದಿಂದಾಗಿ ...ಪ್ರಂಕ್ತಿಯಲ್ಲಿದ್ದವು.

...ಷ್ಟಕ್ಕೂ ನಿಮಗೆ ಯಾವತ್ತಾದರೂ ಈ ರೀತಿ ...ಿದೆಯೇ? ವಿಲಿಯಮ್ಸ್ ತರಹದ ಪಕ್ಕಾ ಮನರಂಜನೆಗೆ ...ಾದ ವ್ಯಕ್ತಿಗಳ ಹಾಸ್ಯ ಮಾತುಗಳೆಲ್ಲವೂ ಪಕ್ಕಕ್ಕುಳಿದು ... ಬದುಕಿನ ಗಾಂಭೀರ್ಯತೆ, ಆಳದ ಯಾತನೆ, ಮೂಕ ...ನೆ ನಮ್ಮಲ್ಲೆಲ್ಲಾ ಸ್ಥಿತಗೊಳ್ಳುತ್ತದೆ. ನ್ಯೂ ಆರ್ಲೀನ್ಸ್ ...ಲದ ಇವನ ತಾಯಿ ರೂಪದರ್ಶಿಯಾಗಿದ್ದಳು. ಅಪ್ಪ ...ರ್ಡ್ ಮೋಟಾರ್ ಕಂಪನಿಯಲ್ಲಿ ಹಿರಿಯ ಎಕ್ಸಿಕ್ಯುಟಿವ್ ...ಷ್ಠ; ಈ ಅಪ್ಪನ ಮುತ್ತಾತ ಮಿಸಿಸಿಪ್ಪಿಯ ಸೆನೆಟರ್ ...ೂ ಗವರ್ನರ್‌ರಾಗಿದ್ದವನು.

...ವಿಲಿಯಮ್ಸ್ ಡೆಟ್ರಾಯಿಟ್ ಕಂಟ್ರಿ ಡೇ ಸ್ಕೂಲಿನಲ್ಲಿ ... ಆನಂತರದ ದಿನಗಳಲ್ಲಿ ಕಾಲೇಜ್ ಆಫ್ ಮಾರ್ಟಿನ್ ... ರಂಗಭೂಮಿ ಕುರಿತಂತೆ ಓದಲು ಸೇರಿಕೊಂಡ. ... ನಟನೆಯ ಬಗ್ಗೆ ಪ್ರಾಥಮಿಕ ಜ್ಞಾನ ಪಡೆದುಕೊಳ್ಳಲು ...ಗೆ ಸಹಕಾರಿಯಾಯಿತು. ಅಲ್ಲಿಂದ ಮುಂದೆ ಮೇಲೆ ...ಪಿಸಿದಂತಹ ಟಿವಿ ಸೀರೀಸ್ ಸೇರಿದಂತೆ 'ಆಯಾನ್ ...ನಿಂಗ್ ವಿತ್ ರಾಬಿನ್ ವಿಲಿಯಮ್ಸ್', 'ಆಫ್ ದಿ ...ಸ್', 'ರಾಬಿನ್ ವಿಲಿಯಮ್ಸ್: ಲೈವ್ ಆಟ್ ದಿ ...ಜ್' ತರಹದ ಕಾರ್ಯಕ್ರಮಗಳಲ್ಲಿ ಮಿಂಚಿದ. ಮುಂದೆ ...ಮಾಗಳಲ್ಲಿ ಸಲೀಸಾಗಿ ನಟಿಸಿ ಸೈ ಅನ್ನಿಸಿಕೊಂಡ.

...ವಿಲಿಯಮ್ಸ್ ಅಭೂತಪೂರ್ವ ನಟ ಎನ್ನಿಸಿಕೊಳ್ಳಲು ...ಷ್ಟು ಕಾರಣಗಳನ್ನು ಕೊಡಬಹುದು. ಅದ್ಭುತ ...ಭೂಮಿ ಕಲಾವಿದನಾಗಿದ್ದ ವಿಲಿಯಮ್ಸ್ ಪ್ರಥಮಬಾರಿಗೆ ... ಐ ಡು ಇಟ್ ಟಿಲ್ ಐ ನೀಡ್ ಗ್ಲಾಸಸ್' ಮೂಲಕ ...ಡಿಯನ್ನಾಗಿ ಸಿನಿಮಾದಲ್ಲಿ ಕಾಣಿಸಿಕೊಂಡ. ಇನ್ನೊಂದು ... ಚಿತ್ರವಾದ 'ಗುಡ್ ಮಾರ್ನಿಂಗ್, ವಿಯೆಟ್ನಾಂ' ...ಲಕ ತನ್ನ ಹಾಸ್ಯಪ್ರಜ್ಞೆಯನ್ನು ಜಗತ್ತಿಗೆ ಸಾರುವಲ್ಲಿ ...ಸ್ವಿಯಾದ. ಇಷ್ಟರಲ್ಲಾಗಲೇ ಕಾಮಿಡಿಯನ್ ನಟ ಎಂಬ ...ಗೊಳಗಾಗಿದ್ದ ವಿಲಿಯಮ್ಸ್ 1997ರಲ್ಲಿ ತೆರೆ ಕಂಡ 'ಗುಡ್ ವಿಲ್ ಹಂಟಿಂಗ್' ಚಿತ್ರದಲ್ಲಿ ನಟಿಸಿ ಆಸ್ಕರ್ ಗೆದ್ದುಕೊಳ್ಳುತ್ತಾ ಹಾಲಿವುಡ್ ಸಾಂಸ್ಕೃತಿಕ ಜಗತ್ತಿನಲ್ಲಿ ದೊಡ್ಡವ್ಯಕ್ತಿಯಾಗಿ ಪರಿಗಣಿಸಲ್ಪಟ್ಟ. ಅಲ್ಲದೆ ಹಾಲಿವುಡ್ಡಿಗೆ ಒಬ್ಬ ಒಂದು ಹೊಸ ಚೈತನ್ಯವಾಗಿ ಪರಿಣಮಿಸಿ ನಂತರದ ಪೀಳಿಗೆಯ ಉತ್ಸಾಹಕ್ಕೆ ಕಾರಣನಾದ. ಆಷ್ಟೊತ್ತಿಗಾಗಲೇ 'ಮಾಸ್ಕೋ ಆನ್ ದಿ ಹಡ್ಸನ್', 'ಡೆಡ್ ಪೊಯೆಟ್ಸ್ ಸೊಸೈಟಿ', 'ದಿ ಫಿಷರ್ ಕಿಂಗ್', 'ಮಿಸೆಸ್ ಡೌಟ್‌ಫಯರ್', 'ದಿ ಬರ್ಡ್ ಕೇಜ್'- ಮುಂತಾದ ಸಿನಿಮಾಗಳಲ್ಲಿನ ತನ್ನ ಅಭೂತಪೂರ್ವ ನಟನೆಯಿಂದ ವಿಶ್ವದ ಚಿತ್ರಪ್ರೇಮಿಗಳ ಆತ್ಮಗಳಲ್ಲಿ ಇಳಿದುಹೋಗಿದ್ದ.




ಏಕಚಿತ್ತದಿಂದ ಧ್ಯಾನಿಸಿದರೆ ಮನಸ್ಸನ್ನು ಕವಿಯುವುದು ವಿಲಿಯಮ್ಸ್‌ನ ಅದೆಷ್ಟೋ ಚಿತ್ರಗಳು - ಆತ ನಟಿಸಿದ ಮರೆಯಲಾಗದ ಇನ್ನೊಂದಿಷ್ಟು ಸಿನಿಮಾಗಳು. ಆ ಪೈಕಿ 'ಒನ್ ಹವರ್ ಫೋಟೋ', 'ರೋಬೋಟ್ಸ್', 'ಪ್ಯಾಚ್ ಆಡಮ್ಸ್', 'ಬೈಸಂಟೇನಿಯಲ್ ಮ್ಯಾನ್' -ಮುಂತಾದ ಚಿತ್ರಗಳು ಥಟ್ಟನೆ ಹೊಳೆಯುತ್ತವೆ. 'ಪ್ಯಾಚ್ ಆಡಮ್ಸ್'ನ ವಿಲಿಯಮ್ಸ್‌ನ ಚುರುಕುತನ, ನಗಿಸುವ ತಾಕತ್ತು ಮತ್ತು ಸ್ವತಃ ತಾನೇ ಮೆಂಟಲ್ ಇನ್‌ಸ್ಟಿಟ್ಯೂಟೊಂದರಲ್ಲಿ ಸೇರಿಕೊಳ್ಳುವ, ಮೆಡಿಕಲ್ ಡಾಕ್ಟರಾಗಬಯಸುವ ಇಂಗಿತ ಮತ್ತು ಅದರ ಸುತ್ತ ನಡೆಯುವ ಪ್ರಸಂಗಗಳುಂಟುಮಾಡುವ ಗಮ್ಮತ್ತನ್ನು ಚಿತ್ರ ನೋಡಿದವರು ಮರೆಯಲಿಕ್ಕೆ ಸಾಧ್ಯವಿಲ್ಲ. ಜರ್ಮನಿಯ ಜ್ಯೂರೆಕ್ ಬೆಕರನ ಕಾದಂಬರಿಯಾಧಾರಿತ ಚಿತ್ರ 'ಜಾಕೋಬ್ ದಿ ಲೈಯರ್'ನಲ್ಲಿನ ಕರ್ಫ್ಯೂ ರೇಡಿಯೋ ಸುದ್ದಿಯ ಸುತ್ತ ನಡೆಯುವ ವಿಶಿಷ್ಟ ಪಾತ್ರದಲ್ಲಿ ಪ್ರೇಕ್ಷಕರನ್ನು ತುದಿಗಾಲಿನ ಮೇಲೆ ನಿಲ್ಲಿಸಿದ್ದ. 'ಫ್ಲಬ್ಬರ್' ಚಿತ್ರದಲ್ಲಿನ ಕುತೂಹಲಕಾರಿ ಪ್ರೊಫೆಸರ್‌ನ ಪಾತ್ರದಲ್ಲಿ ನೋಡುಗರ ಲೋಕಕ್ಕೆ ಹೊಸದೊಂದು ಆಯಾಮ ಒದಗಿಸುವ ನೈಪುಣ್ಯತೆ ವಿಲಿಯಮ್ಸ್ ಎಂತಹ ಅನನ್ಯ ಕಲಾವಿದ, ಎಷ್ಟು ವೆರೈಟಿಯ ಪಾತ್ರಗಳನ್ನು ನಿಭಾಯಿಸಬಲ್ಲ ಪ್ರತಿಭಾವಂತ ಎಂಬುದನ್ನು ಸಾಬೀತುಮಾಡುತ್ತದೆ.

ಸಾಕಷ್ಟು ಜನಪ್ರಿಯತೆ ಗಳಿಸಿದ್ದ ರಾಬಿನ್ ವಿಲಿಯಮ್ಸ್ ತನ್ನ ಸಾಂಸಾರಿಕ ಬದುಕಿನಲ್ಲಿಯೂ ಕಲರ್‌ಫುಲ್ ಮನುಷ್ಯನಾಗಿದ್ದ. ಈತನ ಮೊದಲನೆಯ ಪತ್ನಿ ಹತ್ತು ವರ್ಷ ಒಟ್ಟಿಗೆ ಬಾಳಿ ಒಬ್ಬ ಮಗನನ್ನು ಹೆತ್ತುಕೊಟ್ಟು ವಿಚ್ಛೇದನ ಪಡೆದು ಬೇರೆಯಾದಳು. ಆನಂತರ ವಿಲಿಯಮ್ಸ್ ಗ್ರೇಸ್ ಎಂಬಾಕೆಯನ್ನು ಮದುವೆಯಾದ. ಒಂಭತ್ತು ವರ್ಷ ಈತನೊಂದಿಗೆ ಸಂಸಾರ ನಡೆಸಿದ ಗ್ರೇಸ್ ಇಬ್ಬರು ಮಕ್ಕಳಿಗೆ ನೀಡಿದ ಆಕೆಯೂ ಬೇರೆಯಾದಳು. ಎರಡನೆಯ ಹೆಂಡತಿ ದೂರವಾದ ಮೇಲೂ ಸುಮ್ಮನಿರದ ವಿಲಿಯಮ್ಸ್ 2011ರಲ್ಲಿ ಸೂಸನ್ ಶ್ನೈಡರ್ ಎಂಬ ಗ್ರಾಫಿಕ್ ಡಿಸೈನರೊಬ್ಬಳನ್ನು ಲಗ್ನವಾದ. ಅವನಿಗಾಗ ಬರೋಬ್ಬರಿ ಅರವತ್ತು ವರ್ಷ ವಯಸ್ಸು.

ಹೀಗೆ ಬದುಕಿನುದ್ದಕ್ಕೂ ಖುಷಿ, ಮೋಜು, ನೋವು, ಖಿನ್ನತೆ, ಬೇಸರ, ಅನಾಥಭಾವ ಎಲ್ಲವನ್ನೂ ಅನುಭವಿಸಿದ್ದ ರಾಬಿನ್ ಮೊನ್ನೆ ತನ್ನ ಅರವತ್ಮೂರನೇ ವಯಸ್ಸಿನಲ್ಲಿ ಗುಟ್ಟಾಗಿ ಹೊರಟುಹೋದ. ಇಂತಹ ವಿಲಿಯಮ್ಸನನ್ನು ಜಗತ್ತು ಯಾಕೆ ಇಷ್ಟು ಇಷ್ಟಪಡುತ್ತದೆ ಎಂದು ಯೋಚಿಸಿದರೆ- ಆತ ಸತ್ತಾಗ ಆತನ ಜೊತೆಗಿದ್ದ ಕೊನೆಯ ಹೆಂಡತಿ ಸೂಸನ್ ಹೀಗೆ ಹೇಳಿದಳು: "ನಾನು ನನ್ನ ಗಂಡ ಮತ್ತು ಬೆಸ್ಟ್ ಫ್ರೆಂಡ್ ಇಬ್ಬರನ್ನೂ ಒಟ್ಟಿಗೇ ಕಳೆದುಕೊಂಡೆ. ಆ ಇಬ್ಬರೂ ಒಬ್ಬನೇ ಆಗಿದ್ದ ನನ್ನ ಸಂಗಾತಿ ವಿಲಿಯಮ್ಸ್ ನಾನಷ್ಟೇ ಅಲ್ಲ ಜಗತ್ತೇ ಕಳೆದುಕೊಂಡ ಒಬ್ಬ ಪ್ರತಿಭಾವಂತ ನಟ ಹಾಗೂ ಮಾನವತ್ವದ ಸಂಕೇತ."

ಅಷ್ಟೇ ಅಲ್ಲ ರಾಬಿನ್ ವಿಲಿಯಮ್ಸ್ ನಿಜಕ್ಕೂ ಹೃದಯವಂತನಾಗಿದ್ದವನು; ಕೆಲವೊಂದು ಚಾರಿಟಿಗಳಿಗಾಗಿ ಸಹಾಯಹಸ್ತ ಚಾಚಿದವನು. ಸೆಂಟ್ ಜ್ಯೂಡ್ ಮಕ್ಕಳ ಆಸ್ಪತ್ರೆಗೆ ಅನೇಕ ವರ್ಷಗಳ ಕಾಲ ಕೈಲಾದ ಸಹಾಯ ಮಾಡಿಕೊಂಡು ಬಂದವನು. ತನ್ನ ನಗಿಸುವ ಕಲೆಯನ್ನು ಬಂಡವಾಳವಾಗಿಟ್ಟುಕೊಂಡು ಕಾರ್ಯಕ್ರಮ ನೀಡಿ ಫಂಡ್ ಸಂಗ್ರಹಿಸಿ ಅದೆಷ್ಟೋ ಅಳುವ ಕಂಗಳನ್ನು ಒರೆಸಿದವನು, ಅದೆಷ್ಟೋ ಹಸಿದವರ ಪಾಲಿಗೆ ಅನ್ನವಾದವನು.



ಇದೆಲ್ಲವನ್ನೂ ಚರ್ಚಿಸಿದ ಬಳಿಕವೂ ರಾಬಿನ್ ವಿಲಿಯಮ್ಸ್ ಬಗ್ಗೆ ಪೂರ್ತಿ ತಿಳಿದುಕೊಂಡಂತಾಗುವುದಿಲ್ಲ. ಬಂಗಾರದ ಮುದ್ದೆಯಂತಿದ್ದ, ಚಂದದ ಕಲಾಕೃತಿಯಂತಿದ್ದ ಈ ಮುದುಕನಲ್ಲಿ ಅಂತಹ ವಿಶೇಷತೆಯೇನು? ಜಗತ್ತೇ ನಕ್ಕುನಲಿಯುವಂತೆ ಮಾಡಿದ ಜಿಮ್ ಕ್ಯಾರಿ, ಸ್ಟೀವ್ ಮಾರ್ಟಿನ್, ಬಿಲ್ ಮರ್ರೆ, ಆಡಂ ಸ್ಯಾಂಡ್ಲರ್, ಜಿಮ್ಮಿ ಫ್ಯಾಲೋನ್, ಡಸ್ಟಿನ್ ಹಾಫ್‌ಮನ್, ಜಾನ್ ಕ್ಯಾಂಡಿ, ಎಡ್ಡಿ ಮರ್ಫಿ, ಮೆಲ್ ಬ್ರೂಕ್ಸ್, ಕೆಲ್ವಿನ್ ಜೇಮ್ಸ್ ತರಹದ ಅನೇಕ ಅಪ್ರತಿಮ ನಟರ ನಡುವೆ ಈ ರಾಬಿನ್ ವಿಲಿಯಮ್ಸ್ ವಿಶೇಷವಾಗಿ ನಿಲ್ಲುವುದರಲ್ಲಿ, ವಿಶಿಷ್ಟವಾಗಿ ಸೆಳೆಯುವುದರಲ್ಲಿ ಅಡಗಿರಬಹುದಾದ ಗುಟ್ಟೇನು? "Comedy is acting out optimism. When in doubt, go for the dick joke" ಎನ್ನುವ ಇವನ ಮಾತಿನಲ್ಲಿ ಇರಬಹುದಾದ ತಮಾಷೆಯೆಷ್ಟು? ಅನುಭವದ ಆಳವೆಷ್ಟು? ಲೋಕಾದ್ಯಂತ ಕಮಲ್ ಹಾಸನ್ ಒಳಗೊಂಡಂತೆ ಅನೇಕರಿಗೆ ಸ್ಫೂರ್ತಿಯಾಗಿದ್ದ, ಮುಕ್ತವಾಗಿ ಬಾಳಿದ, ಮುಖವಾಡದ ಮನಸ್ಥಿತಿಗಳನ್ನು ವಿರೋಧಿಸಿದ, ಡಿಸ್ನಿ ಜಗತ್ತಿಗೆ ಹೊಸ ಹುರುಪು ಮೂಡಿಸಿದ ರಾಬಿನ್ ವಿಲಿಯಮ್ಸ್ ಕಾಮಿಡಿ ಪಾತ್ರಗಳಲ್ಲಿ ಮಿಂಚಿದರೂ ಆಳದಲ್ಲಿ ಗಂಭೀರ ಸ್ವಭಾವದ ವ್ಯಕ್ತಿಯಾಗಿದ್ದ ಅನ್ನುವುದನ್ನು ಇಲ್ಲಿ ಗ್ರಹಿಸಬಹುದು. ಅವನ ನಗಿಸುವ ಮನೋಧರ್ಮದ ಹಿಂದೆ ಖಿನ್ನ ಮನುಷ್ಯನೊಬ್ಬನ ಅವ್ಯಕ್ತ ದುಃಖವೊಂದು ಮಡುಗಟ್ಟಿತ್ತು. ಆ ವ್ಯಕ್ತಪಡಿಸಲಾಗದ, ತೋಡಿಕೊಳ್ಳಲಾಗದ, ಹಂಚಿಕೊಳ್ಳಲಾಗದ ದುಃಖವೇ ಮುಂದೊಂದು ದಿನ ತೀವ್ರವಾಗಿ ಹೆಪ್ಪುಗಟ್ಟಿ ಆತನ ಆತ್ಮಹತ್ಯೆಯಲ್ಲಿ ಬದಿಸದ ಒಗಟಾಗಿ ಉಳಿದುಹೋಗಿರಬಹುದು ಅಲ್ಲವೇ?

■ ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 27-08-2014 RNI No. KARKAN2005/146



ಸಂಗೀತದ ಬಗೆಗಿನ ಪ್ರಜ್ಞೆ ಇರಬೇಕೆಂಬುದು. ಇಷ್ಟಕ್ಕೂ ಮೋಹಿತ್ ಎನ್ನುವ ಆ ಹುಡುಗ ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಓದಿಕೊಂಡಿದ್ದರೆ, ಕವಿತೆಯ ಅಥವಾ ಚಿತ್ರಸಾಹಿತ್ಯದ ರಚನೆಯ ಹಿಂದಿರುವ ಸವಾಲು, ಶ್ರಮದ ಬಗ್ಗೆ ಅರಿವಿದ್ದಿದ್ದರೆ ಆತ ಕವಿರಾಜ್ ಕರೆಸಿ ಅವರ ಸಮಯ, ಶಕ್ತಿಯನ್ನು ಹಾಳು ಮಾಡುವುದಾಗಲೀ, ಹಾಗೆಯೇ ತಮ್ಮ ಹಾಡಿಗಿದ್ದ ಮತ್ತೊಬ್ಬ ಸಾಹಿತಿಯನ್ನು ಕರೆಸಿ ಅವರ ಸಮಯ, ಎನರ್ಜಿಯನ್ನಿ ಪೋಲು ಮಾಡುವುದಾಗಲೀ ಆಗುತ್ತಿರಲಿಲ್ಲ.

ವಿಶೇಷವಾಗಿ 'ಬೆನ್ನು ಕೆರಿ ಬಾ' ಎಂಬ ಕೆಳಮಟ್ಟದ, ತೀರಾ ಬಾಲಿಶತನದ ಸಿಚುವೇಷನ್ನು ಸೃಷ್ಟಿಸುತ್ತಿರಲಿಲ್ಲ, ಇನ್ನಾದರೂ ಮೋಹಿತ್ ತರಹದ ಅರೆಬೆಂದ, ತಾನು ಭಾವಿಸಿದ್ದೇ ರೈಟು, ನಿರ್ಮಾಪಕರನ್ನು ಹಿಡಿದ ಮಾತ್ರಕ್ಕೆ ತಾನೊಬ್ಬ ಮಹಾನ್ ನಿರ್ದೇಶಕನಾಗಿಬಿಟ್ಟೆ ಅನ್ನುವ ಭ್ರಮೆಯಲ್ಲಿರುವ ಮೋಹಿತ್ ತರಹದ ಬಾಲಕರು ಕನ್ನಡ ಚಿತ್ರಸಾಹಿತ್ಯವನ್ನು ಶ್ರದ್ಧೆಯಿಂದ ಓದಿಕೊಳ್ಳಲಿ. ಕಳೆದೊಂದು ದಶಕದಿಂದ ಚಿತ್ರರಂಗಕ್ಕೆ ತನ್ನದೇ ಕೊಡುಗೆ ನೀಡಿರುವ ಕವಿರಾಜ್ ತರಹದವರ ಸಾಲುಗಳಿಗೆ ಗೌರವ ನೀಡಲಿ, ಅಲ್ಲವೇ?



ರಾಮು ಮತ್ತೆ ಅಖಾಡಕ್ಕೆ

'ಎ.ಕೆ.47' ತರಹದ ಅದ್ದೂರಿ ಚಿತ್ರವನ್ನು ನಿರ್ಮಿಸಿ ಕನ್ನಡ ಚಿತ್ರರಂಗದ ಹೆಗ್ಗಳಿಕೆಗೆ ಪಾತ್ರರಾಗಿದ್ದ ರಾಮು ಆನಂತರದ ದಿನಗಳಲ್ಲಿ 'ಕೋಟಿ ರಾಮು' ಅಂತಲೇ ಹೆಸರಾಗಿದ್ದು ನಿಮಗೆಲ್ಲ ಗೊತ್ತು. ಇಂತಹ ರಾಮು ಆಮೇಲೆ ಅಲ್ಲೊಂದು ಇಲ್ಲೊಂದು ಹಿಟ್ ಚಿತ್ರಗಳನ್ನು ನಿರ್ಮಿಸಿದ್ದು ಬಿಟ್ಟರೆ ಹೆಚ್ಚಾಗಿ ಮಡದಿ ಮಾಲಾಶ್ರೀಯವರಿಗೆ ಒಂದಿಷ್ಟು ಚಿತ್ರಗಳನ್ನು ಮಾಡಿ ಕೈಸುಟ್ಟಿಕೊಂಡಿದ್ದರು. ಈಗ 'ಎ.ಕೆ.47' ಚಿತ್ರಕ್ಕೆ ಸ್ಕ್ರಿಪ್ಟ್ ಬರೆದಿದ್ದ ಎಸ್.ಆರ್.ಬ್ರದರ್ಸ್‌ರಲ್ಲಿ ಒಬ್ಬರಾದ ರಮೇಶ್ ನಿರ್ದೇಶನದ 'ಮುಂಬೈ' ಚಿತ್ರಕ್ಕೆ ರಾಮು ಹಣ ಹಾಕುತ್ತಿದ್ದಾರೆ. ಹಾಗೆ ನೋಡಿದರೆ ಈ ಚಿತ್ರದಲ್ಲಿ ಶಿವರಾಜಕುಮಾರ್ ಅಥವಾ ಪುನೀತ್ ರಾಜಕುಮಾರ್ ಅಭಿನಯಿಸಬೇಕಿತ್ತು. ಇವರಿಬ್ಬರೂ ತಕ್ಷಣಕ್ಕೆ ಬ್ಯುಸಿ ಇರುವ ಕಾರಣದಿಂದ 'ಮದರಂಗಿ'ಯಲ್ಲಿ ನಟಿಸಿದ್ದ ಕೃಷ ಈಗ 'ಮುಂಬೈ' ಚಿತ್ರದ ನಾಯಕ. ಈ ಚಿತ್ರಕ್ಕೆ ಶ್ರೀಧರ್ ಸಂಭ್ರಮ್ ಸಂಗೀತ ನೀಡುತ್ತಿದ್ದು, ರವಿಶಂಕರ್, ಆಶಿಶ್ ವಿದ್ಯಾರ್ಥಿ, ರಂಗಾಯಣ ರಘು ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಚಿತ್ರದ ಚಿತ್ರೀಕರಣ ಸೆಪ್ಟಂಬರ್ ತಿಂಗಳಿನಲ್ಲಿ ಶುರುವಾಗಲಿದೆಯಂತೆ.

ಬೆನ್ನು ಕೆರಿ ಬಾರೆ... ಅಂತಾನೆ ಹೀರೋ

ಯಾರಿಗೂ ಗೊತ್ತಿಲ್ಲದ 'ಸೋಡಾಬುಡ್ಡಿ' ಎಂಬ ಚಿತ್ರದ ನಿರ್ದೇಶಕ ಮೋಹಿತ್ ಎನ್ನುವ ಹುಡುಗ ತನ್ನ ಚಿತ್ರದ ಟ್ಯೂನುಗಳು ರೆಡಿಯಾದ ಬಳಿಕ ಅವುಗಳಿಗೆ ಸಾಹಿತ್ಯ ಬರೆಸಲೆಂದು ಗೀತಸಾಹಿತಿ ಕವಿರಾಜ್‌ರನ್ನು ಕರೆದಿದ್ದಾರೆ. ಕವಿರಾಜ್ ಬರೆಯುವುದಾಗಿ ಒಪ್ಪಿಕೊಂಡು ಒಂದು ವರ್ಶನ್ ಬರೆದು ತೋರಿಸಿದ್ದಾರೆ. ಅದನ್ನು ಇಷ್ಟಪಡದ ಮೋಹಿತ್ ಮತ್ತೆ ಕವಿರಾಜ್ ಕೈಲಿ ಇನ್ನೆರಡು ವರ್ಶನ್ ಬರೆಸಿದ್ದಾರೆ. ಅವುಗಳನ್ನೂ ಮೋಹಿತ್ ಒಪ್ಪಲಿಲ್ಲ, ಆಗ ನೂರಾರು ಚಿತ್ರಗಳಿಗೆ ಹಾಡು ಬರೆದ ಅನುಭವವಿರುವ, ಅನೇಕ ಹಿಟ್ ಗೀತೆಗಳನ್ನು ಕೊಟ್ಟ ಕವಿರಾಜ್ ಸಹಜವಾಗಿಯೇ "ಯಾಕೆ ಇಷ್ಟವಾಗಲಿಲ್ಲ?" ಎಂದು ಕೇಳಿದ್ದಾರೆ. ಅದಕ್ಕೆ ಅದೆಂತಹದ್ದೋ ಉತ್ತರ ಕೊಟ್ಟ ಮೋಹಿತ್ ಅಲ್ಲಿಗೆ ಸುಮ್ಮನಾಗದ ಕನ್ನಡದ ಮತ್ತೊಬ್ಬ ಪ್ರಮುಖ ಚಿತ್ರಸಾಹಿತಿಯನ್ನು ಕರೆದು 'ಹಾಡು ಬರೆದು ಕೊಡಿ' ಅಂತ ಹೇಳಿ ಕವಿರಾಜ್‌ಗೆ ಕೊಟ್ಟಿದ್ದಂತಹ ಟ್ಯೂನನ್ನೇ ಕೊಟ್ಟಿದ್ದಾನೆ.

ಆ ಗೀತರಚನಾಕಾರ ಕೂಡ ಬರೆದಾದ ಮೇಲೆ ಅದೂ ಈ ಮೋಹಿತ್‌ಗೆ ಇಷ್ಟವಾಗಿಲ್ಲ, ಅವರೂ 'ಯಾಕೆ ಇಷ್ಟವಾಗಲಿಲ್ಲ? ನಿಮಗೆ ಸ್ಪಷ್ಟವಾಗಿ ಏನು ಬೇಕು?' ಎಂದು ಕೇಳಿದಾಗ ಈ ಮೋಹಿಸ್ ಹೇಳಿದ ಮಾತು ಹೀಗಿದೆ: "ಈ ಹಾಡಿನ ಸಿಚುಯೇಶನ್ ಹೀಗಿದೆ: ನನ್ನ ಸಿನಿಮಾದ ಹೀರೋ ಮತ್ತು ಹೀರೋಯಿನ್ ಅಕ್ಕಪಕ್ಕದ ಈ ಪ್ರಕರಣದಿಂದ ಎಲ್ಲರೂ ಅರಿಯಬೇಕಾದುದು ಏನೆಂದರೆ, ಒಬ್ಬ ನಿರ್ದೇಶಕನಿಗೆ ಸಿನಿಮಾದ ಬಹುಮುಖ್ಯ ವಿಭಾಗಗಳಲ್ಲಿ ಎರಡಾದ ಸಾಹಿತ್ಯ ಮತ್ತು



ಅಭಿನೇತ್ರಿ ಪೂಜಾ ಗಾಂಧಿ


ಸದ್ಯದಲ್ಲೇ 'ಸಿಗರೇಟ್' ಹಾಡುಗ

ಸದ್ಯದಲ್ಲೇ ಲಕ್ಕಿ ಶಂಕರ್ ನಿರ್ದೇಶನದ 'ಸಿಗರೇಟ್' ಸಿನಿಮಾದ ಹಾಡ
ಬಿಡುಗಡೆಗೊಳ್ಳಲಿವೆ. ಈ ಚಿತ್ರಕ್ಕೆ ಇಂದ್ರಸೇನ ಎಂಬುವವರು ಸಂಗೀತ ನೀ
'ಶ್ವಾಸಕೋಶ ಸರ್ವನಾಶ', 'ಒಂದು ಮನಸು ಇನ್ನೊಂದು ಮನಸು'
ಹಾಡುಗಳು ಚೆನ್ನಾಗಿ ಮೂಡಿಬಂದಿವೆ ಎಂಬುದು ಕೇಳಿದವರ ಮ
ಈಗಾಗಲೇ ಕೆಲವೊಂದು ಆಡಿಯೋ ಕಂಪನಿಯವರು ಹಾಡುಗಳನ್ನು
ಇಷ್ಟಪಟ್ಟಿದ್ದು ಸದ್ಯದಲ್ಲೇ ಯಾವುದಾದರೊಂದು ಆಡಿಯೋ ಕಂಪನಿ ಮ
ಈ ಹಾಡುಗಳು ಹೊರಬರುವ ಲಕ್ಷಣಗಳಿವೆ.

ಈ ಹಿಂದೆ 'ಬಾಯ್ ಫ್ರೆಂಡ್' ಎಂಬ ಚಿತ್ರಕ್ಕೆ ಸಂಗೀತ ನೀಡಿ 'ಹ
ಬಾಯ್ ಅನ್ನೋನು ಬೆಸ್ಟ್ ಫ್ರೆಂಡ್ ಕಣೇ' ಹಾಗೂ 'ಚಂದಿರ ಚಂದಿರ'
ಹಿಟ್ ಹಾಡುಗಳನ್ನು ಇಂದ್ರಸೇನ ಅವರು ಕೊಟ್ಟಿದ್ದರೂ ಅದ್ಯಾಕೋ ಅ
ಅವರು ಎಲ್ಲೂ ಸುದ್ದಿ ಮಾಡಿರಲಿಲ್ಲ, ಹಂಸಲೇಖಾ ಬಳಿ ಶಿಷ್ಯರಾಗಿ ಪಳಗಿ
ಇಂದ್ರಸೇನ ಈ ಬಾರಿ 'ಸಿಗರೇಟ್' ಹಾಡುಗಳ ಮೇಲೆ ಭ
ಇಟ್ಟುಕೊಂಡಿದ್ದಾರೆ.

'ಬಹದ್ದೂರ್'ಗೆ ಅಪ್ಪು ವಾಯ

ಚೇತನ್ ಕುಮಾರ್ ಎಂಬ ಯುವಕ ನಿರ್ದೇಶಿಸುತ್ತಿ
'ಬಹದ್ದೂರ್' ಚಿತ್ರಕ್ಕೆ ಪುನೀತ್ ಧ್ವನಿ ನೀಡುತ್ತಿದ್ದಾರೆ. ಈವರೆಗೆ
ಚಿತ್ರಗಳಿಗೆ ಹಾಗೂ ಶಿವಣ್ಣನ ಚಿತ್ರಗಳಿಗೆ ಹಾಡುಗಳನ್ನು ಹಾ
ಪುನೀತ್ ಈ ಬಾರಿ ಧ್ವನಿ ನೀಡುತ್ತಿರುವುದು ವಿಶೇಷ. "ಪು
ಓರ್ವ ಯೂತ್ ಐಕಾನ್. ಅವರ ಮೇಲೆ ಅನೇಕ ಯುವ
ಅಭಿಮಾನವಿದೆ. ಆ ಕಾರಣಕ್ಕೆ ಅವರಿಂದಲೇ ನಮ್ಮ ಚಿತ್ರಕ್ಕೆ
ಪಡೆದುಕೊಂಡೆವು" ಎಂಬುದು ಚೇತನ್ ಅಭಿಪ್ರಾಯ.



ಚಿತ್ರದ ಆರಂಭದಲ್ಲಿ, ಇಂಟರ್‌ವೆಲ್‌ನಲ್ಲಿ ಹಾಗೂ ಕ್ಲೈಮ್ಯಾಕ್ಸ್‌ನಲ್ಲಿ ಪುನೀತ್ ಅವರ ಧ್ವನಿ ಇರುತ್ತದಂತೆ. ಇಷ್ಟಕ್ಕೂ ಹೆಸರಿರುವ ನಟರನ್ನು ಕರೆದು ಗೆಸ್ಟ್ ಅಪಿಯರೆನ್ಸ್ ಹೆಸರಿನಲ್ಲೋ, ಹಾಡಿನಲ್ಲೋ, ಕೆಲವು ದೃಶ್ಯಗಳಲ್ಲೋ ಅವರ ಜನಪ್ರಿಯತೆಯನ್ನು ಬಳಸಿಕೊಳ್ಳುವುದು ಮೊದಲಿನಿಂದಲೂ ಬಂದಿರುವ ವಿಚಾರ. ಈ ತರಹದ ಗಿಮಿಕ್
ಎಷ್ಟೋ ಸಲ ವರ್ಕೌಟ್ ಆಗಿರುವುದೂ ಉಂಟು.

ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ಚಿತ್ರದ ಕಥೆ, ಅ
ಸ್ಕ್ರಿಪ್ಟ್ ಮತ್ತು ಚಿತ್ರದ ಎಲ್ಲ ವಿಭಾಗಗಳಲ್ಲಿನ ಪಕ್ವತೆ, ಎ
ಒಂದೆಡೆ ಸೇರಿ ಪರದೆ ಮೇಲೆ ಮೂಡಿದಾಗ ಪ
ಚಿತ್ರವೊಂದರ ಗೆಲುವಿಗೆ ದಾರಿಯಾಗುತ್ತದೆ ಎಂಬು
ಚೇತನ್ ಅರಿತರೆ ಒಳ್ಳೆಯದು. ಪುನೀತ್ ವಾಯ್ಸ್
ಪ್ಲಸ್ಸಾಗುವುದಾದರೆ ಒಳ್ಳೇದೆ ಅಲ್ವಾ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com